UNIVERSAL LIBRARY
OU_198645
UNIVERSAL LIBRARY

# ಚೀನಾದೇಶದ ಗಾಂಧಿ

ಎಂಬ

## ಚೀನಾದೇಶದ ಋಷಿಕಲ್ಪನಾದ ಕಾಂಫೂಷನ
## ಒಂದುನೂರ ಎಪ್ಪತ್ತನಾಲ್ಕು ವಚನಗಳ
## ಸಂಗ್ರಹ

ಕಾಂಫೂಷನ ವಚನಗಳನ್ನು
ಆಯ್ದು, ಅನುವಾದ ಮಾಡಿ, ಪ್ರಕಟಿಸಿದ್ದು:

**ಜಿ. ಪಿ. ರಾಜರತ್ನಂ**

**"ಶಾಕ್ಯ ಸಾಹಿತ್ಯ ಮಂಟಪ"**
ಮಲ್ಲೇಶ್ವರ, ಬೆಂಗಳೂರು

೧೯೪೫] [೧೨ ಆಣೆ.

ಮುದ್ರಿಸಿದವರು:
**ಬಿ. ಬಿ. ಡಿ. ಪವರ್ ಪ್ರೆಸ್**
ಅರಳೇಪೇಟೆ, ಬೆಂಗಳೂರು ನಗರ

## ಅ ರಿ ಕೆ

ಈ ಪುಸ್ತಕದಲ್ಲಿ ಅಡಕವಾಗಿರುವ

೧. ಕಾಂಫೂಷನ ವಚನಗಳು
೨ ಕಾಂಫೂಷ ವಚನಸಂಗ್ರಹ
೩. ಅಧಿಮಾನವ ಕಾಂಫೂಷ ಮತ್ತು
೪. ಧರ್ಮಸಂಸ್ಥಾಪನಾರ್ಥಾಯ . .

ಎಂಬ ನಾಲ್ಕು ಲೇಖನಗಳೂ '**ಜೀವನ**' ಮಾಸ ಪತ್ರಿಕೆಯಲ್ಲಿ ಮೊದಲು ಪ್ರಕಟವಾದುದಕ್ಕಾಗಿ ನಾನು ಆ ಪತ್ರಿಕೆಯ ಸಂಪಾದಕರಿಗೆ ಕೃತಜ್ಞನಾಗಿದ್ದೇನೆ.

---

ಮಾರಾಟಗಾರರು.
**ಸತ್ಯಶೋಧನ ಪುಸ್ತಕ ಭಂಡಾರ**
ಕೋಟೆ, ಬೆಂಗಳೂರು

ಚೀನಾದೇಶದ
ಋಷಿಕಲ್ಪನಾದ ಕಾಂಫ್ಯೂಷನ
ನೂರ ಎಪ್ಪತ್ತನಾಲ್ಕು ವಚನಗಳ
ಈ ಸಂಗ್ರಹವನ್ನು

**ಗಾಂಧೀಜಿಯ**

**ಎಪ್ಪತ್ತೇಳನೆಯ**

**ಹುಟ್ಟಿದ ಹಬ್ಬದ ದಿವಸ**

**(೨—೧೦—೪೫)**

'ಶಾಕ್ಯಸಾಹಿತ್ಯ ಮಂಟಪ'ವು
ಭಕ್ತಿಯಿಂದ ಪ್ರಕಟಿಸಿದೆ.

## 'ಶಾಕ್ಯಸಾಹಿತ್ಯ ಮಂಟಪದ ಇತರ ಪ್ರಕಟನೆಗಳು

ಬುದ್ಧವಚನ ಪರಿಚಯ

ಮಿಲಿಂದ ಪ್ರಶ್ನೆ

ಪಾಲಿ ಪಜ್ಜ ಪುಷ್ಪಂಜಲಿ

ವೈಶಾಖ ಶುಕ್ಲ ಪೂರ್ಣಿಮಾ

ಬುದ್ಧನ ಕತೆಗಳು

ಜಾತಕ ಕತೆಗಳು

ಧರ್ಮಪದ

ಮಹಾವೀರನ ಮಾತುಕತೆ

ಭಗವಾನ್ ಮಹಾವೀರ

ಶ್ರೀ ಗೋಮಟೇಶ್ವರ

ಪಾರ್ಶ್ವನಾಥ ಚಂಪೂ

ಗಾಂಧೀಶಕ್ತಿಯ ಮೂಲ

**ಸತ್ಯಶೋಧನ ಪುಸ್ತಕ ಭಂಡಾರ**

**ಕೋಟೆ, ಬೆಂಗಳೂರು**

## " ಚೀನಾದೇಶದ ಗಾಂಧಿ "

ಸ್ವದೇಶದ ಪುರಾಣ ಇತಿಹಾಸ ಚರಿತ್ರೆಗಳನ್ನು ಚೆನ್ನಾಗಿ ತಿಳಿದ ಅನಂತರ ಅನ್ಯದೇಶದ ವಿಷಯಗಳನ್ನು ತಿಳಿದು ಹೋಲಿಸತೊಡಗಿದ ಪಾಶ್ಚಾತ್ಯ ಪಂಡಿತರ ಕಣ್ಣಿಗೆ ನಮ್ಮ ಕಾಳಿದಾಸ **"ಭರತಖಂಡದ ಷೇಕ್ಸ್ಪಿಯರ್"** ಆದ, ನಮ್ಮ ಅಶೋಕ ಚಕ್ರವರ್ತಿ **"ಭರತ ಖಂಡದ ಛಾರ್ಲ್‌ಮೇನ್"** ಆದ, ನಮ್ಮ ದಿಗ್ವಿಜೇತ ಸಮುದ್ರಗುಪ್ತ ಸಮ್ರಾಜ **"ಭರತಖಂಡದ ನೆಪೋಲಿಯನ್"** ಆದ. ಅಪರಿಚಿತವಾದುದನ್ನು ಪರಿಚಿತ ವಾದುದಕ್ಕೆ ಹೋಲಿಸಿ ಹೆಸರಿಟ್ಟು, ಆ ಮೂಲಕ ಅಪರಿಚಿತವಾದುದನ್ನು ಹತ್ತಿರಮಾಡಿಕೊಳ್ಳುವುದೂ ಆಕರ್ಷಕ ವಾಗಿ ಮಾಡಿಕೊಳ್ಳುವುದೂ ಬಹು ಕಾಲದಿಂದ ಬಳಕೆಯಲ್ಲಿರುವ ಒಂದು ಸುಲಭವಾದ ಸಾಧನ.

ಅದೇ ಸಾಧನವನ್ನೇ ನಾನೂ ಇಲ್ಲಿ ಬಳಸಿಕೊಂಡಿದ್ದೇನೆ. ನಮ್ಮ ದೇಶದಲ್ಲಿ ಈಗ ಹೊಸ ಯುಗವನ್ನೇ ಆರಂಭಿಸಿದ **ಗಾಂಧೀಜಿ**ಯವರ ನಡೆನುಡಿಗಳನ್ನು ಬಲ್ಲವರು ಆ ಬಳಿಕ ಚೀನಾದೇಶದಲ್ಲಿ, ಕ್ರಿಸ್ತ ಪೂರ್ವ ಆರನೆಯ ಶತಮಾನದಲ್ಲಿ, ಹೊಸಯುಗವನ್ನು ಆರಂಭಿಸಿ, ಚೀನದ ಜನತೆಯನ್ನು ಧರ್ಮಪಥದಲ್ಲಿ ತಂದು ನಿಲ್ಲಿಸಿ ಉದ್ಧಾರಮಾಡಿದ **ಕಾಂಫ್ಯೂಷನ** ನಡೆನುಡಿಗಳನ್ನು ನೋಡಿದರೆ—ಅಪರಿಚಿತನಾದ ಚೀನಾದೇಶದ ಕಾಂಫ್ಯೂಷನನ್ನು ನಮಗೆ ಪರಿಚಿತರಾದ ಗಾಂಧಿಯವರೊಡನೆ ಹೋಲಿಸಿಕೊಂಡು, ಆತನನ್ನು **" ಚೀನಾದೇಶದ**

**ಗಾಂಧಿ** ” ಎಂದು ಕರೆದರೆ, ಅದು ತುಂಬ ಸಮಂಜಸವಾದದ್ದೇ ಎನ್ನಿಸುತ್ತದೆ.

ಈ ಪುಸ್ತಕದಲ್ಲಿ ಆತನ ವ್ಯಕ್ತಿತ್ವವನ್ನು ಚಿತ್ರಿಸುವ ಕೆಲವು ಸಂವಾದಗಳೂ, ಲಘು ಆಖ್ಯಾನಗಳೂ, ಕಿರು ವರ್ಣನೆಗಳೂ ಇವೆ; ಆತನ ಬೋಧೆಯ ಸ್ವರೂಪವನ್ನು ಸೂತ್ರರೂಪವಾಗಿ ನಿರೂಪಿಸಿರುವ ಕೆಲವು ಚಾಟುಗಳೂ ಇವೆ; ಆತನ ಜೀವನದ ಪರಮೋದ್ದೇಶವಾದ ಸದ್ರಾಜ್ಯಸಂಸ್ಥಾಪನೆಯನ್ನು ಕುರಿತ ವಚನಗಳೂ ಇವೆ; ಆಯಾ ವಚನಗಳ ಪ್ರವೇಶಕ್ಕೂ ಪ್ರಥಮ ಪರಿಚಯಕ್ಕೂ ಅಗತ್ಯವಾದ ನಾಲ್ಕಾರು ಮುನ್ನುಡಿಯ ಮಾತುಗಳನ್ನೂ ಅಲ್ಲಲ್ಲೆ ಸೇರಿಸಿದ್ದೇನೆ.

ಧರ್ಮಕಥೆಗಳಲ್ಲಿ ಅಭಿರುಚಿ ಆಸಕ್ತಿಗಳಿರುವವರಿಗೆ ಈ ಕಾಂಫೂಷ ವಚನ ಸಂಗ್ರಹ ತೃಪ್ತಿಕೊಟ್ಟೀತೆಂದು ನಂಬಿದ್ದೇನೆ.

**ಜಿ. ಪಿ. ರಾಜರತ್ನಂ.**

# ಕಾಂಫ್ಯೂಷನ ಜೀವನದಲ್ಲಿ ಕೆಲವು ಮುಖ್ಯವಾದ ಹೆಜ್ಜೆಗಳು

ಕ್ರಿಸ್ತಪೂರ್ವ

೫೫೧ **ಕಾಂಫ್ಯೂಷನ ಜನನ**

೫೪೯ ತಂದೆಯ ಮರಣ

೫೩೨ ಮದುವೆ. ಅಧಿಕಾರ ಸಂಪಾದನೆ

೫೩೦ ಶಿಷ್ಯರಿಗೆ ಬೋಧಿಸಲು ಆರಂಭ

೫೨೭ ತಾಯಿಯ ಮರಣ

೫೧೭ ತನ್ನ ಅರಸನ ಹಿಂದೆ ದೇಶಭ್ರಷ್ಟನಾದುದು

೫೧೬ ಲು ಸಂಸ್ಥಾನಕ್ಕೆ ಹಿಂದಿರುಗಿದ್ದು. **ಹದಿನೈದು ವರುಷ ಅಧಿಕಾರಭ್ರಷ್ಟ**ನಾದರೂ, ಶಿಷ್ಯರಿಗೆ ಬೋಧಿಸುತ್ತಿದ್ದುದು.

೫೦೧ ಛುಂಗ್ ತು ಎಂಬಲ್ಲಿ ನ್ಯಾಯಾಧಿಕಾರಿಯಾದುದು

೪೯೮ ಮುಖ್ಯ ಅಮಾತ್ಯನಾದುದು

೪೯೬ ಅರಸನ ನಡೆವಳಿ ಮನಸ್ಸಿಗೆ ಬಾರದೆ **ಅಧಿಕಾರತ್ಯಾಗ** ಮಾಡಿದ್ದು. **ಹದ್ನಿಮೂರು ವರುಷ ಕಾಲ ದೇಶಭ್ರಷ್ಟನಾದುದು.** ಶಿಷ್ಯರನ್ನು ಸಂಪಾದಿಸಿ, ಅವರಿಗೆ ಶಿಕ್ಷಣಕೊಡುತ್ತಿದ್ದುದು.

೪೮೩ ತನ್ನ ಎಪ್ಪತ್ತೆಂಟನೆಯ ವಯಸ್ಸಿನಲ್ಲಿ ಲು ಸಂಸ್ಥಾನಕ್ಕೆ ಕರೆಯಿಸಿಕೊಳ್ಳಲ್ಪಟ್ಟಿದ್ದು.

೪೮೧ ವಿದ್ಯಾಪ್ರಿಯ ಶಿಷ್ಯನಾದ **ಯೆನ್ ಹುಯಿ** ಸತ್ತದ್ದು

೪೮೦ ವೀರಪ್ರಿಯ ಶಿಷ್ಯನಾದ **ಸು ಲು** ಸತ್ತದ್ದು.

೪೭೯ **ಕಾಂಫ್ಯೂಷನ ಮರಣ.**

# ಒಳಪಿಡಿ


೧ ಕಾಂಫ್ಯೂಷನ ವಚನಗಳು

ಚೀನದ ಚಿರಜ್ಯೋತಿ .... .... ೧

ವಚನಗಳನ್ನು ಓದುವ ರೀತಿ.... .... ೨

**ಕಾಂಫ್ಯೂಷನ ವ್ಯಕ್ತಿಚಿತ್ರ (ವಚನ ೧-೩೭)** ೪

೨ ಕಾಂಫ್ಯೂಷ ವಚನ ಸಂಗ್ರಹ

'ಲುನ್-ಯು' ಎಂಬ ಗ್ರಂಥ.... .... ೧೯

ವಚನಗಳನ್ನು ಓದುವ ರೀತಿ .... ೨೧

**ಕಾಂಫ್ಯೂಷನ-ವ್ಯಕ್ತಿಚಿತ್ರ (ವಚನ ೩೮-೭೬)** ೨೨

೩ ಅಧಿಮಾನವ ಕಾಂಫ್ಯೂಷ

ಕಾಂಫ್ಯೂಷನ ನಡೆವಳಿ .... .... ೪೨

**ಕಾಂಫ್ಯೂಷನ ನಡೆವಳಿ (ವಚನ ೭೭-೧೦೩)** ೪೩

ಕಾಂಫ್ಯೂಷನ ಚಾಟುಗಳು .... .... ೫೩

**ಕಾಂಫ್ಯೂಷನ ಚಾಟುಗಳು (ವಚನ ೧೦೪-೧೫೦)** .... ೫೪

೪ ಧರ್ಮಸಂಸ್ಥಾಪನಾರ್ಥಾಯ . . .

ಮರದ ಬುಡದ ಭದ್ರತೆ .... .... ೬೨

**ಕಾಂಫ್ಯೂಷನ ಆಡಳಿತ ಪದ್ಧತಿ (ವಚನ ೧೫೧-೧೭೪)** .... ೬೬

# ಕಾಂಫ್ಯೂಷನ ವಚನಗಳು

## ಚೀನದ ಚಿರಜ್ಯೋತಿ

ಕ್ರಿ. ಪೂ ಆರನೆಯ ಶತಮಾನದಲ್ಲಿ, ಭಗವಂತನಾದ ಮಹಾವೀರನೂ ಭಗವಾನ್ ಬುದ್ಧಗುರುವೂ ಭರತಭೂಮಿಯಲ್ಲಿ ಸತ್ಯಧರ್ಮಪ್ರವರ್ತನವನ್ನು ನಡಸುತ್ತಿದ್ದಾಗ ದೂರದ ಚೀನಾದೇಶದಲ್ಲಿ **ಕಾಂಫ್ಯೂಷೆ** ಎಂಬ ಮಹಾಪುರುಷನೂ, **ಲಾಒಷೆ** ಎಂಬ ಮಹಾಜ್ಞಾನಿಯೂ ಅದೇ ಕಾರ್ಯದಲ್ಲಿ ನಿರತರಾಗಿದ್ದರು. ಇಂದು, ಎರಡೂವರೆಸಾವಿರ ವರ್ಷಗಳ ಅನಂತರ ಕೂಡ, ಮಹಾವೀರನ ಹಾಗೂ ಬುದ್ಧನ ಬೋಧೆಗಳು ನಮ್ಮ ಜನಜೀವನದಲ್ಲಿ, ಅಂತರ್ಗತವಾಗಿರುವಂತೆ ಚೀನದ ಜನಜೀವನದಲ್ಲಿ, ಪರದೇಶದ ಇತರ ಮತಗಳೂ ದೃಷ್ಟಿಗಳೂ ಎಷ್ಟು ಬಂದು ಬೆರೆತರೂ, ಕಾಂಫ್ಯೂಷನ ಬೋಧೆಯಲ್ಲಿನ ಬಹ್ವಂಶ ದೇಶಕಾಲಾತೀತವಾಗಿ ಹೊಕ್ಕು ಹರಿಯುತ್ತಿದೆ.

ಜೈನ ಮತ್ತು ಬೌದ್ಧಸಾಹಿತ್ಯಗಳಂತೆ ಕಾಂಫ್ಯೂಷಸಾಹಿತ್ಯವೂ ವಿಸ್ತಾರವಾಗಿದೆ. ಮಹಾವೀರನ ಶ್ರಮಣಸಂಘವೂ ಬುದ್ಧನ ಭಿಕ್ಷುಸಂಘವೂ ಆಯಾ ಗುರುವಾಣಿಗಳನ್ನು ಉಳಿಸಿಕೊಂಡು, ತಮ್ಮ ತಮ್ಮ ದೃಷ್ಟಿಯ ಪ್ರಕಾರ ಬೆಳೆಸಿಕೊಂಡು ಬಂದಿರುವಂತೆಯೇ ಕಾಂಫ್ಯೂಷಸಾಹಿತ್ಯವಾದರೂ ಉಳಿದು, ಬೆಳೆದು ಬಂದಿದೆ.

ಕಾಂಫ್ಯೂಷನ ಜೀವನ ಚರಿತ್ರೆಯನ್ನು ಕುರಿತು ದಿವಂಗತ ಎಂ. ಎಸ್. ಪುಟ್ಟಣ್ಣನವರು ೧೯೧೨ ರಲ್ಲಿ

"**ಚೀನಾರಾಜ್ಯದ ಮಹಾಪುರುಷನಾದ ಕಾಂಫ್ಯೂಷನ ಚರಿತ್ರೆ**" ಎಂಬ ೭೨ ಪುಟಗಳ ಪುಟ್ಟಪುಸ್ತಕ ಬರೆದರು. ೧೯೨೧ರಲ್ಲಿ ಇದರ ಎರಡನೆಯ ಮುದ್ರಣ ಬಂದು, ಪ್ರತಿಗಳು ಇನ್ನೂ ಇಪ್ಪತ್ತೈದು ವರುಷವಾದ ಮೇಲೂ ಮಾರುಕಟ್ಟೆಯಲ್ಲಿವೆ. ಕಾಂಫ್ಯೂಷನನ್ನು ಕುರಿತ ಇನ್ನೂ ಹೆಚ್ಚಿನ ಸಾಹಿತ್ಯ ಆಗಿಂದೀಚೆಗೆ ಇಂಗ್ಲಿಷಿನಲ್ಲಿ ಬೆಳಕಿಗೆ ಬಂದಿದೆ. ಕಾಂಫ್ಯೂಷನ ಜೀವನವೃತ್ತವನ್ನು ಹೊಸದಾಗಿ ಬರೆಯಲು ಅವಕಾಶವಿದೆ. ಆದರ ಆಗತ್ಯವೂ ಇದೆ ಎಂದು ನಂಬಿದ್ದೇನೆ.

ಈ ಪ್ರಯತ್ನಕ್ಕೆ ಪೂರ್ವಭಾವಿಯಾಗಿ, ಮೊದಲ ಹೆಜ್ಜೆಯಾಗಿ, ಆತನ ಬಗ್ಗೆ ಆಸಕ್ತಿ ಉಂಟಾಗುವುದಕ್ಕೆ ಅನುಕೂಲವಾಗಿ, ಆತನ ಕೆಲವು ವಚನಗಳನ್ನು ಕೊಡಬೇಕೆಂದು ತೊಡಗಿದ್ದೇನೆ. ಕಾಂಫ್ಯೂಷ ಸಾಹಿತ್ಯದಲ್ಲೇ, ಅವನ ಶಿಷ್ಯರು ತಾವೇ, ಆಯ್ದು ಮಾಲೆಮಾಡಿ ಇಟ್ಟ ಒಂದು "**ವಚನ ಸಂಗ್ರಹ**" ಇದೆ. ಇದರಲ್ಲಿನ ವಚನಗಳೆಲ್ಲ ಬೇರೆ ಬೇರೆ ಕಾಂಫ್ಯೂಷಗ್ರಂಥಗಳಿಂದ ಎತ್ತಿ ಪೋಣಿಸಿಕೊಂಡವು. ಒಳಗಿನ ವಿಷಯಗಳಲ್ಲಿ ವಿವಿಧತೆಯಿರುವಂತೆಯೇ ಹೇಳುವ ರೀತಿಯಲ್ಲೂ ವಿವಿಧತೆಯಿದೆ. ಇಲ್ಲಿ ಆ 'ವಚನ ಸಂಗ್ರಹ'ದಿಂದ ನನ್ನ ಆಯ್ಕೆಯ ಕೆಲವು ವಚನಗಳನ್ನು ನನ್ನ ಉದ್ದೇಶಕ್ಕೆ ತಕ್ಕಂತೆ ಮಾಲೆಕಟ್ಟಿ ಕೊಡಲು ತೊಡಗಿದ್ದೇನೆ.

## ವಚನಗಳನ್ನು ಓದುವ ರೀತಿ

ಈ ವಚನಗಳನ್ನು ಓದಬೇಕಾದರೆ, ಓದಿ ಅರ್ಥ ಮಾಡಿಕೊಂಡು ಇದರಿಂದ ಪ್ರಯೋಜನ ಪಡೆಯು

ಬೇಕಾದರೆ, ಅದಕ್ಕೆ ಒಂದು ನಿರ್ದಿಷ್ಟವಾದ ಕ್ರಮ ವುಂಟು. "ವಚನಗಳಲ್ಲಿ ಬರುವ ಪ್ರಶ್ನೆಗಳನ್ನು ನೀವೇ ಕೇಳಿದಂತೆ ಭಾವಿಸಿಕೊಳ್ಳಿ. ಗುರು ಕೊಟ್ಟ ಉತ್ತರ ವನ್ನು ನಿಮಗಾಗಿ ಕೊಟ್ಟನೆಂದು ಭಾವಿಸಿಕೊಳ್ಳಿ. ಆಗ ನಿಮಗೆ ವಚನದ ಹೃದಯ ತಿಳಿಯುತ್ತದೆ" ಎಂದೂ, "ಮೊದಲು ವಚನಗಳನ್ನು ಸುಮ್ಮನೆ ಓದಿ. ಒಂದು ಸಲಕ್ಕೆ ಒಂದೆರಡು ವಿಭಾಗ ಓದಿ; ಸಾಕು. ಅದು ಕಷ್ಟವೋ ಸುಲಭವೋ ಎಂಬ ಗೋಜು ಬೇಡ. ಅದು ಲಘುವೋ ಗುರುವೋ ಎಂಬ ಎಣಿಕೆ ಬೇಡ. ಸುಮ್ಮನೆ ಮೊದಲಿಂದ ಕೊನೆಯುವರೆಗೆ ಓದಿ. ಅರ್ಥವಾಗದಿದ್ದರೆ, ಏನು ಅರ್ಥವಿರಬಹುದೆಂದು ಚಿಂತಿಸಿ. ಚಿಂತಿಸಿಯೂ ಅರ್ಥವಾಗದಿದ್ದರೆ ಪುನಃ ಓದಿ. ಹೀಗೆ, ಅದರ ರುಚಿ ತಿಳಿದು ಬರುವವರೆಗೂ,ಅದನ್ನುಹಿಂದಕ್ಕೂಮುಂದಕ್ಕೂ ತಿರುವಿ. ಹೀಗೆ ಮಾಡಿದರೆ, ಕಾಲಾನಂತರದಲ್ಲಿ ಅದರ ತಿರುಳು ನಿಮಗೆ ವಶವಾಗುತ್ತದೆ" ಎಂದೂ, "ಎಚ್ಚರಿಕೆ, ಸುಮ್ಮನೆ ಹೆಚ್ಚು ಓದಬೇಡಿ. ಸ್ವಲ್ಪವೇ ಓದಿದರೆ, ಅದನ್ನು ಅಮೂಲಾಗ್ರವಾಗಿ ಅರ್ಥಮಾಡಿ ಕೊಳ್ಳುವುದು ಸುಲಭ. ಓದುವುದರಿಂದ ಜ್ಞಾನ ಸಿದ್ಧಿ ಯಾಗಬೇಕಾದರೆ ಇದೇ ದಾರಿ" ಎಂದೂ, "ಓದಿದುದರ ಭಾಷೆಯನ್ನು ಅರ್ಥಮಾಡಿಕೊಳ್ಳುವುದೇ ಬೇರೆ, ಅದರ ಅರ್ಥದ ಸೌಂದರ್ಯವನ್ನು ಅರಿತು ಆಸ್ವಾದನೆಮಾಡು ವುದೇ ಬೇರೆ. ಪುಸ್ತಕ ಓದುವವರಲ್ಲಿ ಸಾಮಾನ್ಯವಾಗಿ ಒಂದು ದೌರ್ಬಲ್ಯ ಕಂಡುಬರುತ್ತದೆ: ಮೇಲುಮೇಲಿನ ಹೊದಿಕೆಯನ್ನು ಕಾಣುತ್ತಾರೆಯೇ ಹೊರತು ಒಳಗಿನ

ರಸವನ್ನು ಕಾಣುವುದಿಲ್ಲ" ಎಂದೂ "ಓದಿದುದು ಅರ್ಥ ವಾಗಬೇಕಾದರೆ ತುಂಬ ಯೋಚನೆ ಮಾಡಬೇಕು. ಪುಸ್ತಕ ಓದುವುದಕ್ಕೆ ಹೆಚ್ಚು ಹೊತ್ತು ಬೇಕಾಗುವುದಿಲ್ಲ; ಆದರ ಅರ್ಥ ಕಾಣುವುದಕ್ಕೆ ಮೊದಲ ಬಾರಿ ಬಹಳ ಶ್ರಮವಾಗುತ್ತದೆ. ಎರಡನೆಯ ಸಲಕ್ಕೆ ಅಷ್ಟು ಶ್ರಮ ವಾಗುವುದಿಲ್ಲ. ಮೂರನೆಯ ಬಾರಿಗೆ ಶ್ರಮ ಇನ್ನೂ ಕಡಿಮೆ. ಹೀಗೆ ಎಷ್ಟೆಷ್ಟು ಬಾರಿ ಓದಿದರೆ ಅಷ್ಟಷ್ಟು ಅರ್ಥಮಾಡಿಕೊಳ್ಳುವ ಶ್ರಮ ಕಡಿಮೆಯಾಗಿ, ಓದಿದುದರ ಅರ್ಥ ಬೇಗ ಹಿಡಿತಕ್ಕೆ ಸಿಕ್ಕುತ್ತದೆ" ಎಂದೂ ಚೀನಾದೇಶದ ಕಾಂಫೂಷವಿದ್ವಾಂಸರೇ ಹೇಳಿದ್ದಾರೆ

ಇನ್ನು ಕಾಂಫೂಷನ ವಚನಗಳನ್ನು ನೋಡುವ. (ಇವುಗಳಲ್ಲಿ ಬರುವ ಹೆಸರುಗಳನ್ನು ದಪ್ಪಕ್ಷರದಲ್ಲಿ ಕಾಣಿಸಿದ್ದೇನೆ).

## ಕಾಂಫೂಷನ ವ್ಯಕ್ತಿಚಿತ್ರ

೧

ಇತರರು ನನ್ನನ್ನು ತಿಳಿಯಲಿಲ್ಲವೆಂದು ನಾನು ದುಃಖಪಡುವುದಿಲ್ಲ. ಇತರರನ್ನು ನಾನು ತಿಳಿಯಲಿಲ್ಲ ವಲ್ಲಾ ಎಂದು ದುಃಖಪಡುತ್ತೇನೆ.

೨

ಹತ್ತು ಹನ್ನೆರಡು ಮನೆ ಇರುವ ಯಾವ ಹಳ್ಳಿಗಾದರೂ ಹೋಗು, ನನ್ನಂತೆ ಮನಃಪೂರ್ವಕವಾಗಿ ಮುಚ್ಚುಮರೆಯಿಲ್ಲದೆ ಕೆಲಸಮಾಡುವವರನ್ನು ಕಾಣ

ಬಹುದು. ಆದರೆ ಮಾತ್ರ ಅವರು ನನ್ನಂತೆ ವ್ಯಾಸಂಗದಲ್ಲಿ ಮಗ್ನರಾಗಿಲ್ಲದಿರಬಹುದು.

೩

ಹದಿನೈದನೆಯ ವಯಸ್ಸಿನಲ್ಲಿ ನಾನು ವ್ಯಾಸಂಗ ಮಾಡುವುದರಲ್ಲಿ ಮನಸ್ಸಿಟ್ಟು ಮಗ್ನನಾದೆ. ಮೂವತ್ತರ ವೇಳೆಗೆ ನನ್ನ ಸ್ವಭಾವ ಒಂದು ರೂಪಿಗೆ ಬಂದಿತ್ತು. ನಲವತ್ತರ ವೇಳೆಗೆ ನನಗೆ ಏನೂ ಸಂದೇಹಗಳಿರಲಿಲ್ಲ. ಐವತ್ತರ ವೇಳೆಗೆ ಅಧಿದೈವದ ಚಿತ್ತ ನನಗೆ ತಿಳಿದಿತ್ತು. ಅರುವತ್ತರ ವೇಳೆಗೆ ಕಿವಿಗೆ ಏನು ಬಿದ್ದರೂ ಮನಸ್ಸು ಚಂಚಲವಾಗುತ್ತಿರಲಿಲ್ಲ. ಎಪ್ಪತ್ತರ ವೇಳೆಗೆ ಧರ್ಮದ ದಾರಿಯನ್ನು ಅತಿಕ್ರಮಿಸದ ಹಾಗೆ ಎಲ್ಲಿ ಬೇಕಾದರೂ ಹೋಗುವ ಶಕ್ತಿಯನ್ನು ನನ್ನ ಮನಸ್ಸು ಪಡೆದಿತ್ತು.

೪

ಇಷ್ಟು ಕಾಯಿಪಲ್ಯ ತಿಂದು, ಇಷ್ಟು ನೀರು ಕುಡಿದು, ತೋಳು ಮಡಿಸಿ ತಲೆದಿಂಬು ಮಾಡಿಕೊಂಡು ಮಲಗುವುದರಲ್ಲಿ ಆನಂದವಿದೆ. ಇದಕ್ಕೆ ಬದಲಾಗಿ, ಯೋಗ್ಯವಾದ ಮಾರ್ಗದಿಂದ ಸಂಪಾದಿಸದ ಸಂಪತ್ತನ್ನೂ ಅಧಿಕಾರವನ್ನೂ ಅನುಭೋಗಿಸುವುದೆಂದರೆ ಅವು ಗಾಳಿಯಲ್ಲಿ ತೇಲುವ ಮೋಡಗಳೆಂದು ನನ್ನ ಭಾವನೆ.

೫

ಸಾಹಿತ್ಯದ ಅಭ್ಯಾಸದಲ್ಲಿ, ಬಹುಶಃ ನಾನು ಮಿಕ್ಕ ಯಾರ ಸಮಕ್ಕಾದರೂ ಬಂದೇನು. ಆದರೆ ಉತ್ತಮ ಪುರುಷನು ಬದುಕುವಂತೆ ಬದುಕುತ್ತಿರುವೆನೇ ಎಂದರೆ ನನಗೆ ಅದು ಸಾಧ್ಯವಾಗಿಲ್ಲವೆಂದು ಕಾಣುತ್ತದೆ.

೬

ನಾನು ಮಹಾಜ್ಞಾನಿ, ನಾನು ಉತ್ತಮ ಪುರುಷ ಎಂಬ ಧೃಷ್ಟತನ ನನಗಿಲ್ಲ. ಆದರೆ ಇಷ್ಟು ಒಪ್ಪಿಕೊಳ್ಳುತ್ತೇನೆ. ನನ್ನ ಕೈಲಾದಷ್ಟನ್ನೆಲ್ಲ ನಿರಂತರವಾಗಿ ನಡಸುತ್ತಿದ್ದೇನೆ, ಜೊತೆಗೆ ಇತರರಿಗೂ ಕಲಿಸುತ್ತಿದ್ದೇನೆ.

೭

ನನಗೆ ತುಂಬ ತಿಳಿದಿದೆ ಎಂದುಕೊಂಡಿರುವೆಯೇನು? ನನಗೆ ಅಷ್ಟು ತಿಳಿದಿಲ್ಲ ವಿದ್ಯಾವಂತನಲ್ಲದವನೊಬ್ಬ ಬಂದು ಏನೋ ಕೇಳಿದ. ಒಂದು ಚೂರು ಉತ್ತರ ಕೊಡಲೂ ನನಗೆ ತೋಚದೆ ಹೋಯಿತು. ಪ್ರಶ್ನೆಯ ಎರಡೂ ಮುಖಗಳನ್ನು ಚರ್ಚೆಮಾಡುವುದರಲ್ಲೆ ನನ್ನ ಜಾಣತನ ಮುಗಿದುಹೋಯಿತು.

೮

ನಾನು ನನ್ನ ಹಳೆಯ ಸ್ನೇಹಿತ **ಲಾಒಪೆಂಗ**ನ ಹಾಗೆ ಎಂದು ಹೇಳಿಕೊಳ್ಳಬಹುದು. ಪರಂಪರಾಗತವಾದ ಹಳೆಯ ಸಂಪ್ರದಾಯವನ್ನು ನಾನು ತಿಳಿಯಪಡಿಸುತ್ತಿದ್ದೇನೆಯೇ ಹೊರತು ಹೊಸದೇನನ್ನೂ ನಾನು ಸೃಷ್ಟಿಮಾಡುತ್ತಿಲ್ಲ. ಸತ್ಯವನ್ನು ಮುಟ್ಟಬೇಕೆಂಬುದು ಅಷ್ಟೇ ನನ್ನ ಇಷ್ಟ. ಪುರಾತನ ವಿದ್ಯೆಯೆಂದರೆ ನನಗೆ ತುಂಬ ಪ್ರೀತಿ.

೯

ಮಾತನಾಡದೆ ಮೌನವಾಗಿ ಸತ್ಯವನ್ನು ಆಸ್ವಾದಿಸುವುದು, ಎಡೆಬಿಡದೆ ಕಲಿಯುವುದು, ಸಂತತವಾಗಿ ಇತರರಿಗೆ ಕಲಿಸುವುದು; ಇದು ನನಗೆ ಸ್ವಾಭಾವಿಕ, ಸಹಜ.

೧೦

ನನ್ನ ನಡತೆಯನ್ನು ಉತ್ತಮಗೊಳಿಸುವುದಕ್ಕೆ ಎಲ್ಲಿ ನಾನು ಮರೆತೇನೋ, ನನ್ನ ವ್ಯಾಸಂಗಗಳಲ್ಲಿ ಎಲ್ಲಿ ನಾನು ಪ್ರಮತ್ತನಾದೇನೋ, ಸರಿಯಾದ ದಾರಿ ಕಂಡಾಗ ಎಲ್ಲಿ ನಾನು ಮುಂದುವರಿಯದೆ ನಿಂತೇನೋ, ಮಾಡಿದ ತಪ್ಪು ಗೋಚರವಾದಾಗ ಎಲ್ಲಿ ತಿದ್ದಿಕೊಳ್ಳದೆ ಹೋದೇನೋ, ಎಂಬ ಇದೇ ನನ್ನ ಮನಸ್ಸನ್ನು ಸದಾ ಕೊರೆಯುವ ಚಿಂತೆ.

೧೧

ನಾನು ಹುಟ್ಟುವಾಗಲೇ ಜ್ಞಾನಿಯಾಗಿ ಹುಟ್ಟಿದವನಲ್ಲ. ಪುರಾತನ ವಿದ್ಯೆಗಳನ್ನು ಕಂಡರೆ ನನಗೆ ಪ್ರೀತಿ, ಅವುಗಳನ್ನು ಕಲಿಯುವುದಕ್ಕೆ ನಾನು ಶ್ರಮಿಸುತ್ತೇನೆ, ಅಷ್ಟೆ

೧೨

ಕೆಲವರಿದ್ದಾರೆ, ಅವರು ಒಂದು ವಿಷಯವನ್ನೂ ಅರ್ಥ ಮಾಡಿಕೊಳ್ಳುವುದಿಲ್ಲ. ಸುಮ್ಮನೆ ಮುಂದೆ ನುಗ್ಗಿ ಮನಸ್ಸಿಗೆ ಬಂದುದನ್ನು ಕಲ್ಪಿಸಿಕೊಳ್ಳುತ್ತಾರೆ. ನಾನು ಆ ಜನರ ಹಾಗಲ್ಲ. ಕಿವಿಗೊಟ್ಟು ತುಂಬ ಕೇಳಿ ಒಳ್ಳೆಯದನ್ನು ಆರಿಸಿ ಅನುಸರಿಸುವುದರಿಂದಲೂ ಕಣ್ಣುಬಿಟ್ಟು ತುಂಬ ನೋಡಿ ಜ್ಞಾಪಕವಿಟ್ಟುಕೊಳ್ಳುವುದರಿಂದಲೂ ಮನುಷ್ಯನು ಜ್ಞಾನಿಯಾಗಬಹುದು.

೧೩

ಕೆಲವು ಸಲ ಹಗಲೆಲ್ಲ ಅನ್ನವಿಲ್ಲದೆ, ರಾತ್ರಿಯೆಲ್ಲ ನಿದ್ರೆಯಿಲ್ಲದೆ, ಯೋಚನೆಯಲ್ಲಿ ಮುಳುಗಿ, ಏನೂ ಫಲ

ಕಾಣದೆ ಬಳಲಿದ್ದೇನೆ. ಆದ್ದರಿಂದ ಪುನಃ ವ್ಯಾಸಂಗ ಮಾಡಬೇಕೆಂದು ನಾನು ನಿರ್ಧರಿಸಿಕೊಂಡೆ.

೧೪

ಮೂರು ಜನ ಒಟ್ಟಿಗೆ ಹೋಗುತ್ತಿದ್ದರೆ, ಅಲ್ಲಿ ನನಗೆ ಕಲಿಸಬಲ್ಲ ಗುರುವನ್ನು ನಾನು ಕಾಣಬಲ್ಲೆ. ಒಳ್ಳೆಯವನನ್ನು ಆರಿಸಿಕೊಂಡು ಅವನ ಉದಾಹರಣೆಯನ್ನು ಅನುಸರಿಸುತ್ತೇನೆ ಅಥವಾ ಕೆಟ್ಟವನನ್ನು ಕಂಡರೆ ಆ ತಪ್ಪು ನನ್ನಲ್ಲಿ ಇಲ್ಲದಂತೆ ತಿದ್ದಿಕೊಳ್ಳುತ್ತೇನೆ.

೧೫

ಕಲಿಯಲು ಆತುರವಿಲ್ಲದವನಿಗ ನಾನು ಕಲಿಸುವುದಿಲ್ಲ. ವಿಷಯಗಳನ್ನು ಸ್ಪಷ್ಟಪಡಿಸಿಕೊಳ್ಳಲು ಸ್ವತಃ ಪ್ರಯತ್ನಪಡದಿರುವವನಿಗೆ ನಾನು ವಿವರಿಸುವುದಿಲ್ಲ. ನಾನು ಕಾಲುಭಾಗವನ್ನು ವಿವರಿಸಿದ ಮೇಲೆ, ತಾನು ಕುಳಿತು ಆಲೋಚಿಸಿ ಉಳಿದ ಮೂರುಕಾಲು ಭಾಗಗಳ ಅರ್ಥ ಅನ್ವಯಗಳನ್ನು ತಾನಾಗಿಯೇ ಕಂಡುಕೊಳ್ಳದವನಿಗೆ ಕಲಿಸುವ ಗೋಜಿಗೆ ನಾನು ಮತ್ತೆ ಹೋಗುವುದಿಲ್ಲ.

೧೬

ಗುರುದಕ್ಷಿಣೆಯಾಗಿ ಒಂದು ಚೂರು ಒಣಮಾಂಸವನ್ನು ತಂದ ಯಾರಿಗೂ ನಾನು ಸ್ವಲ್ಪವಾದರೂ ಕಲಿಸಲು ನಿರಾಕರಿಸಿಲ್ಲ.

೧೭

**ಸೆ ಲು** ಎಂಬ ಕಾಂಫ್ಯೂಷಶಿಷ್ಯನನ್ನು ಒಬ್ಬ ಕೇಳಿದ: 'ನಿನ್ನ ಗುರು ಎಂಥವನು ?' ಎಂದು. **ಸೆ ಲು** ಸುಮ್ಮನಿದ್ದ.

ಅದು ತಿಳಿದು ಕಾಂಫ್ಯೂಷ "ಯಾವುದಾದರೂ ವಿಷಯ ದಲ್ಲಿ ಉತ್ಸಾಹ ಬಂದರೆ ಊಟಮಾಡುವುದನ್ನು ಮರೆತು ಬಿಡುತ್ತಾನೆ. ಹೀಗೆ ಸಂತೋಷಗೊಂಡಾಗ ತನ್ನ ಕಷ್ಟ ಗಳನ್ನು ಮರೆತುಬಿಡುತ್ತಾನೆ. ಮುದುಕನಾಗುತ್ತಿದ್ದೇ ನೆಂಬ ಜ್ಞಾನವೇ ಅವನಿಗಿಲ್ಲ. ನನ್ನ ಗುರು ಇಂಥವನು ಎಂದು ಏಕೆ ಹೇಳಲಿಲ್ಲ?" ಎಂದು ಕೇಳಿದ.

೧೮

ಕಾಂಫ್ಯೂಷನನ್ನು ಒಬ್ಬ ಕೇಳಿದ: "ಏನು, ಪ್ರಪಂಚ ವನ್ನೆಲ್ಲ ಹೊತ್ತವನ ಹಾಗೆ ಸುಮ್ಮನೆ ಅಲ್ಲಿಂದಿಲ್ಲಿಗೆ ಓಡಾಡುತ್ತಿರುವೆಯಲ್ಲ! ನೀನು ಮಾತನಾಡುವುದು ಮಿತಿಯನ್ನು ಸ್ವಲ್ಪಮೀರಿ ಹೆಚ್ಚಾಯಿತಲ್ಲವೆ?" ಎಂದು. ಗುರು ಎಂದ: "ಮಾತಾಡಬೇಕೆಂದು ನನಗೇನೂಇಷ್ಟ ವಿಲ್ಲ. ಆದರೆ ಈ ಅನೀತಿಯ ಪರಿಸ್ಥಿತಿಯನ್ನು ಕಂಡರೆ ನನಗೆ ಆಗುವುದಿಲ್ಲ" ಎಂದು

೧೯

**ಹು** ಎಂಬ ಗ್ರಾಮದ ಯುವಕರು ತುಂಬ ತಂಟೆ ಕೋರರು. ಒಂದು ದಿನ ಅವರಲ್ಲಿ ಕೆಲವರು ಕಾಂಫ್ಯೂ ಷನ ಬಳಿ ಬಂದರು. ಕಾಂಫ್ಯೂಷನು ಅವರನ್ನು ಹತ್ತಿರ ಸೇರಿಸಿದುದು ಶಿಷ್ಯರಿಗೆ ಸೋಜಿಗವೆನಿಸಿತು ಅದಕ್ಕೆ ಕಾಂಫ್ಯೂಷ "ಅಷ್ಟು ನಿಷ್ಠುರವಾಗಿ ಅವರನ್ನು ನೋಡ ಬೇಡಿ. ಅವರು ಹೇಗೆ ಬರುವರೆಂಬುದು ನನಗೆ ಮುಖ್ಯವೆ ಹೊರತು, ಇಲ್ಲಿಂದ ಹೋದಮೇಲೆ ಅವರೇನು ಮಾಡುತ್ತಾರೆ ಎಂಬುದಲ್ಲ. ಶುದ್ಧವಾದ ಮನಸ್ಸಿನಿಂದ ಒಬ್ಬ ನನ್ನ ಹತ್ತಿರ ಬಂದರೆ, ಅವನ ಶುದ್ಧವಾದ ಮನ

ಸ್ಸನ್ನು ನಾನು ಗೌರವಿಸುತ್ತೇನೆ. ಅನಂತರ ಅವನು ಮಾಡುವ ಕಾರ್ಯಕ್ಕೆ ನಾನು ಹೊಣೆಯಲ್ಲ" ಎಂದ.

೨೦

**ಯೆನ್ ಹುಯಿ** ಮತ್ತು **ಸೆಲು** ಎಂಬವರು ಗುರುವಿನೊಡನೆ ಕುಳಿತಿದ್ದರು. ಗುರು "ನಿಮ್ಮ ಬದುಕಿನಲ್ಲಿ ನಿಮಗಿರುವ ದೊಡ್ಡ ಆಸೆ ಏನು? ಹೇಳುವಿರ?" ಎಂದು ಕೇಳಿದ. **ಸೆಲು** "ಒಂದು ಗಾಡಿ, ಕುದುರೆ, ಒಂದು ಮೃಗರೋಮದ ಅಂಗಿ. ಅವು ಸವೆದು ಹೋಗುವ ವರೆಗೂ ನನ್ನ ಸ್ನೇಹಿತರಿಗೂ ಅವನ್ನು ಕೊಟ್ಟು ನಾನೂ ಅನುಭವಿಸಬೇಕು. ಸವೆಯಿತಲ್ಲಾ ಎಂದು ಪರಿತಾಪ ಪಡಬಾರದು. ಇದು ನನ್ನ ಹಿರಿಯ ಬಯಕೆ" ಎಂದ. **ಯೆನ್ ಹುಯಿ** "ನಾನು ಮೆರೆಯಬಾರದು, ಜಂಬ ಕೊಚ್ಚಿಕೊಳ್ಳಬಾರದು. ಇದು ನನ್ನ ಹಿರಿಯ ಬಯಕೆ" ಎಂದ. ಕಾಂಫ್ಯೂಷ "ಇಳಿವಯಸ್ಸಾದವರು ಶಾಂತಿ ಅನುಭವಿಸುವಂತಿರಬೇಕು. ಸ್ನೇಹಿತರು ಪರಸ್ಪರ ವಿಶ್ವಾಸದಿಂದಿರಬೇಕು. ಕಿರಿಯರು ಹಿರಿಯರನ್ನು ಪ್ರೀತಿಸಬೇಕು. ಇದು ನನ್ನ ಹಿರಿಯ ಬಯಕೆ" ಎಂದ.

೨೧

ಅಧಿಕಾರಿಯೊಬ್ಬ "ನಿಮ್ಮ ಗುರು ಮಹಾಜ್ಞಾನಿಯೆ? ಬಹುಮುಖವಾದ ವಿದ್ಯೆ ಅವನಿಗೆ ತಿಳಿದಿರುವುದು ಏಕೆ?" ಎಂದು **ಸೆಕುಂ** ಎಂಬವನನ್ನು ಕೇಳಿದ. "ಅವನು ಮಹಾಜ್ಞಾನಿಯಾಗಬೇಕೆಂಬುದು ದೈವೇಚ್ಛೆ. ಜೊತೆಗೆ, ಅವನಿಗೆ ಬಹುಮುಖವಾದ ಜ್ಞಾನವೂ ತಿಳಿದಿದೆ" ಎಂದ **ಸೆಕುಂ.** ಇದು ಕಾಂಫ್ಯೂಷನ ಕಿವಿಗೆ ಬಿದ್ದಾಗ, ಅವನು

"ಬಹುಶಃ ಆ ಅಧಿಕಾರಿ ನನ್ನನ್ನು ಚೆನ್ನಾಗಿ ಬಲ್ಲ. ನಾನು ಒಬ್ಬ ಬಡವರ ಮಗ. ಆದ್ದರಿಂದಲೇ ಸಾಮಾನ್ಯರಿಗೆ ತಿಳಿದಿರುವ ಅನೇಕ ವಿಷಯಗಳನ್ನು ನಾನು ಬಲ್ಲೆ. ಉತ್ತಮನಾದ ಮನುಷ್ಯನು ಇದನ್ನೆಲ್ಲ ಕಲಿಯಬೇಕಾಗುವುದೇನು? ಇಲ್ಲ, ಕಲಿಯಬೇಕಾಗಿಲ್ಲ." ಎಂದ. "ನಾನು ಸರಕಾರದಲ್ಲಿ ಹೋಗಿ ಸೇರಲಿಲ್ಲ; ಆದರಿಂದಲೇ ಎಲ್ಲಾ ಕಲೆಗಳನ್ನೂ ಕಲಿಯುವುದಕ್ಕೆ ಅವಕಾಶ ಸಿಕ್ಕಿತು ಎಂದು ಕಾಂಫ್ಯೂಷನು ಹೇಳಿದನು" ಎಂದು **ಸೆ ಛಾಂ** ಹೇಳಿದ.

೨೨

"ಉತ್ತಮ ಪುರುಷನಿಗಿರುವ ಮೂರು ಗುಣಗಳನ್ನು ಸಂಪಾದಿಸುವುದು ನನಗೆ ಸಾಧ್ಯವಾಗಿಲ್ಲ. ಸತ್ಯವಂತನಿಗೆ ಚಿಂತೆಗಳಿಲ್ಲ; ಜ್ಞಾನಿಗೆ ಸಂಶಯಗಳಿಲ್ಲ; ಧೈರ್ಯಶಾಲಿಗೆ ಭಯಗಳಿಲ್ಲ" ಎಂದ ಕಾಂಫ್ಯೂಷ. "ಆದರೆ, ಗುರುವೆ, ಇದು ನಿನ್ನನ್ನು ಕುರಿತ ಸರಿಯಾದ ವರ್ಣನೆ" ಎಂದ **ಸೆ ಕುಂ.**

೨೩

"**ಆ ಸೆ,** ನಾನು ಸುಮ್ಮನೆ ತುಂಬ ಕಲಿತು, ಅದನ್ನೆಲ್ಲ ಜ್ಞಾಪಕವಿಡಲು ಪ್ರಯತ್ನಿಸಿದೆನೆಂದು ಎಂದುಕೊಂಡಿರುವೆಯೇನು?" ಎಂದ ಕಾಂಫ್ಯೂಷ. "ಹೌದು ಅದೆ ಅಲ್ಲವೆ ನೀನು ಮಾಡುವುದು?" ಎಂದ **ಆ ಸೆ.** "ಅಲ್ಲ. ಆ ಎಲ್ಲವನ್ನೂ ಕೋದು ನಡುವಣ ದಾರದಂತೆ ಹಿಡಿದಿರುವ ಒಂದು ಕ್ರಮವಿದೆ, ರೀತಿಯಿದೆ" ಎಂದ ಕಾಂಫ್ಯೂಷ.

೨೪

**ಕುವಾಂಗ್** ನಗರಕ್ಕೆ ಬಂದಾಗ ಕಾಂಫ್ಯೂಷ ಆಪತ್ತಿಗೊಳಗಾದ. ಆಗ “**ವೆನ್** ಮಹಾರಾಜನು ಮೃತನಾದ ಅಂದಿನಿಂದ **ವೆನ್** ಮಹಾರಾಜನ ಸಂಪ್ರದಾಯವು ನನ್ನ ವಶದಲ್ಲಿ ಇಲ್ಲವೇನು? ಈ ಶೀಲಗಳ ಸಂಪ್ರದಾಯವು ನಷ್ಟವಾಗಬೇಕೆಂಬುದು ದೈವೇಚ್ಛೆಯಾದರೆ, ಮುಂದಿನ ಮಾನವಕುಲ ಈ ಸಂಪ್ರದಾಯದ ಜ್ಞಾನವನ್ನು ಪಡೆಯಲಾರದು. ಆದರೆ ಈ ಸಂಪ್ರದಾಯವು ನಷ್ಟವಾಗಕೂಡದೆಂಬುದು ದೈವೇಚ್ಛೆಯಾದರೆ **ಕುವಾಂಗಿನ** ಜನ ನನ್ನನ್ನು ಏನು ಮಾಡಿಯಾರು?” ಎಂದ.

೨೫

ಕಾಂಫ್ಯೂಷನ ಶಿಷ್ಯನೊಬ್ಬ **ಶಿಲಾದ್ವಾರವೆಂಬಲ್ಲಿ** ಒಂದು ರಾತ್ರಿ ತಂಗಿದ. ಅಲ್ಲಿಯ ದ್ವಾರಪಾಲಕ ‘ನೀ ಯಾರ ಶಿಷ್ಯ?’ ಎಂದ. ‘ಕಾಂಫ್ಯೂಷನವ’ ಎಂದ ಶಿಷ್ಯ. “ಓ, ಅವನೆ! ಒಂದು ಕೆಲಸ ಆಗುವುದಿಲ್ಲವೆಂದು ತಿಳಿದರೂ ಇನ್ನೂ ಅದನ್ನು ಮಾಡಬೇಕೆಂದು ಇಷ್ಟಪಡುವವನು!” ಎಂದ ದ್ವಾರಪಾಲಕ.

೨೬

**ಸೈ ಯು** ಹಗಲು ಹೊತ್ತು ನಿದ್ರೆಮಾಡಿದ. ಅದಕ್ಕೆ ಕಾಂಫ್ಯೂಷ “ಕೊಳೆತ ಮರದ ಮೇಲೆ ಏನೂ ಕೆತ್ತನೆ ಕೆಲಸ ಮಾಡಲಾಗುವುದಿಲ್ಲ. ತಿಪ್ಪೆಯ ಮಣ್ಣಿನಿಂದ ಗೋಡೆ ಕಟ್ಟಿದರೆ ಅದಕ್ಕೆ ಸುಣ್ಣ ಅಂಟುವುದಿಲ್ಲ. ಅವನನ್ನು ಅಂದು ಏನು ಪ್ರಯೋಜನ?” ಎಂದ.

ಪುನಃ "ಮೊದಲು ಮೊದಲು ಮನುಷ್ಯ ಮಾತನಾಡಿದರೆ ಅವನ ನಡತೆ ಅದೇ ಮಟ್ಟಕ್ಕಿರಬೇಕೆಂದು ನಿರೀಕ್ಷಿಸುತ್ತಿದ್ದೆ ಆದರೆ ಈಗ, ಮನುಷ್ಯ ಮಾತನಾಡಿದರೆ, ಅವನು ಹೇಗೆ ನಡೆದುಕೊಳ್ಳುವನೆಂದು ನೋಡುವವರೆಗೂ ನಾನು ಏನೂ ಹೇಳುವುದಿಲ್ಲ. **ಸೈ ಯು** ಈ ಪಾಠ ನನಗೆ ಕಲಿಸಿದ್ದಾನೆ" ಎಂದ.

೨೭

**ಮಿಯಾನ್** ಎಂಬ ಕುರುಡು ಗಾಯಕ ಒಮ್ಮೆ ಕಾಂಫೂಷನನ್ನು ಕಾಣಲು ಬಂದ. ಅವನು ಮೆಟ್ಟಲುಗಳ ಹತ್ತಿರ ಬಂದಾಗ, ಗುರು "ಇಲ್ಲಿ ಮೆಟ್ಟಲು ಇದೆ" ಎಂದ. ಕುಳಿತುಕೊಳ್ಳುವ ಚಾಪೆಯ ಹತ್ತಿರ ಬಂದಾಗ "ಇಲ್ಲಿ ಚಾಪೆ ಇದೆ" ಎಂದ. ಬಂದವರೆಲ್ಲ ಕುಳಿತುಕೊಂಡ ಮೇಲೆ "ಇಂಥವನು ಇಲ್ಲಿ ಕುಳಿತಿದ್ದಾನೆ, ಇಂಥವನು ಇಲ್ಲಿ ಕುಳಿತಿದ್ದಾನೆ" ಎಂದು ಎಲ್ಲರ ಪರಿಚಯವನ್ನೂ ಮಾಡಿಕೊಟ್ಟ. **ಮಿಯಾನ್** ಹೊರಟುಹೋದಮೇಲೆ **ಷು ಛಾಂಗ್** ಕೇಳಿದ: "ಸಂಗೀತಗಾರನ ಕೂಡ ಹೀಗೆ ಮಾತನಾಡುವುದು ಸರಿಯೆ?" ಎಂದು. ಗುರು ಎಂದ: "ಕಣ್ಣಿಲ್ಲದವನಿಗೆ ಈ ರೀತಿಯ ಸಹಾಯ ಮಾಡುವುದು ಖಂಡಿತವಾಗಿಯೂ ಸರಿ" ಎಂದು.

೨೮

**ವೀ** ಪ್ರದೇಶದ **ಡ್ಯೂಕ್ ಲಿಂಗ್** ಎಂಬವನು ಯುದ್ಧಕಾಲದಲ್ಲಿ ಸೇನೆಯ ವ್ಯೂಹ ಹೇಗಿರಬೇಕೆಂದು ಕಾಂಫೂಷನನ್ನು ಕೇಳಿದ. "ನಾನು ಶಾಂತಿ ಸಮಯದ ಕಲೆಗಳು ಕೆಲವನ್ನು ಬಲ್ಲೆ. ಯುದ್ಧದ

ಕಲೆಯನ್ನು ನಾನು ಅಭ್ಯಾಸಮಾಡಿಲ್ಲ" ಎಂದ ಕಾಂಫೂಷ. ಮಾರನೆಯ ದಿನವೇ ಆ ಪ್ರಾಂತ್ಯ ಬಿಟ್ಟು ಹೋದ. ಅಲ್ಲಿಂದ **ಛಿಯೆನ್** ಸಂಸ್ಥಾನಕ್ಕೆ ಬಂದಾಗ (ಅಲ್ಲಿಯ ಡ್ಯೂಕನ ಆಜ್ಞೆಯಂತೆ) ಅವನಿಗೆ ಅನ್ನ ಆಹಾರ ಸಿಕ್ಕದೆ ಹೋಯಿತು. ಅವನ ಅನುಯಾಯಿಗಳು ನಿಂತುಕೊಳ್ಳಲು ಕೂಡ ಆಗದಷ್ಟು ನಿತ್ರಾಣವಾದರು. ಶಿಷ್ಯನಾದ **ಸು ಲು** ಅಸಾಧ್ಯ ಸಿಟ್ಟುಗೊಂಡು ಗುರುವಿನ ಸನ್ನಿಧಿಗೆ ಬಂದು, "ಉತ್ತಮನಾದ ಪುರುಷನು ಹೀಗೆ ಹೊಟ್ಟೆಗಿಲ್ಲದೆ ನರಳುವುದು ನ್ಯಾಯವೆ?" ಎಂದ. ಅದಕ್ಕೆ ಗುರು "ಹೊಟ್ಟೆಗಿಲ್ಲದ ಪಾಡು ಅವನಿಗೇನೋ ಬರಬಹುದು ಆದರೆ ಹೀನ ಮನುಷ್ಯನು ಮಾತ್ರ ಆ ಕಾರಣದಿಂದ ನಡತೆ ಕೆಟ್ಟು ಮನಸ್ಸು ಬಂದಂತೆ ವರ್ತಿಸುತ್ತಾನೆ" ಎಂದ

೨೯

ಒಂದು ಸಲ ಕಾಂಫೂಷನು ರಾಜಸಭೆಗೆ ಹೋಗಿದ್ದ ಕಾಲದಲ್ಲಿ, ಅವನ ಅಶ್ವಶಾಲೆಗೆ ಬೆಂಕಿಬಿದ್ದು ಅದು ಸುಟ್ಟುಹೋಯಿತು. ಮನೆಗೆ ಬಂದಮೇಲೆ ಕಾಂಫೂಷ "ಯಾರಿಗಾದರೂ ಹಾನಿಯಾಯಿತೆ?" ಎಂದು ಕೇಳಿದ. ಕುದುರೆಗಳನ್ನು ಕುರಿತು ಕೇಳಲಿಲ್ಲ.

೩೦

ಗುರು "ಮನೆಯ ಹೊರಗಡೆ ರಾಜನಿಗೂ ಪ್ರಧಾನಿಗಳಿಗೂ ಭಕ್ತಿಯ ಸೇವೆ ಸಲ್ಲಿಸುವುದು; ಮನೆಯ ಒಳಗಡೆ ತಂದೆಗೂ ಹಿರಿಯಣ್ಣಂದಿರಿಗೂ ವಿಧೇಯನಾಗಿರುವುದು; ಸತ್ತವರಿಗೆ ದುಃಖ ತೋರುವಾಗ ಅಪ್ರಮತ್ತ

ನಾಗಿರುವುದು ; ಮಾದಕಪದಾರ್ಥಗಳನ್ನು ಕುಡಿದು ಮೈಮರೆಯುದಿರುವುದು; ಈ ಸದ್ಗುಣಗಳಲ್ಲಿ ಯಾವುದು ನನಗಿವೆ ?" ಎಂದು ಹೇಳಿದ.

೩೧

**ಸು ಲು** ಕೇಳಿದ : "ನಾನು ಕೇಳಿರುವ ತತ್ವಗಳನ್ನು ಆಚರಣೆಗೆ ತರಲೇನು ?" ಎಂದು. ಗುರು ಹೇಳಿದ: "ಏಕೆ ಇಷ್ಟು ಆತುರ ? ಮನೆಯಲ್ಲಿ ನಿನ್ನ ತಂದೆಯಿದ್ದಾರೆ, ಅಣ್ಣಂದಿರಿದ್ದಾರೆ. ಅವರ ಸಲಹೆ ಕೇಳು" ಎಂದು. **ಜನ್ ಯು** ಅದೇ ಪ್ರಶ್ನೆ ಕೇಳಿದ. ಅದಕ್ಕೆ ಗುರು "ಹೌದು, ನೀನು ಪಡೆದ ಉಪದೇಶವನ್ನು ಈ ಕ್ಷಣವೆ ಆಚರಿಸು ಹೋಗು" ಎಂದ. ಆಗ **ಕುಂ ಷಿ ಹುವ** "ಅವನು ಕೇಳಿದಾಗ ಮನೆಯುವರ ಸಲಹೆ ಪಡೆದು, ಅನಂತರ ನಡೆ ಎಂದೆ. ಇವನು ಅದೇ ಪ್ರಶ್ನೆ ಕೇಳಿದಾಗ ಈ ಕ್ಷಣವೆ ಆಚರಿಸು, ಹೋಗು ಎಂದೆ. ನನಗೆ ಈ ವರ್ತನೆ ಅರ್ಥವಾಗಲಿಲ್ಲ. ದಯಮಾಡಿ ಸ್ಪಷ್ಟಪಡಿಸು" ಎಂದು ಕೇಳಿದ. ಆದಕ್ಕೆ ಗುರು "ಇವನು ಸ್ವಲ್ಪ ನಿದಾನ, ಆದ್ದರಿಂದ ಇವನನ್ನು ತ್ವರೆಪಡಿಸಿದೆ. ಅವನಿಗೆ ಇಬ್ಬರಿಗೆ ಸಾಕಾಗುವಷ್ಟು ಉತ್ಸಾಹ ಇದೆ, ಆದ್ದರಿಂದ ಅವನನ್ನು ತಡೆದೆ" ಎಂದ.

೩೨

**ಪಿ ಷಿ** ಎಂಬವನು ಒಮ್ಮೆ ಕಾಂಫ್ಯೂಷನನ್ನು ಆಹ್ವಾನಿಸಿದ. ಕಾಂಫ್ಯೂಷ ಹೋಗಲು ಇಷ್ಟಪಟ್ಟ. ಆದರೆ **ಸು ಲು** ಮಾತ್ರ "ಗುರುವೆ, ಹಿಂದೊಮ್ಮೆ ನೀನು 'ಉತ್ತಮನಾದವನು ತಪ್ಪುಮಾಡಿದವನೊಡನೆ ಸೇರುವು

ದಿಲ್ಲ' ಎಂದು ಹೇಳಿದ್ದೆ. ಈಗ ಈ ಪಿ ಷಿ ತಾನಿದ್ದ ಸಂಸ್ಥಾನದಲ್ಲಿ ದಂಗೆ ಎಬ್ಬಿಸಿದ್ದ. ಇಂಥವನ ಬಳಿಗೆ ನೀನು ಹೋಗುವುದು ಯುಕ್ತವೆ?" ಎಂದ. ಅದಕ್ಕೆ ಗುರು "ನಿಜ, ಅದು ನಾನೇ ಹೇಳಿದ ಮಾತು. ಆದರೆ 'ಕಠಿಣವಾದುದನ್ನು ತೆಯ್ದರೆ ಅದು ಸವೆಯುವುದಿಲ್ಲ, ಬಿಳಿಯದನ್ನು ಅದ್ದಿದರೆ ಅದು ಬಣ್ಣ ಕುಂದುವುದಿಲ್ಲ' ಎಂಬ ಮಾತು ಕೇಳಿಲ್ಲವೆ? ಹಾಗಾದರೆ ನಾನು ಏನು? ತಿನ್ನುವುದಕ್ಕೆ ಬಾರದೆ ಸುಮ್ಮನೆ ನೇತುಹಾಕುವ ಕಹಿಯ ಸೋರೆಯೇನು?" ಎಂದ.

೩೩

ಒಂದು ಸಲ ಗುರು "ನಾನು ಮಾತನಾಡದೆ ಇರುವುದು ಸಾಧ್ಯವಾಗುವುದಾದರೆ!" ಎಂದು ಉದ್ಗಾರ ತೆಗೆದ. "ನಮ್ಮ ಗುರು ಮಾತನಾಡದೆ ಹೋದರೆ ನಾವು ಶಿಷ್ಯರು ಅವನ ಸಿದ್ಧಾಂತಗಳನ್ನು ಇತರರಿಗೆ ತಿಳಿಸುವುದು ಹೇಗೆ?" ಎಂದ **ಸೆ ಕುಂ**. ಅದಕ್ಕೆ ಗುರು "ದೈವ ಮಾತನಾಡುತ್ತದೆಯೆ? ಆದರೂ ಋತುಗಳು ಸಂಕ್ರಮಿಸುತ್ತವೆ, ಎಲ್ಲಾ ವಸ್ತುಗಳೂ ಬದುಕಿ ಬೆಳೆಯುತ್ತವೆ. ಹೇಳಿ, ದೈವ ಮಾತನಾಡುತ್ತದೆಯೆ?" ಎಂದು ಕೇಳಿದ.

೩೪

ಗುರು ಎಂದ: "ನನ್ನನ್ನು ಯಥಾವತ್ತಾಗಿ ತಿಳಿದವರು ಯಾರೂ ಇಲ್ಲ" ಎಂದು. **ಸು ಕುಂ** ಕೇಳಿದ: "ನಿನ್ನನ್ನು ಯಾರೂ ತಿಳಿಯದಿರುವುದಕ್ಕೆ ಏನು ಕಾರಣ?" ಎಂದು. ಗುರು "ನಾನು ದೈವವನ್ನೂ

ದೂರುತ್ತಿಲ್ಲ, ನಮ್ಮ ಜನರನ್ನೂ ದೂರುತ್ತಿಲ್ಲ. ಶೀಲಗಳ ಅಭ್ಯಾಸದಲ್ಲಿ, ನಾನು ತೀರ ಕೆಳಗಿನ ಮೆಟ್ಟಲಿನಿಂದ ಪ್ರಾರಂಭಿಸಿ ಮೇಲುಮುಖವಾಗಿ ಏರುತ್ತೇನೆ. ನನ್ನ ಯೋಗ್ಯತೆ ದೈವಕ್ಕೆ ಗೊತ್ತು" ಎಂದ.

**ಯೆನ್ ಹುಯಿ** ನಿಟ್ಟುಸಿರು ಬಿಟ್ಟು, "ಮೇಲೆ ನೋಡಿದರೆ, ಅಷ್ಟು ಎತ್ತರವಾಗಿ ಕಾಣುತ್ತದೆ. ಕೊರೆಯಲು ಹೋದರೆ, ಅಷ್ಟು ಗಟ್ಟಿಯಾಗಿ ಕಾಣುತ್ತದೆ ಮುಂದೆ ಇರುವಂತೆ ಕಾಣುತ್ತದೆಯಾದರೂ ತಟಕ್ಕನೆ ಬೆನ್ನ ಹಿಂದೆ ಕಾಣಿಸಿಕೊಳ್ಳುತ್ತದೆ ಮನುಷ್ಯನನ್ನು ನಯವಾಗಿ ನಡಸಿಕೊಂಡು, ಅವನಿಗೆ ಕಲಿಸುವುದರಲ್ಲಿ ನಮ್ಮ ಗುರು ನಿಪುಣ. ಸಾಹಿತ್ಯವನ್ನು ಓದುವದರಿಂದ ವೈಶಾಲ್ಯವನ್ನು ಪಡೆದು, ಉಚಿತವಾದ ಆಚಾರದಿಂದ ಸಂಯಮ ಸಾಧಿಸುವುದನ್ನು ಆತ ನನಗೆ ಕಲಿಸಿದ. ಯಾವುದೋ ನನ್ನನ್ನು ಹಾಗೆಯೇ ಎತ್ತಿಕೊಂಡು ಒಯ್ಯುವಂತೆ ನನಗೆ ಅನುಭವವಾಯಿತು. ನಾನು ಮಾಡಬಹುದಾದಷ್ಟೂ ಪ್ರಯತ್ನಮಾಡಿ, ನನ್ನೊಳಗಿದ್ದುದನ್ನು ಪೂರ್ಣವಾಗಿ ಬೆಳೆಸಿಕೊಂಡಮೇಲೂ ನನ್ನ ಕೈಗೆ ಸಿಕ್ಕದಂತೆ ಏನೋ ಒಂದು ಗಂಭೀರವಾಗಿ ದೂರವಾಗಿ ಇನ್ನೂ ಹಾಗೆಯೇ ನಿಂತುಬಿಟ್ಟಿದೆ ನನ್ನ ಗುರುವಿನ ಮಟ್ಟಕ್ಕೆ ಬರಬೇಕೆಂದು ನಾನು ಏನೇ ಮಾಡಿದರೂ ದಾರಿ ಕಾಣುವುದು ಸಾಧ್ಯವಾಗಿಲ್ಲ." ಎಂದ

೩೬

**ಷುಸುನ್ ವುಷು** ಎಂಬವನು ಹೇಳಿದ: "ಕಾಂಫೂಷನಿಗಿಂತ **ಸೆ ಕುಂ** ಉತ್ತಮ"ಎಂದು. **ಸೆಪ್ಸ ಛಿಂಗ್ ಪೊ** ಇದನ್ನು **ಸೆ ಕುಂಗೆ** ಹೇಳಿದ. ಅದಕ್ಕೆ **ಸೆ ಕುಂ** "ಇದು, ಮನೆಗೋಡೆಗಳು ಇದ್ದ ಹಾಗೆ. ನನ್ನ ಮನೆಗೋಡೆ ಭುಜದವರೆಗೆ ಮಾತ್ರ ಬರುತ್ತದೆ, ಹೊರಗಿರುವವರು ನನ್ನ ಸುಂದರದಾದ ಮನೆಯ ಒಳಗನ್ನು ನೋಡಲು ಸಾಧ್ಯ. ಆದರೆ ಕಾಂಫೂಷನ ಮನೆಗೋಡೆ ಇಪ್ಪತ್ತು ಮೂವತ್ತು ಅಡಿ ಎತ್ತರವಿದೆ, ನೇರವಾಗಿ ಒಳಕ್ಕೆ ಪ್ರವೇಶಿಸಿದ ಹೊರತು ಒಳಗಿನ ಸೌಂದರ್ಯವಾಗಲಿ ಪದಾರ್ಥಗಳ ಭವ್ಯತೆಯಾಗಲಿ ಗೋಚರವಾಗುವುದಿಲ್ಲ. ಆದರೆ ಆ ಮನೆಯೊಳಗೆ ಪ್ರವೇಶಿಸಬಲ್ಲವರು ಬಹು ಸ್ವಲ್ಪ ಮಂದಿ. ಆದ್ದರಿಂದ **ಷುಸುನ್** ಹೇಳುವುದನ್ನು ತುಂಬ ಸುಲಭವಾಗಿ ಅರ್ಥಮಾಡಿಕೊಳ್ಳಬಹುದು." ಎಂದ.

೩೭

ಇನ್ನೊಂದು ಸಲ **ಷುಸುನ್ ವುಷು** ಕಾಂಫೂಷನ ಹಿರಿಮೆಯನ್ನು ಅಲ್ಲಗಳೆಯಲು ಯತ್ನಿಸಿದ. ಅದಕ್ಕೆ **ಸೆ ಕುಂ** ಹೇಳಿದ: "ಪ್ರಯತ್ನಿಸಿ ಫಲವಿಲ್ಲ. ಕಾಂಫೂಷನನ್ನು ತೃಣೀಕರಿಸಲು ಸಾಧ್ಯವಿಲ್ಲ. ಇತರ ದೊಡ್ಡವರು ಮಣ್ಣಿನ ಗುಡ್ಡೆಗಳಿದ್ದಂತೆ, ಕಲ್ಲುಗುಡ್ಡಗಳಿದ್ದಂತೆ, ಅವುಗಳನ್ನು ಏರುವುದು ಸುಲಭ. ಆದರೆ ಕಾಂಫೂಷ ಚಂದ್ರ ಸೂರ್ಯರಿದ್ದಂತೆ, ಮುಟ್ಟುವುದು ಸಾಧ್ಯವಿಲ್ಲ ಸೂರ್ಯ ಚಂದ್ರರನ್ನು ನೋಡೆನೆಂದು ಮನುಷ್ಯ ಕಣ್ಣು ಮುಚ್ಚಿದರೆ ಅದರಿಂದ ಸೂರ್ಯ ಚಂದ್ರರಿಗೇನು ಕೇಡು? ನೀನು ಅಸಾಧ್ಯವನ್ನು ಸಾಧಿಸಲು ಯತ್ನಿಸುತ್ತಿರುವೆ."

*

# ಕಾಂಫ್ಯೂಷ ವಚನ ಸಂಗ್ರಹ

## "ಲುನ್ ಯು" ಎಂಬ ಗ್ರಂಥ

**"ಕಾಂಫ್ಯೂಷ ವಚನ ಸಂಗ್ರಹ"** ಎಂದು ನಾನು ಯಾವ ಗ್ರಂಥವನ್ನು ನಿರ್ದೇಶಿಸುತ್ತಿರುವೆನೋ ಅದಕ್ಕೆ ಚೀನಾ ಭಾಷೆಯಲ್ಲಿ **"ಲುನ್ ಯು"** ಎಂದು ಹೆಸರು. **ಲುನ್ ಯು** ಎಂದರೆ "ಸಂವಾದಗಳು" ಅಥವಾ 'ಮಾತುಕತೆ' ಎಂದು ಅರ್ಥವಾಗುತ್ತದಂತೆ. ಇಂಗ್ಲಿಷ್‌ನಲ್ಲಿ ಇದನ್ನು 'Analects,' 'Aphorisms,' 'Sayings' ಎಂದು ಕರೆದಿದ್ದಾರೆ. ನನಗೆ ಚೀನಾಭಾಷೆ ಬರುವುದಿಲ್ಲ. ಆದರೂ ಹದಿಮೂರು ವರ್ಷ ಹಿಂದೆ 'ಚೀನಾ ದೇಶದ ಬೌದ್ಧ ಯಾತ್ರಿಕರು' ಎಂಬ ಪುಸ್ತಕ ಬರೆಯುವ ಸಂಬಂಧದಲ್ಲಿ **ಲೆಗ್** ಪಂಡಿತನ ಕಾಂಫ್ಯೂಷಗ್ರಂಥಗಳನ್ನು ಓದಿದಂದಿನಿಂದ ಈಗ ಮಾಡತೊಡಗಿರುವ ಕೆಲಸ ಮಾಡಬೇಕೆಂದು ಆಸೆ. ಆದರೆ ಧೈರ್ಯ ಸಾಲದು ಅಲ್ಲಿಂದ ಈಚೆಗೆ **ಗೈಲ್ಸ್, ವೇಲಿ, ಸೂತ್ಹಿಲ್, ಲಿನ್ ಯುಟಾಂಗ್** ಮುಂತಾದ ಪಂಡಿತರ ಅನುವಾದಗಳನ್ನು ಓದಿ, ಧೈರ್ಯಬಂದಿದೆಯೆಂದು ಹೇಳಲಾರೆನಾದರೂ, ಅಧೈರ್ಯ ಕಡಿಮೆಯಾಗಿದೆ. ಈ ಎಲ್ಲ ಇಂಗ್ಲಿಷ್ ಅನುವಾದಗಳ ಅವಲೋಕನದಿಂದ ನಾನು ಗ್ರಹಿಸಿರುವಷ್ಟನ್ನು, ಇವುಗಳಿಂದ ದೂರ ಹೋಗದ ಹಾಗೆ, ಕನ್ನಡದಲ್ಲಿ ಕೊಡಲು ಯತ್ನಿಸುತ್ತಿದ್ದೇನೆ.

**"ಲುನ್‌ಯು"** ಗ್ರಂಥ ಕಾಂಫ್ಯೂಷಸನು ಬರೆದುದಲ್ಲ. ಕಾಂಫ್ಯೂಷಸನ ಬರಹಗಳಲ್ಲೂ ಆತನ ಮಾತುಗಳಲ್ಲೂ ತಮಗೆ ಅತಿಪ್ರಿಯವೆಂದು ಕಾಂಫ್ಯೂಷಸನ ಶಿಷ್ಯರು ಆಯ್ದು ಇರಿಸಿಕೊಂಡ ಅಮೂಲ್ಯವಾದ ವಚನಗಳು ಈ ಗ್ರಂಥದಲ್ಲಿ ಎಳೆಎಳೆ ಯಾಗಿ, ಮಣಿ ಮಣಿಯಾಗಿ, ರಾಶಿ ರಾಶಿಯಾಗಿ ಇವೆ. ಹೀಗೆ ಆರಿಸಿಕೊಂಡು ಈ ಗ್ರಂಥದಲ್ಲಿ ಕೂಡಿಸಿರುವ ವಚನಗಳ ಒಟ್ಟು ಸಂಖ್ಯೆ ೪೯೯. ಇವುಗಳನ್ನು ಇಪ್ಪತ್ತು ವಿಭಾಗಗಳಾಗಿ ಸಂಕಲನಕಾರರೇ ಮಾಡಿಕೊಂಡಿದ್ದರೂ, ಆ ವಿಭಾಗಗಳಿಗೆ ವಿಷಯಾನುಸಾರವಾಗಿಯೋ ಎಂಬಂತೆ ನಾಮಕರಣ ಮಾಡಿದ್ದರೂ, ಹೀಗೆ ವಿಭಾಗಿಸುವುದರಲ್ಲಿ ಸುಸ್ಪಷ್ಟವಾದ ಯಾವ ಕ್ರಮವನ್ನೂ ತಪ್ಪದೆ ಹಿಡಿದ ಹಾಗಿಲ್ಲ. ಈ ವಿಭಜನೆಗಳನ್ನು ಕೇವಲ ಸ್ಥೂಲವಾಗಿ ಒಪ್ಪಬಹುದಷ್ಟೆ. ಉದಾಹರಣೆಗೆ 'ಆಡಳಿತ ಪದ್ಧತಿಯನ್ನು ಕುರಿತು' ಎಂಬ ವಿಭಾಗದಲ್ಲಿ ಕಾಂಫ್ಯೂಷಸನ ಶಿಷ್ಯರನ್ನು ಕುರಿತ ವಚನವಿರಬಹುದು; ಅಥವಾ 'ಕಾಂಫ್ಯೂಷಸನ ಜೀವನವನ್ನು ಕುರಿತು' ಎಂಬ ವಿಭಾಗದಲ್ಲಿ ಹಲವು ಪ್ರಾಚೀನ ಮಹಾಪುರುಷರ ಜೀವನಚಿತ್ರ ಬರಬಹುದು. ಹೀಗೆ ರಾಶಿಗಳಾಗಿ, ಗುಪ್ಪೆಗಳಾಗಿ ಆಯ್ದು ಹಾಕಿರುವ ಈ ವಚನ ರತ್ನಗಳನ್ನು ಇನ್ನೂ ಸುಸಂಬದ್ಧವಾಗುವಂತೆ ವಿಷಯಾನುಸಾರವಾಗಿ ವಿಂಗಡಿಸಿಕೊಳ್ಳುವುದಕ್ಕೆ ತುಂಬ ಅವಕಾಶವಿದೆ. ಇದರಿಂದ ಗ್ರಂಥದ ರೂಪಕ್ಕಾಗಲಿ ಉದ್ದೇಶಕ್ಕಾಗಲಿ ಏನೂ ಘಾಸಿಯಿಲ್ಲ.

ಇಲ್ಲಿ, **'ಕಾಂಫ್ಯೂಷನ ವ್ಯಕ್ತಿಚಿತ್ರ'**ಕ್ಕೆ ಸಂಬಂಧ ಪಟ್ಟ ಮತ್ತಿಷ್ಟು ವಚನಗಳನ್ನು ಕೊಟ್ಟು ಹಿಂದಿನ ಮೂವತ್ತೇಳು ವಚನಗಳಿಂದ ಮುಂದುವರಿಸಿದ್ದೇನೆ.

### ವಚನಗಳನ್ನು ಓದುವ ರೀತಿ

ಇದನ್ನು ಕಳೆದ ಸಲವೇ ಹೇಳಿತ್ತು ಆದರೂ ಈ ಬಾರಿಯೂ ಹೇಳಬೇಕು. ಪ್ರಬಂಧಗಳು, ನಿಬಂಧಗಳು, ನ್ಯಾಸಗಳು, ಕತೆಗಳು, ಕಾದಂಬರಿಗಳನ್ನು ಓದುವ ಹಾಗೆಯೇ ಈ **ವಚನ**ಗಳ ಮಾಲೆಯನ್ನು ಓದಿದರೆ, ಇವು ಶುದ್ಧ ಅಸಂಬದ್ಧವೆಂಬ ಭ್ರಮೆ ಬಂದುಬಿಡುತ್ತದೆ. ಒಂದೊಂದು ವಚನವನ್ನೂ ಒಂದೊಂದು ಪ್ರತ್ಯೇಕ ಪುಸ್ತಕದಂತೆ ಭಾವಿಸಿಕೊಳ್ಳಬೇಕು. ಹಿಂದೆ ಓದಿದ ವಚನದ ಭಾವ ಮುಂದೆ ಓದುವ ವಚನದಲ್ಲಿ ಮುಂದುವರಿಯುತ್ತದೆ ಎಂಬ ನಿರೀಕ್ಷೆಯೇ ಇರಬಾರದು. ಇತರ ಪುಸ್ತಕಗಳಲ್ಲಿಯಾದರೆ ಈ ಪುಟದಲ್ಲಿ ಓದಿದುದು ಅರ್ಥವಾಗದಿದ್ದರೂ ಮುಂದಿನ ಮೂರು ಪುಟ ಓದಿದಮೇಲೆ ಸ್ಪಷ್ಟವಾಗುವ ಸಂಭವವುಂಟು ಆದರೆ ಈ ವಚನಗಳಲ್ಲಿ ಮಾತ್ರ, ಓದಿದುದರ ಅರ್ಥ ಪೂರ್ಣವಾಗಿ ಅನುಭವಿಸಬೇಕಾದರೆ ಸ್ವಂತವಿಚಾರ ಸ್ವಂತಪ್ರಯತ್ನಒಂದೇ ಶರಣಲ್ಲದೆ ಬೇರೆ ಮಾರ್ಗವಿಲ್ಲ. ಆದ್ದರಿಂದಲೇ ಓದಿದುದರ ಅರ್ಥವನ್ನು ಪಡೆಯಬೇಕಾದರೆ ಒಂದು ಸಲಕ್ಕೆ ಹತ್ತು ವಚನ ತೆಗೆದುಕೊಳ್ಳತಕ್ಕದ್ದಲ್ಲ; ಒಂದು ಸಲಕ್ಕೆ ಒಂದು ವಚನಕ್ಕೆ ಮೀರಿ ತೆಗೆದುಕೊಳ್ಳತಕ್ಕದ್ದಲ್ಲ

ಎಂಬುದನ್ನು ನೆನಪಿನಲ್ಲಿಟ್ಟು ಓದತೊಡಗಬೇಕು. **ಇದು ವಚನ ಓದುವ ರೀತಿ.**

**ಕಾಂಫ್ಯೂಷನ ವ್ಯಕ್ತಿಚಿತ್ರ** (ಮುಂದುವರಿದುದು)

೩೮

ಶುಕ್ಲಪಕ್ಷ ಪ್ರಾರಂಭವಾದಾಗ ದೇವಸ್ಥಾನದಲ್ಲಿ ಕುರಿಯನ್ನು ಬಲಿಕೊಡುತ್ತಿದ್ದುದು ನಿಲ್ಲಬೇಕೆಂದು **ಸು ಕುಂ** ಇಷ್ಟಪಟ್ಟ. ಅದಕ್ಕೆ ಗುರು ಹೇಳಿದ: "ಆ! **ಸು !** ನಿನ್ನ ಗಮನ ಕುರಿಯ ಮೇಲೆ, ನನ್ನ ಲಕ್ಷ್ಯ ಬಲಿಯ ಮೇಲೆ!" ಎಂದು

೩೯

ಗುರು ಹೇಳಿದ: "ಐಶ್ವರ್ಯ ಸಂಪಾದನೆಯಾಗುವುದು ಮಾತ್ರ ಖಂಡಿತವಾದರೆ, ಅದಕ್ಕಾಗಿ ಲಗಾಮು ಹಿಡಿದು ಗಾಡಿ ಹೊಡೆಯಬೇಕಾದರೂ ಹೊಡೆದೇನು. ಆದರೆ ಹಾಗೆ ಸಂಪಾದನೆಯಾಗುವುದು ನಿಶ್ಚಿತವಿಲ್ಲದುದರಿಂದ, ನನಗೆ ಹೆಚ್ಚು ಪ್ರೀತಿಯಿರುವವುಗಳನ್ನೇ ನಾನು ಹುಡುಕಿಕೊಂಡು ಹೋಗುತ್ತೇನೆ."

೪೦

ಗುರು **ಛಿಯಿ** ಸಂಸ್ಥಾನದಲ್ಲಿದ್ದಾಗ **ಷನ್ರೊ** ಸಂಗೀತವನ್ನು ಕೇಳಿದ ಬಳಿಕ ಮೂರು ತಿಂಗಳ ಕಾಲ ಅವನಿಗೆ ಮಾಂಸದ ರುಚಿಯೇ ಗೊತ್ತಾಗಲಿಲ್ಲ. "ಸಂಗೀತ ಇಷ್ಟು ಪೂರ್ಣಸಿದ್ಧಿಯನ್ನು ಪಡೆದಿತ್ತೆಂಬ ಕಲ್ಪನೆಯೇ ನನಗೆ ಇರಲಿಲ್ಲ" ಎಂದ ಗುರು.

೪೧

ಗುರು ಎಂದ : "ನನ್ನ ಶಿಷ್ಯರೆ! ನಾನು ಏನಾದರೂ ರಹಸ್ಯ ಇಟ್ಟುಕೊಂಡಿರುವೆನೆಂದು ತಿಳಿದಿರುವಿರೇನು? ನಾನು ನಿಮ್ಮಿಂದ ಯಾವ ರಹಸ್ಯವನ್ನೂ ಮುಚ್ಚಿಟ್ಟಿಲ್ಲ; ನನ್ನ ಶಿಷ್ಯರಾದ ನಿಮಗೆ ತಿಳಿಯಪಡಿಸದ ಅಂತಹುದು ಯಾವುದನ್ನೂ ನಾನು ಮಾಡುವುದಿಲ್ಲ. ನಿಮ್ಮೊಡನೆ ಇರುವವನು ಯಥಾರ್ಥನಾದ ಕಾಂಫೂಷನು" ಎಂದು.

೪೨

**ತ ಷಿಯಾಂಗ್** ಗ್ರಾಮದ ಒಬ್ಬನು "ತತ್ತ್ವಜ್ಞಾನಿಯಾದ ಈ **ಕುಂಗ್** ಎಂಥ ಮಹಾಪುರುಷ! ಇವನು ಕಲಿತಿರುವ ವಿದ್ಯೆ ವಿಶಾಲವಾದುದಾದರೂ, ಯಾವುದರಲ್ಲಿಯೂ ಇವನು ಪ್ರಸಿದ್ಧಿ ಪಡೆಯಲಿಲ್ಲ." ಎಂದ. ಗುರು ಅದನ್ನು ಕೇಳಿ, ತನ್ನ ಶಿಷ್ಯರನ್ನು ಕುರಿತು "ನಾನು ಯಾವುದನ್ನು ಕೈಕೊಳ್ಳಲಿ? ಗಾಡಿ ಹೊಡೆಯಲೆ? ಬಿಲ್ಗಾರನಾಗಲೆ? ಒಳ್ಳೆಯದು, ಗಾಡಿ ಹೊಡೆಯುತ್ತೇನೆ!" ಎಂದ.

೪೩

**ಸು ಕುಂ** ಕೇಳಿದ: "ನನ್ನ ಹತ್ತಿರ ಒಂದು ಚೆಲುವಾದ ರತ್ನವಿದ್ದರೆ, ಅದನ್ನು ಪೆಟ್ಟಿಗೆಯಲ್ಲಿ ಭದ್ರಪಡಿಸಿ ನಾನೇ ಇಟ್ಟುಕೊಳ್ಳಬೇಕೆ? ಅಥವಾ ಒಳ್ಳೆಯ ಬೆಲೆ ನೋಡಿ ಅದನ್ನು ಮಾರಿಬಿಡಬೇಕೆ?" ಎಂದು. ಅದಕ್ಕೆ ಗುರು "ಮಾರಿಬಿಡಬೇಕು! ಅಗತ್ಯವಾಗಿ ಮಾರಿಬಿಡಬೇಕು!" ಎಂದು ಹೇಳಿ, "ಆದರೆ ನಾನು ಮಟ್ಟಿಗೆ

ಒಳ್ಳೆಯ ಬೆಲೆ ತಾನಾಗಿಯೇ ಬರುವವರೆಗೂ ನಿದಾನಿಸುತ್ತೇನೆ” ಎಂದ.

೪೪

ಪೂರ್ವದ ಕಡೆ ಇದ್ದ ಒಂಬತ್ತು ಕುಲದವರು ಅನಾಗರಿಕರಾಗಿದ್ದರು ಗುರು ತಾನು ಅವರ ನಡುವೆ ಹೋಗಿ ನೆಲಸಬೇಕೆಂದು ಮನಸ್ಸಿನಲ್ಲಿ ಎಂದುಕೊಂಡ. ಅದಕ್ಕೆ ಯಾರೋ ಎಂದರು: “ಅವರು ಅಷ್ಟು ಅನಾಗರಿಕರಾಗಿರುವಾಗ ನೀನು ಅಲ್ಲಿ ಹೋಗಿ ಇರಲು ಹೇಗೆ ಸಾಧ್ಯ?” ಎಂದು. ಅದಕ್ಕೆ ಗುರು “ಉದಾತ್ತವಾದ ಸ್ವಭಾವವುಳ್ಳವನು ಅಂಥವರ ನಡುವೆ ಹೋಗಿ ನೆಲಸಿದರೆ ಅಲ್ಲಿ ನಾಗರಿಕತೆಗೆ ಏನು ಕಡಮೆ?” ಎಂದು ಉತ್ತರ ಕೊಟ್ಟ.

೪೫

ಒಂದು ಸಲ ಗುರು ಒಂದು ಹೊಳೆಯ ಬಳಿ ನಿಂತು “ಎಲ್ಲವೂ ಹೀಗೆಯೇ ನಶ್ವರ. ಹಗಲಾಗಲಿ ರಾತ್ರಿಯಾಗಲಿ ನಿಲ್ಲುವಂತೆಯೇ ಇಲ್ಲ” ಎಂದ.

೪೬

ಗುರು ಎಂದ: “ನಾನು ಒಂದು ಮಣ್ಣುರಾಶಿಯನ್ನು ಹೆಚ್ಚಿಸುತ್ತಿದ್ದೇನೆ ಎಂದು ಇಟ್ಟುಕೊಳ್ಳಿ. ಅದು ಮುಗಿಯುವುದಕ್ಕೆ ಇನ್ನೂ ಒಂದು ಬುಟ್ಟಿ ಮಣ್ಣು ಸಾಲದೆ ಇರುವಾಗ ನಾನು ಕೆಲಸ ನಿಲ್ಲಿಸಿದರೆ ಯಾರು ಮುಂದುವರಿಯದೆ ನಿಂತಹಾಗಾಯಿತು? ನಾನೇ! ಅದರ ಬದಲು ನಾನು ತಗ್ಗುತಿಟ್ಟು ಇಲ್ಲದ ಸಮ

ಭೂಮಿಯಲ್ಲಿ ಕೆಲಸ ಮಾಡತೊಡಗಿ, ಒಂದೇ ಬುಟ್ಟಿ ಮಣ್ಣನ್ನು ತಂದು ಹಾಕಿದರು ಕೂಡ, ಪುನಃ ಪುನಃ ಮಣ್ಣನ್ನು ತಂದು ಹಾಕುವುದರಿಂದ ಯಾರು ಮುಂದು ವರಿದ ಹಾಗಾಯಿತು? ನಾನೇ!" ಎಂದು.

೪೭

ಗುರು ಎಂದ: "ಕೆಲವು ಗರಿಕೆಗಳು ಹುಟ್ಟುತ್ತವೆ, ಹೂ ಬಿಡುವುದಿಲ್ಲ. ಇನ್ನು ಕೆಲವು ಹೂ ಬಿಡುತ್ತವೆ, ಹಣ್ಣು ಬಿಡುವುದಿಲ್ಲ" ಎಂದು.

೪೮

"ಚಿಕ್ಕವರು ಹೇಗಿರಬೇಕು? ಕಂಡರೆ ಗೌರವ ಹುಟ್ಟುವ ಹಾಗೆ ಇರಬೇಕು. ನಾವು ಈಗ ಇರುವಂತೆ ಅವರು ನಾಳೆ ಇರುವುದಿಲ್ಲವೆಂದು ನಮಗೆ ಹೇಗೆ ಗೊತ್ತು? ಆದರೆ, ಮನುಷ್ಯನಿಗೆ ನಲವತ್ತೋ ಐವತ್ತೋ ವಯಸ್ಸಾದರು ಕೂಡ ಯಾರೂ ಅವನ ಹೆಸರೇ ಕೇಳಿಲ್ಲದೆ ಹೋದರೆ ಅಂಥವನು ಇತರರ ಗೌರವವನ್ನು ಸಂಪಾದಿಸುವುದು ಶಕ್ಯವಿಲ್ಲ" ಎಂದು ಗುರು ಹೇಳಿದ.

೪೯

ಗುರು ಹೇಳಿದ: "ನಾಗರಿಕ ಕಲೆಗಳಲ್ಲಿ ನಮ್ಮ ಪೂರ್ವಿಕರಿಗೆ ಬೆಳವಣಿಗೆಯಿಲ್ಲವೆಂದೂ ಅವರ ಅನಂತರ ಬಂದವರು ಅದೇ ಕಲೆಗಳಲ್ಲಿ ಸಂಸ್ಕೃತರಾದವರೆಂದೂ ಗಣನೆ ಮಾಡುತ್ತಾರೆ. ಆದರೆ ನನಗೆ ಆ ಕಲೆಗಳ ಆವಶ್ಯಕತೆ ಬಿದ್ದಾಗ, ನಾನು ನಮ್ಮ ಪೂರ್ವಿಕರನ್ನು ಅನುಸರಿಸುತ್ತೇನೆ" ಎಂದು.

೫೦

ಗುರು ಎಂದ: “ವ್ಯವಹಾರ ನ್ಯಾಯಸ್ಥಾನಕ್ಕೆ ಬಂದಾಗ ನಾನೂ ಇತರರಷ್ಟು ಚೆನ್ನಾಗಿಯೇ ತೀರ್ಪು ಕೊಡಬಲ್ಲೆ. ಆದರೆ ವ್ಯವಹಾರ ನ್ಯಾಯಸ್ಥಾನಕ್ಕೆ ಬಾರದಂತೆ ಮಾಡುವುದೇ ನಿಜವಾಗಿಯೂ ಅದಕ್ಕಿಂತ ದೊಡ್ಡ ಕಾರ್ಯ.”

೫೧

**ಘೂ ಪೊ ಯೂ** ಎಂಬವನು ದೂತಮುಖದಿಂದ ಕಾಂಫೂಷನಿಗೆ ತನ್ನ ಗೌರವಪೂರ್ವಕವಾದ ಪ್ರಣಾಮಗಳನ್ನು ಹೇಳಿ ಕಳಿಸಿದ. ಕಾಂಫೂಷ ಅವನನ್ನು ತನ್ನ ಹತ್ತಿರದಲ್ಲಿ ಕುಳ್ಳಿರಿಸಿಕೊಂಡು, “ನಿನ್ನ ಒಡೆಯ ಈಗ ಏನು ಮಾಡುತ್ತಿದ್ದಾನೆ?” ಎಂದು ಪ್ರಶ್ನಿಸಿದ ದೂತ “ನನ್ನ ಒಡೆಯ ತನ್ನ ದೋಷಗಳನ್ನು ಕಡಿಮೆಮಾಡಿಕೊಳ್ಳಬೇಕೆಂದು ಹುಡುಕುತ್ತಿದ್ದಾನೆ. ಆದರೂ ಇನ್ನೂ ಜಯಶೀಲನಾಗಿಲ್ಲ” ಎಂದು ಉತ್ತರ ಕೊಟ್ಟ. ದೂತನು ಹೊರಟುಹೋದ ಮೇಲೆ, ಗುರು “ಎಂಥ ದೂತ! ಎಂಥ ದೂತ!” ಎಂದ.

೫೨

**ಸು ಕುಂಗೆ** ಅವರಿವರನ್ನು ಪರಸ್ಪರ ಹೋಲಿಸಿ ಹೊಗಳಿ ತೆಗಳುವ ಅಭ್ಯಾಸವಿತ್ತು. ಗುರು “ಆ! **ಸು ಕುಂ** ಎಷ್ಟು ಜಾಣ! ನನಗಾದರೋ ಇಂಥದಕ್ಕೆಲ್ಲ ವೇಳೆಯೇ ಸಿಕ್ಕುವುದಿಲ್ಲ!” ಎಂದ.

೫೩

ಯಾರೋ ಕೇಳಿದರು: "ದ್ವೇಷ ಸಾಧಿಸಿದವರಲ್ಲಿ ದಯೆ ತೋರಿಸಬೇಕೆಂಬ ತತ್ತ್ವದ ಬಗ್ಗೆ ನಿನ್ನ ಅಭಿಪ್ರಾಯವೇನು?" ಎಂದು. ಅದಕ್ಕೆ ಗುರು "ಹಾಗಾದರೆ, ದಯೆ ತೋರಿದವರಿಗೆ ನೀವೇನು ಕೊಟ್ಟೀರಿ? ದ್ವೇಷಿಸಿದವನಲ್ಲಿ ನ್ಯಾಯದಿಂದ ವರ್ತಿಸಿ; ದಯೆ ತೋರಿದವರಲ್ಲಿ ನೀವೂ ದಯೆ ತೋರಿರಿ" ಎಂದ.

೫೪

"ಜೀವವಿರುವವರೆಗೂ ನಮ್ಮ ನಡತೆಗೆ ಇದು ನಿಯಮ ಎಂದು ನಾವು ಇಟ್ಟುಕೊಳ್ಳಬಹುದಾದ ಯಾವುದಾದರೂ ಒಂದು ಪದ ಉಂಟೆ?" ಎಂದು **ಸು ಕುಂ** ಕೇಳಿದ. ಅದಕ್ಕೆ ಗುರು "ಮರುಕ ಎಂಬ ಪದವಿಲ್ಲವೆ? ನಿನಗೆ ಅನಿಷ್ಟವೆನ್ನಿಸಿದುದನ್ನು ಇತರರಲ್ಲಿ ಆಚರಿಸಬೇಡ" ಎಂದು ಉತ್ತರ ಕೊಟ್ಟ

೫೫

**ಛಿಯೆನ್ ಕಿಯಾಂಗ್** ಒಂದು ಸಲ ಕಾಂಫ್ಯೂಷನ ಮಗನಾದ **ಪೊ ಯೂ**ವನ್ನು "ನಮಗೆ ಕಲಿಸಿರುವುದಕ್ಕಿಂತ ಭಿನ್ನವಾದ ಯಾವುದಾದರೂ ಪಾಠವನ್ನು ಗುರು ನಿನಗೆ ಕಲಿಸಿದ್ದಾನೆಯೆ?" ಎಂದು ಕೇಳಿದ.

"ಇಲ್ಲ. ಒಂದು ಸಲ ಗುರು ಒಬ್ಬನೇ ನಿಂತಿರುವಾಗ ನಾನು ಅಂಗಳದಲ್ಲಿ ಹಾದುಹೋದೆ. ಆಗ ಗುರು 'ನೀನು ಕಾವ್ಯಗಳನ್ನು ಅಭ್ಯಾಸಮಾಡಿರುವೆಯ?' ಎಂದ. 'ಇಲ್ಲ' ಎಂದೆ. 'ಕಾವ್ಯಗಳನ್ನು ಅಭ್ಯಾಸ ಮಾಡ

ದಿದ್ದರೆ, ಮಾತುಕತೆಯಲ್ಲಿ ನೀನು ಏನು ಹೇಳುವುದಕ್ಕಾಗುತ್ತದೆ?" ಎಂದ ಗುರು. ಅನಂತರ ನಾನು ಕಾವ್ಯವನ್ನು ಅಭ್ಯಾಸಮಾಡತೊಡಗಿದೆ. ಇನ್ನೊಂದು ದಿನ ಅವನು ಒಬ್ಬನೇ ನಿಂತಿರುವಾಗ, ನಾನು ಪುನಃ ಅಂಗಳದಲ್ಲಿ ಹಾದುಹೋದೆ. 'ಕ್ರಿಯಾಕಾಂಡವನ್ನು ಓದಿರುವೆಯ ?" ಎಂದು ಕೇಳಿದ. 'ಇಲ್ಲ' ಎಂದೆ. 'ಕ್ರಿಯಾಕಾಂಡವನ್ನು ವ್ಯಾಸಂಗ ಮಾಡದೆ ಹೋದರೆ ನಿನಗೆ ಅಸ್ತಿಭಾರವೆ ಇಲ್ಲದೆ ಹೋಗುವುದು' ಎಂದ. ನಾನು ಹೋಗಿ ಕ್ರಿಯಾಕಾಂಡವನ್ನೂ ವ್ಯಾಸಂಗ ಮಾಡತೊಡಗಿದೆ. ಗುರುವಿನಿಂದ ನಾನು ಪಡೆದುದು ಈ ಎರಡು ಪಾಠ" ಎಂದು **ಪೊ ಯೂ** ಉತ್ತರ ಕೊಟ್ಟ.

ಆಗ **ಛಿಯೆನ್ ಕಿಯಾಂಗ್** ಈಚೆ ಬಂದು, "ನಾನು ಒಂದು ಕೇಳಿ, ಮೂರು ಪಡೆದೆ. ಕಾವ್ಯದ ವಿಷಯ ಕಲಿತೆ, ಕ್ರಿಯಾಕಾಂಡದ ಮಹತ್ವ ತಿಳಿದೆ, ಪ್ರಾಜ್ಞನಾದವನು ತನ್ನ ಮಗನೊಡನೆ ಸಲುಗೆಯಿಂದಿರುವುದಿಲ್ಲವೆಂಬುದನ್ನೂ ತಿಳಿದೆ" ಎಂದು ಸಂತೋಷಪಟ್ಟನು.

೫೬

**ಯಾಂಗ್ ಹುವೊ** ಎಂಬ ಒಬ್ಬ ದುಷ್ಟ ಅಧಿಕಾರಿ ಕಾಂಘೂಷನನ್ನು ಕಾಣಬೇಕೆಂದು ಇಷ್ಟಪಟ್ಟ. ಆದರೆ ಕಾಂಘೂಷ ಅವನನ್ನು ಕಾಣಲು ಹೋಗವೊಲ್ಲ. ಅದರಿಂದ ಅವನು ಒಂದು ಹಂದಿಯನ್ನು ಕಾಂಘೂಷನಿಗೆ ಮರ್ಯಾದೆಯ ಗುರುತಾಗಿ ಕಳುಹಿಸಿದ. ಕಾಂಘೂಷ,

ಆವನು ಮನೆಯಲ್ಲಿ ಇಲ್ಲದಿರುವ ವೇಳೆಯನ್ನು ವಿಚಾರಿಸಿಕೊಂಡು, ಆ ಹೊತ್ತಿನಲ್ಲಿಯೇ ಆವನನ್ನು ವಂದಿಸಲು ಆವನ ಮನೆಗೆ ಹೋದ. ಆದರೆ ದಾರಿಯಲ್ಲಿ ಅವನೇ ಸಿಕ್ಕಿದ. ಆವನು ಕಾಂಫ್ಯೂಷನನ್ನು ಕುರಿತು "ಬಾ, ನಿನ್ನೊಡನೆ ಒಂದು ಮಾತು ಹೇಳಬೇಕಾಗಿದೆ. ಯಾವನಾದರೂ ತನಗಿರುವ ಸಾಮರ್ಥ್ಯವನ್ನು ತನ್ನೆದೆಯಲ್ಲಿ ಬಚ್ಚಿಟ್ಟುಕೊಂಡು, ಆ ಮೂಲಕ ದೇಶ ದಾರಿತಪ್ಪಿ ಹೋಗುವ ದೋಷದಲ್ಲಿ ತಾನೂ ಭಾಗಿಯಾದರೆ, ಅಂಥವನಿಗೆ ತನ್ನ ಜನರ ಮೇಲೆ ಪ್ರೀತಿ ಇದೆ ಎಂದು ಹೇಳಬಹುದೆ?" ಎಂದ. "ಹೇಳಲಾಗದು" ಎಂದ ಕಾಂಫ್ಯೂಷ. ಆವನು ಪುನಃ "ಸಾರ್ವಜನಿಕವಾದ ಕಾರ್ಯಕಲಾಪಗಳಲ್ಲಿ ಭಾಗವಹಿಸುವ ಇಷ್ಟವಿದ್ದರೂ ದೊರೆತ ಆವಕಾಶಗಳನ್ನೆಲ್ಲ ಕಳೆದುಕೊಳ್ಳುವವನನ್ನು ಬುದ್ಧಿವಂತನೆಂದು ಕರೆಯಬಹುದೆ?" ಎಂದ. "ಕರೆಯಲಾಗದು" ಎಂದ ಕಾಂಫ್ಯೂಷ. "ದಿನಗಳೂ ಮಾಸಗಳೂ ಉರುಳಿಹೋಗುತ್ತಿವೆ. ವರ್ಷಗಳು ನಮಗೋಸ್ಕರ ನಿಲ್ಲುವುದಿಲ್ಲ" ಎಂದ ಅವನು. "ಅದು ನಿಜ. ನಾನು ಇಷ್ಟರಲ್ಲಿಯೇ ಅಧಿಕಾರ ಸ್ವೀಕಾರ ಮಾಡುತ್ತೇನೆ" ಎಂದ ಕಾಂಫ್ಯೂಷ.

೫೭

ಛಿ ಮನೆತನದ ಮಂತ್ರಿಯಾದ **ಕುಂಗ್ ಷಾನ್ ಫು ಜಾವೊ** ಎಂಬವನು ಪಿ ಜಹಗೀರಿಯಲ್ಲಿ ದಂಗೆ ಎದ್ದಾಗ ಅವನು ಕಾಂಫ್ಯೂಷನಿಗೆ ಹೇಳಿಕಳುಹಿಸಿದ. ಗುರುವಿಗೂ ಹೋಗುವ ಮನಸ್ಸಾಯಿತು. ಶಿಷ್ಯನಾದ **ಸು ಲು**

ಅಸಮಾಧಾನದಿಂದ "ನಿಜ, ನಮಗೆ ಎಲ್ಲಿ ಹೋಗುವು ದಕ್ಕೂ ಎಡೆಯಿಲ್ಲ. ಹೀಗಿರುವಾಗ ನೀನು ಏಕೆ **ಕುಂಗ್ ಷಾನ**ನ ಹತ್ತಿರ ಹೋಗಬೇಕು?" ಎಂದ. ಅದಕ್ಕೆ ಗುರು "ಇಲ್ಲಿ ಒಬ್ಬ ನನ್ನನ್ನು ಕರೆಯುತ್ತಿದ್ದಾನೆ. ಅವನೇನು ಅರ್ಥವಿಲ್ಲದೆ ಕರೆಯುತ್ತಿರುವನೆ? ನನ್ನನ್ನು ನೇಮಿಸಿಕೊಳ್ಳುವುದಕ್ಕೆ ಯಾವನಾದರೂ ಇಷ್ಟಪಟ್ಟರೆ, ಅವನ ಸಂಸ್ಥಾನವನ್ನು ಪೂರ್ವ **ಛೌ** ಸಂಸ್ಥಾನಕ್ಕೆ ಸಮನಾಗಿ ಮಾಡಬಾರದೇನು?" ಎಂದ.

೫೮

ಗುರು ಎಂದ: "ನನ್ನ ಮಕ್ಕಳೆ, ನನ್ನ ಶಿಷ್ಯರೆ, ನೀವು ಕವಿಗಳನ್ನು ಏಕೆ ಅಭ್ಯಾಸಮಾಡುವುದಿಲ್ಲ? ಕಾವ್ಯ ಮನಸ್ಸನ್ನು ಪ್ರಚೋದಿಸುತ್ತದೆ; ನೋಡುವ ದೃಷ್ಟಿ ಅದರಿಂದ ಶಿಕ್ಷಿತವಾಗುತ್ತದೆ; ಸಮಾಜದಲ್ಲಿ ಬೆರೆಯಲು ಅದರಿಂದ ಧೈರ್ಯಬರುತ್ತದೆ; ಬದುಕಿನ ಕಸಿವಿಸಿಗಳು ಅದರಿಂದ ಕೊರೆಯಾಗುತ್ತವೆ; ಮನೆಯಲ್ಲಿ ತಂದೆ ತಾಯಿಗಳಿಗೆ ಸಲ್ಲಿಸಬೇಕಾದ ಸದ್ಯದ ಕರ್ತವ್ಯವನ್ನೂ ಹೊರಗೆ ಆಚೆ ರಾಜನಲ್ಲಿ ನಡೆದುಕೊಳ್ಳಬೇಕಾದ ರೀತಿಯನ್ನೂ ಕಾವ್ಯ ಕಲಿಸುತ್ತದೆ; ಅಲ್ಲದೆ ಅನೇಕ ಹಕ್ಕಿಗಳ, ಪ್ರಾಣಿಗಳ, ಗಿಡಮರಗಳ ವಿಸ್ತಾರವಾದ ಪರಿಚಯ ಅದರಿಂದ ಆಗುತ್ತದೆ."

೫೯

"'ಸಮರ್ಪಣೆ' ಎನ್ನುತ್ತಾರೆ. ಏನು 'ಸಮರ್ಪಣೆ?' ಬರಿಯ ರತ್ನಗಳನ್ನೂ ಚೀನಾಂಬರವನ್ನೂ 'ಸಮರ್ಪಣೆ' ಎಂದು ಕರೆಯಬಹುದೆ? 'ಸಂಗೀತ' ಎನ್ನುತ್ತಾರೆ.

'ಸಂಗೀತ'ವಂತೆ! ಬರಿಯ ಗಂಟೆಗಳನ್ನೂ ತಮಟೆಗಳನ್ನೂ ಸಂಗೀತವೆಂದು ಕರೆಯಬಹುದೆ?" ಎಂದ ಕಾಂಫೂಷ.

೬೦

ಗುರು ತನ್ನ ಮಗ **ಪೊ ಯೂ**ಗೆ ಹೇಳಿದ: "**ಛೌ ನಾನ್** ಮತ್ತು **ಛಾವೊ ನಾನ್** ಎಂಬ ಪ್ರಾಚೀನ ಕಾವ್ಯ ಗ್ರಂಥಗಳನ್ನು ವ್ಯಾಸಂಗ ಮಾಡಿರುವೆಯೇನು? ಅವುಗಳನ್ನು ವ್ಯಾಸಂಗಮಾಡದವನು ಗೋಡೆಗೆದುರು ಮುಖಮಾಡಿ ನಿಂತವನ ಹಾಗೆ, ಅಲ್ಲವೆ?" ಎಂದು.

೬೧

**ಜೂ ಪೀ** ಎಂಬವನು, ಹಿಂದೆ ಕಾಂಫೂಷನ ಶಿಷ್ಯನಾಗಿದ್ದು ಅವನಿಗೆ ಅವಿಧೇಯನಾದವನು, ಒಮ್ಮೆ ಕಾಂಫೂಷನನ್ನು ಕಾಣಲು ಇಷ್ಟಪಟ್ಟ. ಕಾಂಫೂಷ ದೇಹಾಲಸ್ಯದ ನೆಪಮಾಡಿಕೊಂಡು ಅವನನ್ನು ಕಾಣುವುದು ತಪ್ಪಿಸಿಕೊಂಡ. ಅವನ ಕಡೆಯಿಂದ ಬಂದ ದೂತ ಮನೆಬಾಗಿಲನ್ನು ದಾಟುವ ವೇಳೆಗೆ ಸರಿಯಾಗಿ ತನ್ನ ತಂತ್ರೀವಾದ್ಯವನ್ನು ಕೈಗೆತ್ತಿಕೊಂಡು, **ಜೂ ಪೀ**ಯ ಕಿವಿಗೆ ಅದು ಮುಟ್ಟಲೆಂದು ಹಾಡತೊಡಗಿದ.

೬೨

**ಯೆನ್ ಹುಯಿ** ಸತ್ತಾಗ ಕಾಂಫೂಷ ಬಹುವಾಗಿ ಕಣ್ಣೀರು ಕರೆದ. ಅವನ ಅನುಯಾಯಿಗಳು "ಹೀಗೆ ದುಃಖಿಸುವೆಯಲ್ಲ!" ಎಂದರು. ಅದಕ್ಕೆ ಕಾಂಫೂಷ "ದುಃಖಪಡುತ್ತಿರುವೆನೆ? ಇವನು ಸತ್ತಾಗ ನನಗೆ

ದುಃಖವಾಗದಿದ್ದರೆ ಇನ್ನು ಯಾರಿಗಾಗಿ ನಾನು ಎಂದು ದುಃಖಪಟ್ಟೇನು ?" ಎಂದ.

೬೩

ರಾಜವಂಶದ ಪಿತೃಗಳಿಗಾಗಿ ನಡಸುವ ಮಹಾ ಯಜ್ಞಕ್ಕೆ ಏನು ಅರ್ಥವೆಂದು ಕಾಂಫೂಷನನ್ನು ಯಾರೋ ಕೇಳಿದರು. ಆದಕ್ಕೆ ಕಾಂಫೂಷ "ನನಗೆ ತಿಳಿಯದು. ಆ ಮಹಾಯಜ್ಞದ ಅರ್ಥವನ್ನು ತಿಳಿದವನು ಈ ಅಂಗೈಯನ್ನು ತಿಳಿಯುವಷ್ಟು ಸುಲಭವಾಗಿ ಈ ಪ್ರಪಂಚವನ್ನು ಆಳಬಹುದು" ಎಂದ.

೬೪

**ವಾಂಗ್‌ಸುನ್ ಛಿಯ** ಕೇಳಿದ: "ಮನೆಯ ನೈಋತ್ಯದಲ್ಲಿರುವ ದೇವತೆಯನ್ನು ಆರಾಧಿಸುವುದಕ್ಕಿಂತ ಅಡುಗೆಯ ಮನೆಯ ದೇವತೆಯನ್ನು ಆರಾಧಿಸುವುದು ಮೇಲು ಎಂದು ಹೇಳುವರಲ್ಲ, ಅದು ಏಕೆ?" ಎಂದು. ಅದಕ್ಕೆ ಕಾಂಫೂಷ "ಬುದ್ಧಿಯಿಲ್ಲದ ಮಾತು! ದೈವಕ್ಕೆ ವಿರೋಧವಾಗಿ ಪಾಪ ಮಾಡಿದರೆ, ಯಾವ ದೇವತೆ ಏನು ಕಾಪಾಡೀತು!" ಎಂದ.

೬೫

ಒಂದು ದಿನ **ಸೆ ಲು, ಸೆಂಗ್ ಷಿ, ಜನ್ ಛಿಯು** ಮತ್ತು **ಕುಂಗ್ ಷಿ ಹುವ** ಒಟ್ಟಿಗೆ ಕುಳಿತಿದ್ದಾಗ ಕಾಂಫೂಷ "ನಾನು ನಿಮಗಿಂತ ಸ್ವಲ್ಪ ಹಿರಿಯನಾದುದರಿಂದ ಏನೇನೋ ಪ್ರತಿಷ್ಠೆಪಟ್ಟುಕೊಳ್ಳುತ್ತಿದ್ದೇನೆ ಎಂದೆಣಿಸಬೇಡಿ ಜನ ನಿಮ್ಮನ್ನು ತಿಳಿದಿಲ್ಲವೆಂದು ನೀವು

ನಿಮ್ಮನಿಮ್ಮಲ್ಲಿಯೆ ಆಡಿಕೊಳ್ಳುತ್ತಿರುವಿರಿ. ಒಂದು ವೇಳೆ ಯಾರಾದರೂ ನಿಮ್ಮ ವಿಷಯ ತಿಳಿದರೆ, ಅವರಿಗೆ ನೀವು ಹೇಗೆ ಕಾಣಿಸಬೇಕೆಂಬುದು ನಿಮ್ಮ ಇಷ್ಟ? ನನಗೆ ಸ್ವಲ್ಪ ತಿಳಿಸಿ" ಎಂದ

ಒಡನೆಯೆ **ಸೆ ಲು** "ಇಬ್ಬರು ಬಲಶಾಲಿಗಳಾದ ನೆರೆಹೊರೆಯವರ ನಡುವೆ ಸಿಕ್ಕಿ, ಯುದ್ಧದ ದವಡೆಗೆ ಬಿದ್ದು, ಕ್ಷಾಮದಿಂದ ನರಳುತ್ತಿರುವ ಸಾವಿರ ರಥಗಳ ಪ್ರದೇಶವನ್ನು ನನ್ನ ಆಳ್ವಿಕೆಗೆ ಒಪ್ಪಿಸಿದರೆ ಮೂರೇ ಮೂರು ವರ್ಷಗಳಲ್ಲಿ ಆ ಜನಾಂಗವನ್ನು ವ್ಯವಸ್ಥೆಗೆ ತಂದು ಬಲಗೊಳಿಸುತ್ತೇನೆ" ಎಂದ.

ಅದಕ್ಕೆ ಕಾಂಫ್ಯೂಷ ಮುಗುಳ್ನಕ್ಕು "ನೀನು? **ಆ ಛಿಯು**?" ಎಂದ. ಅದಕ್ಕೆ **ಜನ್ ಛಿಯು** "ಅರುವತ್ತೋ ಎಪ್ಪತ್ತೋ ಅಥವಾ ಐವತ್ತೋ ಅರುವತ್ತೊ **ಲೈ** ಚದರವಿರುವ ದೇಶವನ್ನು ನನ್ನ ವಶಕ್ಕೆ ಕೊಟ್ಟರೆ, ಮೂರೇ ವರ್ಷಗಳಲ್ಲಿ ಜನರು ಹೊಟ್ಟೆತುಂಬ ಊಟಮಾಡುವುದಕ್ಕೆ ಬೇಕಾದ ವ್ಯವಸ್ಥೆ ಮಾಡುತ್ತೇನೆ ಆದರೆ ಜನರಿಗೆ ಧರ್ಮಬೋಧೆ ಮಾಡುವುದನ್ನೂ ಸಂಗೀತ ಕಲಿಸುವುದನ್ನೂ ಉತ್ತಮಪುರುಷನಿಗೆ ಬಿಟ್ಟು ಕೊಡುತ್ತೇನೆ" ಎಂದ.

ಕಾಂಫ್ಯೂಷ **ಕುಂಗ್ ಷಿ ಹುವ**ನ ಕಡೆ ತಿರುಗಿ "ನೀನು?" ಎಂದ. **ಕುಂಗ್ ಷಿ ಹುವ** "ಎಂದರೆ, ಇದನ್ನು ಮಾಡಬಲ್ಲೆ ಎಂದು ನಾನು ಹೇಳುತ್ತಿಲ್ಲ: ಆದರೆ ಕಲಿಯಲು ನನಗೆ ಮನಸ್ಸುಂಟು. ಧಾರ್ಮಿಕ

ಪೂಜೆಯಲ್ಲಿಯೂ ಅರಸರ ಪರಿಷತ್ತಿನಲ್ಲಿಯೂ ಕ್ರಿಯೆ ಗಳು ನಡೆಯುವಾಗ ಆ ಸಂದರ್ಭಕ್ಕೆ ತಕ್ಕ ವೇಷ ಭೂಷಗಳನ್ನು ಧರಿಸಿ, ಆ ಕ್ರಿಯೆಗಳಲ್ಲಿ ಸಹಾಯ ಮಾಡುವ ಸಣ್ಣ ಅಧಿಕಾರಿಯಾಗಬೇಕೆಂದು ನನ್ನ ಇಚ್ಛೆ" ಎಂದ.

ಕೊನೆಗೆ ಕಾಂಫ್ಯೂಷ **ಸೆಂಗ್ ಷಿ**ಯ ಕಡೆ ತಿರುಗಿ "ನೀನೊ?" ಎಂದ. ಅವನು ತಾನು ನುಡಿಸುತ್ತಿದ್ದ ವಾದ್ಯವನ್ನು ಮಿಡಿದು ಕೆಳಗಿಟ್ಟು, ಮಾತನಾಡಲು ಮೇಲೆದ್ದ. "ನನ್ನ ಆಸೆ ಇವರದಕ್ಕಿಂತ ತೀರ ಭಿನ್ನ ವಾದುದು" ಎಂದ. "ಚಿಂತೆಯಿಲ್ಲ, ಯಾರು ಯಾರು ಹೇಗೆ ಹೇಗೆ ಎಂಬುದನ್ನು ಕಂಡುಹಿಡಿಯಲು ಯತ್ನಿಸು ತ್ತಿದ್ದೇನೆ, ಅಷ್ಟೆ" ಎಂದ ಕಾಂಫ್ಯೂಷ. ಆಗ **ಸೆಂಗ್ ಷಿ** "ವಸಂತ ಮಾಸದಲ್ಲಿ ವಸಂತದ ಉಡುಗೆ ಸಿದ್ಧವಾಗಿರು ವಾಗ ಐದಾರು ಜನ ದೊಡ್ಡವರೊಡನೆಯೂ ಆರೇಳು ಜನ ಸಣ್ಣ ಮಕ್ಕಳೊಡನೆಯೂ **ಛಿಯಿ** ನದಿಗೆ ಹೋಗಿ ಸ್ನಾನಮಾಡಿಕೊಂಡು, ಸ್ನಾನವಾದ ಮೇಲೆ **ವುಯಿ** ವನಾಂತರಗಳ ಗಾಳಿಯನ್ನು ಸವಿಯುತ್ತ, ಹಾಡಿ ಕೊಂಡು ಮನೆಗೆ ಹಿಂದಿರುಗಬೇಕು" ಎಂದ.

ಕಾಂಫ್ಯೂಷನು ದೀರ್ಘವಾಗಿ ಉಸಿರು ತೆಗೆದು "ನೀನೀಗ ನನ್ನ ಹೃದಯಕ್ಕೆ ಮೆಚ್ಚಿನ ಮನುಷ್ಯ!" ಎಂದ.

೬೬

ಒಂದು ಸಲ ಕಾಂಫ್ಯೂಷನಿಗೆ ಕಾಯಿಲೆ ತೀವ್ರವಾಗಿ ಬದುಕುವುದೆ ಸಂದೇಹವಾಗಿತ್ತು. ಆಗ ಶಿಷ್ಯ **ಸು ಲು,**

ರಾಜ್ಯದ ಅಧಿಕಾರಿಗಳ ಮನೆಯಲ್ಲಿ ಯಾರಾದರೂ ತೀರಿ ಕೊಂಡರೆ ಅವರ ಪರಿವಾರದವರು ಸೇವೆ ಸಲ್ಲಿಸುವಂತೆ ಶಿಷ್ಯರೂ ಸಿದ್ಧರಾಗಬೇಕೆಂದು ಏರ್ಪಡಿಸಿದ. ಕಾಂಫ್ಯೂಷ ಸ್ವಲ್ಪ ಚೇತರಿಸಿಕೊಂಡ ಮೇಲೆ, ಆ ಸುದ್ದಿ ಕೇಳಿ, "ಎಲಾ, ಎಲಾ! ನನ್ನ ಬೆನ್ನ ಹಿಂದೆ ಇಷ್ಟೆಲ್ಲ ಸಿದ್ಧತೆ ನಡಸುತ್ತಿದ್ದನೆ! ನನ್ನ ಮನೆಯಲ್ಲಿ ಪರಿವಾರ ಏನೂ ಇಲ್ಲ. ಆದರೂ ನನಗೆ ಪರಿವಾರವಿರುವಂತೆ ನಟಿಸಬೇಕು ಎನ್ನುವನಲ್ಲ ಇವನು! ನಾನು ಯಾರಿಗೆ ಮೋಸಮಾಡ ಬಲ್ಲೆ? ದೈವಕ್ಕೆ ಮೋಸಮಾಡಬಲ್ಲೆನೆ?" ಎಂದ.

೬೭

ಬ್ಯಾರನ್ **ಛೆಂಗ್ ಛೆನ್** ಎಂಬವನು ತನ್ನ ಮೇಲಿನ ಒಡೆಯನಾದ ಡ್ಯೂಕ್ **ಛಿಯೆನ್** ಎಂಬವನನ್ನು ಕೊಂದುಬಿಟ್ಟ. ಆ ಸುದ್ದಿ ಕೇಳಿದೊಡನೆ ಕಾಂಫ್ಯೂ ಷನು ವಿಧ್ಯುಕ್ತವಾದ ಸ್ನಾನ ಮಾಡಿ, **ಲು** ಸಂಸ್ಥಾನದ ಡ್ಯೂಕನ ಬಳಿ ಹೋಗಿ, "ಹೀಗೆ **ಛೆಂಗ್ ಛೆನನು** ತನ್ನ ಒಡೆಯನನ್ನು ಸಂಹಾರಮಾಡಿದ್ದಾನೆ. ಅವನನ್ನು ಶಿಕ್ಷಿಸುವುದಕ್ಕಾಗಿ ಒಂದು ದಳ ಕಳುಹಿಸಬೇಕು" ಎಂದ ಡ್ಯೂಕ್ "**ಲು** ಸಂಸ್ಥಾನದ ಮೂವರು ಬ್ಯಾರನುಗಳಿಗೆ ಇದನ್ನು ತಿಳಿಸು" ಎಂದ. "ನಾನು ಇಲ್ಲಿಯ ಅಧಿಕಾರಿ ಯಾದುದರಿಂದ ಈ ವಿಷಯ ನಿನಗೆ ತಿಳಿಸಬೇಕಾದದ್ದು ನನ್ನ ಕರ್ತವ್ಯ ಎಂಬುದು ನಿಮಗೆ ತಿಳಿದೇ ಇದೆ" ಎಂದ ಕಾಂಫ್ಯೂಷ. "ಮೂವರು ಬ್ಯಾರನ್ನರಿಗೆ ತಿಳಿಸು" ಎಂದು ಪುನಃ ಡ್ಯೂಕ್ ಹೇಳಿದ ಅದರಂತೆ ಕಾಂಫ್ಯೂ ಷನು ಹೋಗಿ ಹೇಳಿದಾಗ ಮೂವರು ಬ್ಯಾರನುಗಳಿಗೂ

ಅಸಮಾಧಾನವಾಯಿತು. ಆದಕ್ಕೆ ಕಾಂಫ್ಯೂಷ “ನಾನು ಇಲ್ಲಿಯ ಅಧಿಕಾರಿಯಾದುದರಿಂದ ಈ ವಿಷಯ ನಿಮಗೆ ತಿಳಿಸಬೇಕಾದದ್ದು ನನ್ನ ಕರ್ತವ್ಯ ಎಂಬುದು ನಿಮಗೆ ತಿಳಿದೇ ಇದೆ” ಎಂದ.

೬೮

“ಭೂಮಿಯ ಮೇಲೂ ಅಂತರಿಕ್ಷದಲ್ಲೂ ಇರುವ ಪ್ರೇತಗಳಿಗೆ ಸೇವೆ ಸಲ್ಲಿಸುವುದು ಹೇಗೆ?” ಎಂದು **ಸೆ ಲು** ಕೇಳಿದ ಕಾಂಫ್ಯೂಷ ಆದಕ್ಕೆ “ಮನುಷ್ಯರ ಸೇವೆಮಾಡುವುದನ್ನೇ ನಾವು ತಿಳಿದಿಲ್ಲ. ಇನ್ನು ಪ್ರೇತಗಳ ಸೇವೆ ಏನು ತಿಳಿದೇವು?” ಎಂದ. ಸಾವನ್ನು ಕುರಿತು **ಸೆ ಲು** ಕೇಳಿದ ಇನ್ನೊಂದು ಪ್ರಶ್ನೆಗೆ ಕಾಂಫ್ಯೂಷ “ಬದುಕಿನ ವಿಷಯವೇ ನಮಗಿನ್ನೂ ತಿಳಿದಿಲ್ಲ, ಸಾವಿನ ಸುದ್ದಿ ಹೇಗೆ ಬಲ್ಲೆವು?” ಎಂದ.

೬೯

ಗುರು **ಸೆಂಗ್ ಷು**ವನ್ನು ಕುರಿತು “ನನ್ನ ಬೋಧೆಯಲ್ಲಿ ಒಂದು ಸರ್ವವ್ಯಾಪಿಯಾದ ತತ್ತ್ವವಿದೆ” ಎಂದ. “ಹೌದು” ಎಂದು **ಸೆಂಗ್ ಷು** ಒಪ್ಪಿದ ಗುರು ಅಲ್ಲಿಂದ ಹೊರಟುಹೋದ ಮೇಲೆ ಶಿಷ್ಯರು “ಅವನು ಹೇಳಿದುದರ ಅರ್ಥವೇನು?” ಎಂದು ಕೇಳಿದರು. ಅದಕ್ಕೆ **ಸೆಂಗ್ ಷು** “ನಿರ್ವಂಚನೆಯಿಂದ ಇತರರ ಹಿತಕ್ಕಾಗಿ ಕೆಲಸಮಾಡಬೇಕೆಂಬುದೇ ನಮ್ಮ ಗುರುವಿನ ಬೋಧೆ” ಎಂದ.

೭೦

**ಸು ಕುಂ** ಹೇಳಿದ: "ನಮ್ಮ ಗುರುವಿನ ಸಂಸ್ಕಾರವನ್ನೂ ನಯವನ್ನೂ ಕುರಿತು ಯಾರಾದರೂ ಕೇಳಬಹುದು ಆದರೆ ಮನುಷ್ಯನ ಸ್ವಭಾವವೆಂತಹದು, ದೈವದ ನಿಯಮಗಳು ಎಂತಹವು ಎಂಬುದನ್ನು ಕುರಿತು ಗುರು ಆಡುವ ಮಾತುಗಳನ್ನು ಕೇಳುವ ಭಾಗ್ಯ ಎಲ್ಲರಿಗೂ ದೊರಕುವುದಿಲ್ಲ" ಎಂದು

೭೧

**ಸು ಹುವ** ಕಾಂಫ್ಯೂಷನ ಶಿಷ್ಯ, ಜಾಣ, ಯಾವುದಕ್ಕೂ ಹೇಸದವ. ಒಂದು ಸಲ ಅವನು ಯಾವುದೋ ಕಾರ್ಯಗೌರವದಿಂದ ಛಿ ಸಂಸ್ಥಾನಕ್ಕೆ ಹೋಗಬೇಕಾಯಿತು. ಆಗ ತನ್ನ ತಾಯಿಗಾಗಿ ಇಷ್ಟು ಧಾನ್ಯ ಕೇಳಿದ "ಅವಳಿಗೆ ಒಂದು ಫು ಕೊಡು" ಎಂದ ಗುರು **ಸು ಹುವ** ಇನ್ನೂ ಹೆಚ್ಚು ಕೇಳಿದ "ಹೋಗಲಿ, ಒಂದು **ಯುಊ** ಕೊಡು" ಎಂದ ಗುರು **ಸು ಹುವ** ಅವಳಿಗೆ ಐದು **ಪಿಂಗ್** ಕೊಟ್ಟ. ಗುರು ಅದಕ್ಕೆ ಹೇಳಿದ: "ಛಿ ಸಂಸ್ಥಾನಕ್ಕೆ **ಸು ಹುವ** ಹೊರಟಾಗ ಸೊಗನಾದ ಕುದುರೆಯ ಗಾಡಿಯಲ್ಲಿ ಅಲಂಕಾರ ಮಾಡಿಕೊಂಡು ಹೊರಟ. ಪ್ರಾಜ್ಞನಾದವನು ಗತಿಯಿಲ್ಲದವರಿಗೆ ನೆರವಾಗುವನೆ ಹೊರತು ಹಣವುಳ್ಳವರ ಸಂಪತ್ತನ್ನು ಹೆಚ್ಚಿಸುವುದಿಲ್ಲ ಎಂದು ಕೇಳಿದ್ದೇನೆ" ಎಂದು.

**ಯುುವನ್ ಸ್ಸು** ಇನ್ನೊಬ್ಬ ಶಿಷ್ಯ; ಬಹು ವಿನೀತ. ಅವನು ಒಂದು ಜಿಲ್ಲೆಗೆ ಅಧಿಕಾರಿಯಾಗಿ ನೇಮಕವಾದಾಗ ಗುರು ಅವನಿಗೆ ಒಂಬತ್ತುನೂರು ದೊಡ್ಡ

ಅಳತೆ ಧಾನ್ಯವನ್ನು ಕೊಟ್ಟ. ಅವನು ಅದನ್ನು ಸ್ವೀಕರಿಸಲು ಒಪ್ಪಲಿಲ್ಲ. ಅದಕ್ಕೆ ಗುರು "ಬೇಡವೆಂದು ತಳ್ಳಬೇಡ. ನಿನ್ನ ಅಧೀನದಲ್ಲಿರುವ ಊರು, ಹಳ್ಳಿ, ಮನೆ, ಮಠಗಳಲ್ಲಿ ಇದನ್ನು ದಾನಮಾಡಬಹುದಲ್ಲವೆ?" ಎಂದ.

೭೨

ವೀ ಸಂಸ್ಥಾನದ **ಡ್ಯೂಕ್ ಲಿಂಗ್** ಎಂಬವನ ಹೆಂಡತಿ **ನಾನ್ ಸು** ಸುಂದರಿ, ಆದರೆ ನಡತೆ ಕೆಟ್ಟವಳು ಕಾರ್ಯಗೌರವದಿಂದ ಗುರು ಆಕೆಯನ್ನು ಹೋಗಿ ಕಾಣಬೇಕಾಯಿತು. ಅದಕ್ಕೆ ಶಿಷ್ಯನಾದ **ಸು ಲು** ತನ್ನ ಅಸಮಾಧಾನವನ್ನು ಸ್ಪಷ್ಟಪಡಿಸಿದ ಆಗ ಗುರು "ನಾನು ನಡತೆಯಲ್ಲಿ ಏನಾದರೂ ತಪ್ಪಿರುವೆನಾದರೆ ದೈವ ನನ್ನನ್ನು ತಿರಸ್ಕರಿಸಲಿ! ದೈವ ನನ್ನನ್ನು ತಿರಸ್ಕರಿಸಲಿ!" ಎಂದು ಆಣೆಯಿಟ್ಟುಕೊಂಡ.

೭೩

ಗುರು **ಯೆನ್ ಯುವಾನ**ನನ್ನು ಕುರಿತು "ಅಗತ್ಯವೊದಗಿದಾಗ ಅಧಿಕಾರವನ್ನು ಸ್ವೀಕರಿಸಿ, ಆಚೆ ತಳ್ಳಿದಾಗ ಶಾಂತವಾಗಿ ವಿರಮಿಸುವ ಮನೋಗುಣವಿರುವವರು ನಾವಿಬ್ಬರು ಮಾತ್ರ" ಎಂದ. ಆಗ **ಸು ಲು** "ಗುರುವೆ, ಒಂದುವೇಳೆ ಒಂದು ದೊಡ್ಡ ಸಂಸ್ಥಾನದ ಸೈನ್ಯಗಳನ್ನು ನಡಸುವ ಭಾರ ನಿನ್ನಪಾಲಿಗೆ ಬಂದರೆ, ನಿನ್ನ ಜೊತೆಗೆ ಎಂತಹವನನ್ನು ಕರೆದುಕೊಳ್ಳುವೆ?" ಎಂದು ಕೇಳಿದನು. ಅದಕ್ಕೆ ಗುರು "ಹುಲಿ ಹಿಡಿಯುವುದಕ್ಕೆ ಬರಿಗೈಯಿಂದ ಹೋಗುವವನನ್ನಾಗಲಿ

ಸಾಯುವೆನೆಂಬ ಚಿಂತೆಯೇ ಇಲ್ಲದೆ ಹೊಳೆಗೆ ಹಾರುವವನನ್ನಾಗಲಿ ನಾನು ನನ್ನ ಜೊತೆಗ ಸೇರಿಸುವುದಿಲ್ಲ. ನನ್ನ ಜೊತೆಗೆ ಒಬ್ಬ ಬೇಕೇಬೇಕಾದರೆ ಎಂಥವನನ್ನು ಆಯ್ದುಕೊಳ್ಳುವೆನು ಗೊತ್ತೆ? ಯುದ್ಧದಲ್ಲಿ ಏನಾದೀತೋ ಎಂಬ ಭೀತಿಯಿಟ್ಟುಕೊಂಡು, ಯುಕ್ತಿಯಿಂದ ನಡೆದು ಜಯ ಸಂಪಾದಿಸಬೇಕೆಂಬ ಮನಸ್ಸಿರುವವನನ್ನೇ ಆಯುತ್ತೇನೆ" ಎಂದ

೭೪

ಒಂದು ಸಲ "ಕಾಂಫೂಷನು ಇದು ಮಾಡಿದುದು ತಪ್ಪು" ಎಂದು ಯಾರೋ ಎಂದರು ಅದು ತನ್ನಕಿವಿಗೆ ಬಿದ್ದಾಗ ಗುರು "ನಾನು ನಿಜವಾಗಿಯೂ ಭಾಗ್ಯವಂತ. ನಾನು ಒಂದು ತಪ್ಪುಮಾಡಿದರೆ, ಅದು ಒಡನೆಯೇ ಎಲ್ಲರಿಗೂ ತಿಳಿದುಬಿಡುತ್ತದೆ" ಎಂದ

೭೫

**ಛ್ಯಾಂಗ್ ಛು** ಮತ್ತು **ಛಿಯೆ ನಿ** ಎಂಬ ಇಬ್ಬರು ತಮ್ಮ ಭೂಮಿಯನ್ನು ಒಟ್ಟಿಗೆ ಉಳುತ್ತಿದ್ದಾಗ ಕಾಂಫೂಷನು ಆ ಹಾದಿಯಲ್ಲಿ ಹಾದುಹೋಗುತ್ತ "ಇಲ್ಲಿ ಹೊಳೆ ಹಾಯುವ ಕಡುವು ಎಲ್ಲಿದೆ?" ಎಂದು ಕೇಳಲು **ಸು ಲು**ವನ್ನು ಕಳಿಸಿದ.

"ರಥದಲ್ಲಿ ಕುದುರೆಯ ಹಗ್ಗ ಹಿಡಿದಿರುವುದು ಯಾರು?" ಎಂದು **ಛ್ಯಾಂಗ್ ಛು** ಕೇಳಿದ "ಕಾಂಫೂಷ" ಎಂದ **ಸು ಲು.** "ಯಾರು? **ಲು** ಪ್ರಾಂತ್ಯದವನೇ?" ಎಂದು **ಛ್ಯಾಂಗ್ ಛು** ಕೇಳಿದ. **ಸು ಲು** "ಹೌದು"

ಎಂದ "ಹಾಗಾದರೆ ಅವನಿಗೆ ಹಾಯಿಕಡುವು ಗೊತ್ತು"
ಎಂದ **ಛ್ಯಾಂಗ್ ಛು.**

**ಛಿಯೆ ನಿ**ಯನ್ನು ಕೇಳಿದ **ಸು ಲು.** "ನೀನು ಯಾರು ?" ಎಂದ **ಛಿಯೆ ನಿ.** "ನಾನು **ಸು ಲು**" ಎನ್ನಲು "**ಲು** ಪ್ರಾಂತದ ಕಾಂಫ್ಯೂಷನ ಶಿಷ್ಯನೇನು ?" ಎಂದ. 'ಹೌದು' ಎಂದ **ಸು ಲು.** ಅದಕ್ಕೆ **ಛಿಯೆ ನಿ** "ದಿನ ದಿನವೂ ಏರುತ್ತಿರುವ ಪ್ರವಾಹದಂತೆ ಪ್ರಪಂಚ ವೆಲ್ಲ ಕೊಚ್ಚಿಕೊಂಡು ಹೋಗುತ್ತಿದೆಯಲ್ಲ! ಇದನ್ನು ಸರಿಪಡಿಸುವವರು ಯಾರು ? ನೀನಾದರೂ. ಪ್ರಾಂತ್ಯ ದಿಂದ ಪ್ರಾಂತ್ಯಕ್ಕೆ ಓಡಿ ಹೋಗುತ್ತಿರುವ ನಾಯಕ ನನ್ನು ಹಿಂಬಾಲಿಸುವುದು ಬಿಟ್ಟು ಸಂಪೂರ್ಣವಾಗಿ ಪ್ರಪಂಚವನ್ನೇ ತೊರೆದು ಹೋಗುವವರ ಹಿಂದೆ ಏಕೆ ಹೋಗಬಾರದು ?" ಎಂದು, ಬಿತ್ತಿದ್ದ ಕಾಳನ್ನು ಕೈಯ ಕೋಲಿನಿಂದ ಕೆದಕುತ್ತಲೇ ಹೇಳಿದ

**ಸು ಲು** ಹಿಂದಿರುಗಿ, ಅವರು ಹೇಳಿದುದನ್ನು ಗುರು ವಿಗೆ ತಿಳಿಸಿದ ಕಾಂಫ್ಯೂಷ ಅದಕ್ಕೆ ಆಶ್ಚರ್ಯಪಟ್ಟು, "ನಾನು ಹಕ್ಕಿಗಳೊಡನೆಯೂ ಮೃಗಗಳೊಡನೆಯೂ ಬೆರೆತುಕೊಳ್ಳಲಾರೆ ಮಾನವರೊಡನೆ ನಾನು ಸಹ ವಾಸ ಮಾಡಬಾರದಾದರೆ, ಯಾರೊಡನೆ ನಾನು ಸೇರಿ ಕೊಳ್ಳಬೇಕು ? ಪ್ರಪಂಚದಲ್ಲಿ ಧರ್ಮವು ಮೇಲುಗೈ ಯಾಗಿದ್ದಿದ್ದರೆ ಈ ಸುಧಾರಣೆಯ ಕಾರ್ಯಕ್ಕೆ ನಾನು ಕೈಹಾಕಬೇಕಾಗಿರಲಿಲ್ಲ" ಎಂದ.

೭೬

**ಛಿಂಪೆನ್ ಸು ಛಿಯಿನ್** ಎಂಬವನು ಒಮ್ಮೆ **ಸು ಕುಂ** ಅನ್ನು ಕುರಿತು "ನಿನಗೆ ನಮ್ರತೆ ಬಹಳ. ನಿನಗಿಂತ ಕಾಂಫೂಷನು ಉತ್ತಮನೆಂದು ಎಣಿಸುವುದು ಹೇಗೆ ಸಾಧ್ಯ?" ಎಂದ. ಅದಕ್ಕೆ **ಸು ಕುಂ** "ವಿದ್ಯಾವಂತನು ಆಡಿದ ಒಂದು ಮಾತಿನಿಂದ ಬುದ್ಧಿವಂತನೆನ್ನಿಸಿಕೊಳ್ಳುತ್ತಾನೆ, ಆಡಿದ ಒಂದು ಮಾತಿನಿಂದ ಬುದ್ಧಿಹೀನನೆನ್ನಿಸಿಕೊಳ್ಳುತ್ತಾನೆ. ಆದಕಾರಣ ಆಡುವ ಮಾತಿನಲ್ಲಿ ಪ್ರಮಾದವಿರಬಾರದು. ಏಣಿಯನ್ನು ಹಾಕಿಕೊಂಡು ಗಗನಕ್ಕೆ ಹತ್ತುವುದು ಎಷ್ಟು ಅಸಾಧ್ಯವೋ ನಮ್ಮ ಗುರುವಿನ ಸಮನಾಗುವುದು ಕೂಡ ಅಷ್ಟೇ ಅಸಾಧ್ಯ. ಒಂದು ದೇಶದ ಆಡಳಿತ ತಂತ್ರ ನಮ್ಮ ಗುರುವಿನ ಕೈಗೆ ಬರುವುದಾದರೆ, ಹೇಗೆ ಅವನು ಎತ್ತಿ ನಿಲ್ಲಿಸಿದರೆ ಹಾಗೆ ಜನ ಎದ್ದು ನಿಲ್ಲುತ್ತಾರೆ: ಅವನು ನಡಸಿದಂತೆ ಅನುಸರಿಸುತ್ತಾರೆ; ಜನರಿಗೆ ಅವನು ಶಾಂತಿ ತರುತ್ತಾನೆ. ಜನ ಅವನಿಗೆ ಶರಣು ಹೋಗುತ್ತಾರೆ; ಅವನ ಪ್ರಭಾವದಿಂದ ಜನರಲ್ಲಿ ಸಾಮರಸ್ಯ ಬೆಳೆಯುತ್ತದೆ; ಅವನ ಬದುಕು ಭವ್ಯವಾದುದು, ಅವನ ಸಾವು ಸರ್ವರೂ ಶೋಕಪಡುವಂತಹದು. ಇಂಥವನಿಗೆ ಸಮಾನನಾಗುವುದು ಹೇಗೆ ಸಾಧ್ಯ?" ಎಂದ.

# ಅಧಿಮಾನವ ಕಾಂಫ್ಯೂಷ

## ಕಾಂಫ್ಯೂಷನ ನಡೆವಳಿ

ಕಾಂಫ್ಯೂಷ ಚಿಕ್ಕಂದಿನಲ್ಲಿಯೇ ತನ್ನ ತಂದೆಯನ್ನು ಕಳೆದುಕೊಂಡರೂ, ತಾಯ ರಕ್ಷಣೆಯಲ್ಲಿ ಗುಣಾಢ್ಯನಾಗಿ ವಿದ್ಯಾವಂತನಾಗಿ ಬೆಳೆದು, ದೇಶಹಿತಕ್ಕಾಗಿ ದುಡಿಯಬೇಕೆಂಬ ಧ್ಯೇಯವಾದಿಯಾದ; ಕ್ರಿಯಾಕರ್ಮಿಯಾದ. ಕೇವಲ ಇಪ್ಪತ್ತೆರಡನೆಯ ವಯಸ್ಸಿನ ವೇಳೆಗೇ ಆತನ ವಿದ್ಯಾಬುದ್ಧಿಗಳ, ಗುಣಶೀಲಗಳ ಪ್ರಖ್ಯಾತಿ ಆತನ ಬಳಿಗೆ ಅನೇಕ ಶಿಷ್ಯರನ್ನು ಸಂಪಾದಿಸಿ ತಂದಿತ್ತು. ಅವರಲ್ಲಿ ಹಲವರು ಆಜೀವಪರ್ಯಂತವಾಗಿ ಆತನ ಶಿಷ್ಯವೃತ್ತಿಯನ್ನು ಕೈಕೊಂಡು, ಆತನ ಜೀವನಮಾರ್ಗವನ್ನು ಜನಸಾಮಾನ್ಯರಿಗೆ ತಿಳಿಸಿಕೊಡುವ ಕಾರ್ಯದಲ್ಲಿ ಸಮಭಾಗಿಗಳಾದರು ಅಷ್ಟೇ ಅಲ್ಲ, ಗುರುವಾದ ಕಾಂಫ್ಯೂಷನಿಗೆ ಒದಗಿದ ಕಷ್ಟನಿಷ್ಠುರಗಳಲ್ಲಿ ಶಿಷ್ಯರಾದ ತಾವೂ ಸಮಭಾಗಿಗಳಾದರು.

ಕಾಂಫ್ಯೂಷ ತನ್ನ ಕಾಲದಲ್ಲಿ ತಾನೇನೂ ಸುಖ ಕಾಣಲಿಲ್ಲ. ಸುಖವೆಂದರೆ ಆತನಿಗೆ ವೈಯಕ್ತಿಕವಾದುದಲ್ಲ; ಅದನ್ನು ಆತ ಆಶಿಸಲೂ ಇಲ್ಲ, ನಿರೀಕ್ಷಿಸಲೂ ಇಲ್ಲ. ಆದರೆ ಆತ ತನ್ನ ಕಣ್ಣ ಮುಂದೆ ಸದಾ ಇಟ್ಟುಕೊಂಡಿದ್ದ ಚೀನದ ಹಿತಸಾಧನೆ ಕೂಡ ಆತನಿಗೆ ತೃಪ್ತಿಯಾಗುವಂತೆ ನಡೆಯಲಿಲ್ಲ. ಅದು ನಡೆಯುವುದಕ್ಕೆ ಆಗಿನ ಚೀನದ ಆಳರಸರು ಕಾಂಫ್ಯೂಷನಿಗೆ ಸಾಕಷ್ಟು ಅನುಕೂಲಮಾಡಿಕೊಡಲಿಲ್ಲ. ಅದು ಮಾತ್ರವಲ್ಲ, ತನ್ನ

ಧ್ಯೇಯಸಾಧನೆಯ ಕನಸನ್ನು ನನಸಾಗಿಸುವುದಕ್ಕಾಗಿ ಕಾಂಫ್ಯೂಷ ಸ್ವದೇಶಭ್ರಷ್ಟನಾಗಲೂ ಬೇಕಾಯಿತು. ಆದರೂ ಇಷ್ಟರಿಂದ ಕಾಂಫ್ಯೂಷ ಎದೆಗುಂದಲಿಲ್ಲ, ಪ್ರಯತ್ನಮಾಡಲು ಪರಾಕ್ರಮಿಸಿದನಲ್ಲದೆ ಇಟ್ಟ ಹೆಜ್ಜೆ ಹಿಂದೆಗೆಯಲಿಲ್ಲ. ಹಾಗೇ ತನ್ನ ಎಪ್ಪತ್ತೆರಡನೆಯ ವಯಸ್ಸಿನವರೆಗೂ ಐವತ್ತು ವರ್ಷಕಾಲ ಕರ್ಮಯೋಗಿಯಾಗಿಯೇ ಬದುಕಿ, ಬಾಳಿ, ಮುಗಿದ.

ತಾನು ಹಿಡಿದ ಕೆಲವು ತತ್ವಗಳಿಗಾಗಿಯೇ ಬದುಕಿ, ತೀವ್ರವಾದ ರುಚಿ ಅರುಚಿಗಳನ್ನೂ ರಾಗ ವಿರಾಗಗಳನ್ನೂ ಇಷ್ಟ ಅನಿಷ್ಟಗಳನ್ನೂ ಬೆಳಸಿಕೊಂಡ ಕಾಂಫ್ಯೂಷನ ಅನುದಿನದ ಸಾಮಾನ್ಯ ವ್ಯವಹಾರಗಳಲ್ಲಿ ಆತನಿಗೆ ಮಾತ್ರ ವಿಶಿಷ್ಟವಾದ ಕೆಲವು ನಡೆವಳಿಗಳನ್ನು ಸೂಕ್ಷ್ಮವಾಗಿ ಗಮನಿಸಿ, ಆತನ ವ್ಯಕ್ತಿಚಿತ್ರವನ್ನು ಮತ್ತಷ್ಟು ಸ್ಫುಟಗೊಳಿಸುವಂತೆ, ಆತನ ಶಿಷ್ಯರು **ಲುನ್-ಯು** ಗ್ರಂಥದಲ್ಲಿ ಹಲವು ವಚನಗಳನ್ನು ಕಟ್ಟಿಕೊಟ್ಟಿದ್ದಾರೆ

೭೭

ವಿರಾಮ ಕಾಲದಲ್ಲಿ ಗುರುವಿನ ಗಂಭೀರ ಮುದ್ರೆ ಸಡಿಲವಾಗಿ ಅವನ ಮುಖ ಸುಪ್ರಸನ್ನವಾಗುತ್ತಿತ್ತು.

೭೮

ಸತ್ತವರಿಗಾಗಿ ದುಃಖಿಸುವವನ ಪಕ್ಕದಲ್ಲಿ ಊಟಕ್ಕೆ ಕುಳಿತಾಗ ಗುರು ಹೊಟ್ಟೆ ತುಂಬ ಊಟಮಾಡುತ್ತಿರಲಿಲ್ಲ. ಸತ್ತವರಿಗಾಗಿ ಶೋಕಪಟ್ಟ ದಿವಸ ತಾನು ಹಾಡುತ್ತಿರಲಿಲ್ಲ.

ತುಂಬ ಮರುಕದಿಂದ ಗುರು ಪ್ರಸ್ತಾಪಿಸುತ್ತಿದ್ದ ವಿಷಯಗಳೆಂದರೆ: ಉಪವಾಸ, ಯುದ್ಧ ಮತ್ತು ರೋಗ.

೮೦

ಗುರು ಆಗಾಗ್ಗೆ ಎತ್ತಿಕೊಂಡು ಮಾತನಾಡುತ್ತಿದ್ದ ವಿಷಯಗಳೆಂದರೆ ಪ್ರಾಚೀನ ಕಾವ್ಯ ಭಾಗಗಳು, ಇತಿಹಾಸ, ಮತ್ತು ಕ್ರಿಯಾಕಾಂಡ. ಇವುಗಳನ್ನು ಸದಾ ಪ್ರಸ್ತಾಪಿಸುತ್ತಿದ್ದ.

೮೧

ಗುರು ಪವಾಡಗಳನ್ನೂ ವೀರಕಥೆಗಳನ್ನೂ ನಿಯಮ ವಿರುದ್ಧವಾದ ನಡೆವಳಿಗಳನ್ನೂ ಅತಿಮಾನುಷ ವೃತ್ತಗಳನ್ನೂ ಕುರಿತು ಚರ್ಚೆಮಾಡುತ್ತಿರಲಿಲ್ಲ

೮೨

ಸಂಸ್ಕೃತಿ, ಸದಾಚಾರ, ಆತ್ಮಸಾಕ್ಷಿಯಿಂದ ಕೆಲಸ ಮಾಡುವುದು ಮತ್ತು ಶ್ರದ್ಧೆ ಎಂಬ ಈ ನಾಲ್ಕನ್ನು ಗುರು ತನ್ನ ಪಾಠಕ್ಕೆ ವಸ್ತುವಾಗಿ ಎತ್ತಿಕೊಳ್ಳುತ್ತಿದ್ದ.

೮೩

ಗುರು ಯಾರ ಜೊತೆಯಲ್ಲಿಯಾದರೂ ಇದ್ದಾಗ ಅವರು ಹಾಡಿ, ಆ ಹಾಡು ಚೆನ್ನಾಗಿದ್ದರೆ, ತಪ್ಪದೆ ಅದನ್ನು ಪುನಃ ಹಾಡಿಸುತ್ತಿದ್ದ. ಅಷ್ಟೇ ಅಲ್ಲ, ತಾನೂ ಜೊತೆಗೆ ಕೂಡಿ ಹಾಡುತ್ತಿದ್ದ.

೮೪

ಗುರು ವಿಶ್ವಾಸ ತೋರಿಸುತ್ತಿದ್ದರೂ ಘನವಾಗಿದ್ದ; ಆಜ್ಞೆ ಮಾಡುತ್ತಿದ್ದರೂ ಅಧಿಕಾರದ ದರ್ಪವಿರುತ್ತಿರ

ಲಿಲ್ಲ; ನಯವಾಗಿ ನುಡಿಸುತ್ತಿದ್ದರೂ ಸಲುಗೆಯಾಗುತ್ತಿರಲಿಲ್ಲ.

೮೫

ಲಾಭವನ್ನಾಗಲಿ, ದೈವೇಚ್ಛೆಯನ್ನಾಗಲಿ ಪರಿಪೂರ್ಣತೆಯನ್ನಾಗಲಿ ಕುರಿತು ಗುರು ಮಾತನಾಡುತ್ತಿದ್ದುದು ತೀರ ವಿರಳ.

೮೬

ಗುರು ಯಾವುದರ ಬಗ್ಗೆಯೂ 'ಇದು ಹೀಗೆಯೇ ಇರಬಹುದು' ಎಂದು ಮೊದಲೇ ಭಾವಿಸುತ್ತಿರಲಿಲ್ಲ; 'ಇದು ಹೀಗೆಯೇ ಇರಬೇಕು' ಎಂದು ಮೊದಲೇ ನಿರ್ಧರಿಸುತ್ತಿರಲಿಲ್ಲ; ತನ್ನದೇ ಸರಿಯೆಂದು ಹಟ ಹಿಡಿಯುತ್ತಿರಲಿಲ್ಲ; ಅಹಂಭಾವ ಹೊಂದಿರಲಿಲ್ಲ. ಈ ನಾಲ್ಕನ್ನೂ ಪೂರ್ಣವಾಗಿ ಕಳೆದುಕೊಂಡಿದ್ದ.

೮೭

ಸತ್ತವರಿಗಾಗಿ ಶೋಕಪಡುವವರನ್ನೋ ಅಧಿಕಾರದ ಅಂಗವಸ್ತ್ರ ಧರಿಸಿದವರನ್ನೋ ಅಥವಾ ಕಣ್ಣು ಕಾಣದವರನ್ನೋ ಕಂಡರೆ, ಅವರು ತನಗಿಂತ ವಯಸ್ಸಿನಲ್ಲಿ ಕಿರಿಯರಾದರೂ ಗುರು ತಪ್ಪದೆ ಎದ್ದು ನಿಲ್ಲುತ್ತಿದ್ದ. ಒಂದು ವೇಳೆ ಅಂಥವರನ್ನು ದಾಟಿಹೋಗಬೇಕಾದಾಗ ತ್ವರೆಯಿಂದ ಹೆಜ್ಜೆ ಹಾಕುತ್ತಿದ್ದ.

೮೮

ಕಾಂಫ್ಯೂಷನು ಮೀನು ಹಿಡಿಯಬೇಕಾದರೆ ಗಾಳ ಹಾಕುತ್ತಿದ್ದನೆ ಹೊರತು ಬಲೆ ಬೀಸುತ್ತಿರಲಿಲ್ಲ. ಬಿಲ್ಲಿನಿಂದ ಹಕ್ಕಿ ಹೊಡೆಯುವಾಗ ಹಾರದೆ ಕುಳಿತಿದ್ದ ಹಕ್ಕಿಯ ಮೇಲೆ ಬಾಣ ಬಿಡುತ್ತಿರಲಿಲ್ಲ.

೪೯

ಕಾಂಫ್ಯೂಷ ತನ್ನ ಸ್ವಗ್ರಾಮದಲ್ಲಿದ್ದಾಗ 'ಇವನಿಗೆ ಮಾತೇ ಬಾರದೋ' ಎನ್ನುವಷ್ಟು ಸರಳವಾಗಿರುತ್ತಿದ್ದ. ಆದರೆ ದೇವಾಗಾರದಲ್ಲೋ ರಾಜಸಭೆಯಲ್ಲೋ ಮಾತನಾಡಬೇಕಾದಾಗ, ತನ್ನ ಘನತೆಯನ್ನು ಕಾಪಾಡಿಕೊಂಡು ಕೇಳಿದೊಡನೆ ಸ್ಪಷ್ಟವಾಗಿ ಮಾತಾಡುತ್ತಿದ್ದ.

೫೦

ರಾಜಸಭೆಯಲ್ಲಿ ತನ್ನ ಅಂತಸ್ತಿನ ಮಂತ್ರಿಗಳೊಡನೆ ಸಂಭಾಷಿಸುವಾಗ, ಧೈರ್ಯವಾಗಿ ಮಾತನಾಡುತ್ತಿದ್ದ; ತನಗಿಂತ ಮೇಲಿನವರೊಡನೆ ಗೌರವದಿಂದ ಮಾತನಾಡುತ್ತಿದ್ದ; ರಾಜನು ಎದುರಿಗಿದ್ದಾಗ ಮಾತ್ರ, ಮನಸ್ಸನ್ನು ಹತೋಟಿಯಲ್ಲಿಟ್ಟುಕೊಂಡಿದ್ದರೂ ಎಲ್ಲಿ ಏನು ತಪ್ಪಿಯೇನೋ ಎಂದು ಅಂಜುತ್ತಿದ್ದ.

೫೧

ಬಂದ ಯಾವನಾದರೂ ಅಭ್ಯಾಗತನನ್ನು ಸತ್ಕರಿಸಬೇಕೆಂದು ರಾಜನು ಹೇಳಿಕಳಿಸಿದಾಗ, ಅವನ ಮುಖಭಾವ ಬದಲಾಗುತ್ತಿತ್ತು, ಅವನ ಮೊಣಕಾಲುಗಳು ಮಡಿಚಿಕೊಂಡಂತಾಗುತ್ತಿದ್ದುವು. ತನ್ನ ಎಡಗಡೆಯೋ ಬಲಗಡೆಯೋ ನಿಂತವರಿಗೆ ನಮಸ್ಕಾರಮಾಡುವಾಗ, ಅವನ ಮೈಮೇಲಿನ ಉಡುಪು ಮುಂದುಗಡೆಯೂ ಹಿಂದುಗಡೆಯೂ ಸುಕ್ಕುಗಳಿಲ್ಲದೆ ನೇರವಾಗಿ ಇಳಿಬಿದ್ದಿರುತ್ತಿತ್ತು. ಅವನು ತ್ವರೆಯಿಂದ ಮುಂದೆ ನಡೆದಾಗ, ಎರಡೂ ಕಡೆ ರೆಕ್ಕೆಗಳನ್ನು ಬಿಚ್ಚಿಕೊಂಡಂತಿರುತ್ತಿತ್ತು. ಬಂದವನನ್ನು ಬೀಳ್ಕೊಟ್ಟು, ಅವನು ಹೋದಮೇಲೆ,

"ಬಂದಿದ್ದ ಅತಿಥಿ ಹಿಂದಿರುಗಿ ನಮ್ಮ ಕಡೆ ಇನ್ನು ನೋಡುತ್ತಿಲ್ಲ" ಎಂದು ಬಂದು ವರದಿಮಾಡುತ್ತಿದ್ದ.

೯೨

ಅರಮನೆಯ ಬಾಗಿಲೊಳಗೆ ಬಂದಾಗ, ತನ್ನ ಪ್ರವೇಶಕ್ಕೆ ಬಾಗಿಲ ಎತ್ತರ ಸಾಲದೋ ಎಂಬಂತೆ ಬಾಗಿ ಬರುತ್ತಿದ್ದ. ಅವನು ಎಂದೂ ಬಾಗಿಲ ಮಧ್ಯೆ ನಿಲ್ಲುತ್ತಿರಲಿಲ್ಲ, ಹೊರಗೆ ಹೋಗುವಾಗ ಹೊಸಲನ್ನು ತುಳಿಯುತ್ತಿರಲಿಲ್ಲ. ಸಿಂಹಾಸನದ ಬಳಿ ಹಾದು ಹೋಗುವಾಗ ಮುಖಭಾವಗಳನ್ನು ಅಡಗಿಸಿಕೊಳ್ಳುತ್ತಿದ್ದ, ಮೊಣಕಾಲಬಳಿ ಮಡಿಸಿದಂತೆ ಕಾಣುತ್ತಿತ್ತು, ಮಾತನಾಡಲು ಆಗದೊ ಎನ್ನುವಂತಿರುತ್ತಿತ್ತು. ರಾಜಸಭೆಗೆ ಹತ್ತಿ ಹೋಗುವಾಗ, ಉಟ್ಟ ಬಟ್ಟೆಯನ್ನು ಕೈಯಲ್ಲಿ ಹಿಡಿದು, ಬಗ್ಗಿಕೊಂಡಂತೆ ಕಾಣಿಸಿ, ಉಸಿರುಬಿಡಲು ಹೆದರಿದವನಂತೆ ಉಸಿರು ಹಿಡಿಯುತ್ತಿದ್ದ. ಸಭೆಯಿಂದ ಹೊರಗೆ ಬಂದು, ಮೊದಲ ಮೆಟ್ಟಿಲು ಇಳಿದಮೇಲೆ, ಮುಖಭಾವದ ಬಿಗಿತ ಸಡಿಲವಾಗುತ್ತಿತ್ತು. ಮೆಟ್ಟಿಲ ಬುಡಕ್ಕೆ ಬಂದಾಗ, ರೆಕ್ಕೆಗಳನ್ನು ಹರಡಿಕೊಂಡಂತೆ ತ್ವರೆಯಿಂದ ಮುಂದೆ ಹೋಗಿ, ತನ್ನ ಸ್ಥಾನವನ್ನು ಸೇರಿದಮೇಲೆ ಗೌರವದಿಂದ ಅಳುಕುತ್ತಿದ್ದ.

೯೩

ರಾಜದಂಡವನ್ನು ಎತ್ತಿಕೊಂಡು ಹೋಗುವಾಗ ಅದರ ಭಾರಕ್ಕೆ ತನ್ನ ಸಾಮರ್ಥ್ಯ ಸಾಲದೆಂಬಂತೆ — ನಮಸ್ಕಾರ ಮಾಡುವಾಗ ಬಗ್ಗುವುದಕ್ಕಿಂತ ಹೆಚ್ಚಾಗದಂತೆ, ಸಮರ್ಪಣೆ ಮಾಡುವಾಗ ಬಗ್ಗುವುದಕ್ಕಿಂತ

ಕಡಮೆಯಾಗದಂತೆ—ಬೆನ್ನು ಬಗ್ಗಿಸುತ್ತಿದ್ದ; ಮುಖದಲ್ಲಿ ಚಿಂತೆ, ಕಾತರ ತುಂಬಿರುತ್ತಿತ್ತು; ಕಾಲಿಗೆ ಏನೋ ಭಾರ ಕಟ್ಟಿಕೊಂಡಂತೆ ಕಾಲೆಳೆದುಕೊಂಡು ಹೋಗು ತ್ತಿದ್ದ. ಇತರರು ಕಳಿಸಿಕೊಟ್ಟ ಸಮರ್ಪಣೆಗಳನ್ನು ಒಪ್ಪಿಸುವಾಗ ಮುಖ ಸರಳವಾಗುತ್ತಿತ್ತು. ಅನಂತರ ಅಂತರಂಗದಲ್ಲಿ ರಾಜನನ್ನು ಕಂಡಾಗ ವಿಶ್ವಾಸದಿಂದ ನಡೆದುಕೊಳ್ಳುತ್ತಿದ್ದ

೯೪

ಕೆಂಪು, ರಕ್ತಕೆಂಪು, ನೀಲಿಬೆರಸಿದ ಕೆಂಪು, ಈ ಬಣ್ಣಗಳ ವಸ್ತ್ರಗಳನ್ನು ಒಳಗಾಗಲಿ ಹೊರಗಾಗಲಿ ಧರಿಸುತ್ತಿರಲಿಲ್ಲ. ಸೆಕೆ ದಿನಗಳಲ್ಲಿ, ಒಂದೇ ಪದರದ ಮೇಲಂಗಿಯನ್ನು ಒಂದರಮೇಲೆ ಒಂದು ಧರಿಸುತ್ತಿದ್ದ. ಕರಿಯ ವಸ್ತ್ರದೊಡನೆ ಕರಿಯ ಕುರಿಚರ್ಮವನ್ನೂ, ತೆಳು ಬಣ್ಣದ ಬಟ್ಟೆಯ ಜೊತೆಗೆ ಜಿಂಕೆಚರ್ಮವನ್ನೂ ಹಳದಿಯ ವಸ್ತ್ರದೊಡನೆ ನರಿಯಚರ್ಮವನ್ನೂ ಬಳಸು ತ್ತಿದ್ದ. ಒಳಗೆ ಹಾಕಿಕೊಳ್ಳುತ್ತಿದ್ದ ತುಪಟದ ನಿಲು ವಂಗಿ ಉದ್ದವಾಗಿತ್ತು, ಅದರ ಬಲತೋಳು ಮೊಟಕಾ ಗಿತ್ತು. ಮಲಗುವಾಗ ಧರಿಸುವ ಬಟ್ಟೆಯ ಉದ್ದ ಅವನ ದೇಹದ ಅರ್ಧದಷ್ಟಿತ್ತು. ಮನೆಯಲ್ಲಿದ್ದಾಗ ಮಂದವಾದ ನರಿಯ ಚರ್ಮವನ್ನು ಧರಿಸುತ್ತಿದ್ದ. ಸತ್ತ ವರಿಗಾಗಿ ಶೋಕಪಡುವ ಕಾಲ ಹೊರತು ಉಳಿದ ವೇಳೆಗಳಲ್ಲಿ ಸಾಮಾನ್ಯವಾದ ಎಲ್ಲ ಅಲಂಕಾರಗಳನ್ನೂ ಧರಿಸುತ್ತಿದ್ದ. ದೇಹದ ಕೆಳಭಾಗವನ್ನು ಮುಚ್ಚುತ್ತಿದ್ದ ವಸ್ತ್ರಗಳು, ರಾಜಸಭೆಗೆ ಹೋಗುವಾಗ ಧರಿಸುತ್ತಿ

ದ್ದುದು ಬಿಟ್ಟು, ಎಲ್ಲವನ್ನೂ ನಡುವಿನ ಕಡೆಗೆ ಬಿಗಿಹಿಡಿಯುತ್ತಿದ್ದ. ಸಾವು ಸಂಭವಿಸಿದ ಮನೆಗಳಲ್ಲಿ ಸಂತೈಸಲು ಹೋದಾಗ ಕರಿಯ ಕುರಿಯ ತುಪಟವನ್ನೂ ಕರಿಯ ತಲೆಯುಡಿಗೆಯನ್ನೂ ಧರಿಸುತ್ತಿರಲಿಲ್ಲ. ಅಮಾವಾಸ್ಯೆಯ ದಿನ ತನ್ನ ರಾಜಸಭೆಯ ವಸ್ತ್ರಗಳನ್ನು ಧರಿಸಿ, ರಾಜಸಭೆಗೆ ಹೋಗುತ್ತಿದ್ದ.

೯೫

ಉಪವಾಸ ಮಾಡುವಾಗ ನಿರ್ಮಲವಾದ ನಾರು ಮಡಿ ಉಪಯೋಗಿಸುತ್ತಿದ್ದ. ಉಪವಾಸ ಮಾಡುವಾಗಲೂ ಅವನು ಸದಾ ತನ್ನ ಆಹಾರವನ್ನು ಬದಲಾಯಿಸುತ್ತಿದ್ದ. ತನ್ನ ಮನೆಯಲ್ಲಿರುವಾಗ ಪೀಠಗಳನ್ನೂ ಬದಲಾಯಿಸುತ್ತಿದ್ದ.

೯೬

ಅಕ್ಕಿ ಅತಿ ಸೂಕ್ಷ್ಮವಾಗಿದ್ದರಾಗಲಿ ಮಾಂಸವನ್ನು ಸಣ್ಣಗೆ ಕೊಚ್ಚಿದ್ದರಾಗಲಿ ಅವನಿಗೇನೂ ಆಕ್ಷೇಪವಿರಲಿಲ್ಲ. ಮಳೆ ಗಾಳಿಗಳಿಗೆ ಸಿಕ್ಕಿ ಕೆಟ್ಟ ಅಕ್ಕಿಯನ್ನೂ ಹದ ತಪ್ಪಿದ ಮೀನನ್ನೂ ಹಳಸಿದ ಮಾಂಸವನ್ನೂ ಅವನು ತಿನ್ನುತ್ತಿರಲಿಲ್ಲ. ಬಣ್ಣ ಕೆಟ್ಟದ್ದು, ವಾಸನೆ ಬಂದದ್ದು, ಅತಿಪಕ್ವ ಅಥವಾ ಅಪಕ್ವ, ಸರಿಯಾದ ಪರಿಕರ ಸೇರದ್ದು—ಇವು ಯಾವುದನ್ನೂ ತಿನ್ನುತ್ತಿರಲಿಲ್ಲ. ಸರಿಯಾಗಿ ಕತ್ತರಿಸದಿದ್ದುದನ್ನೂ, ಜೊತೆಗೆ ಹೊಂದಿಕೆಯಾಗುವ ವಸ್ತುಗಳಿಲ್ಲದುದನ್ನೂ ಅವನು ತಿನ್ನುತ್ತಿರಲಿಲ್ಲ. ಮಾಂಸ ಎಷ್ಟೇ ಇದ್ದರೂ, ಅನ್ನದ ರುಚಿಯನ್ನು ಕೆಡಿಸುವಷ್ಟು ತಿನ್ನುತ್ತಿರಲಿಲ್ಲ. ಕುಡಿಯುವ ಮದ್ಯಕ್ಕೆ

ಮಾತ್ರ ಮಿತಿಯಿಲ್ಲದಿದ್ದರೂ, ಭ್ರಮಣೆ ಬರುವ ಮೊದಲೆ ನಿಲ್ಲಿಸುತಿದ್ದ. ಹೊರಗಿನಿಂದ ಕೊಂಡು ತಂದ ಮದ್ಯ ವನ್ನಾಗಲಿ ಒಣಗಿ ಹೋದ ಮಾಂಸವನ್ನಾಗಲಿ ಅವನು ಮುಟ್ಟುತ್ತಿರಲಿಲ್ಲ. ಊಟದ ವೇಳೆಯಲ್ಲಿ ಅವನಿಗೆ ಶುಂಠಿ ತಪ್ಪಿದ್ದೇ ಇಲ್ಲ. ಅವನು ಅಷ್ಟೇನೂ ಹೆಚ್ಚು ಊಟಮಾಡುತ್ತಿರಲಿಲ್ಲ. ರಾಜನ ದೇವಾಲಯದಲ್ಲಿ ಯಜ್ಞ ನಡೆದ ಮೇಲೆ, ತನ್ನ ಪಾಲಿಗೆ ಬಂದ ಮಾಂಸ ವನ್ನು ಮಾರನೆಯ ಬೆಳಗಿನವರೆಗೆ ಮಿಗಿಸುತ್ತಿರಲಿಲ್ಲ; ತನ್ನ ಪಿತೃಗಳಿಗೆ ತಾನು ಯಜ್ಞಮಾಡಿದ ಮಾಂಸವನ್ನು ಮೂರು ದಿನ ಮೀರುವಂತೆ ನಿಲ್ಲಿಸುತ್ತಿರಲಿಲ್ಲ; ಮೂರು ದಿನದ ಮೇಲೆ ಅದನ್ನು ತಿನ್ನಲಾಗುವುದಿಲ್ಲವೆಂದು ಅಂಜು ತ್ತಿದ್ದ. ಊಟಮಾಡುವಾಗ ಸಂಭಾಷಿಸುತ್ತಿರಲಿಲ್ಲ, ಹಾಸಿಗೆಯಲ್ಲಿ ಮಲಗಿದಾಗ ಮಾತನಾಡುತ್ತಿರಲಿಲ್ಲ. ಒರಟು ಅನ್ನ, ಸೊಪ್ಪಿನ ಸಾರು ತನ್ನ ಆಹಾರವಾದರೂ ಅದರ ಸ್ವಲ್ಪ ಭಾಗವನ್ನು ತಪ್ಪದೆ ಗಂಭೀರಭಾವದಿಂದ ದೈವದ ಪ್ರೀತ್ಯರ್ಥವಾಗಿ ಅರ್ಪಿಸುತ್ತಿದ್ದ.

೯೭

ಚಾಪೆ ನೇರವಾಗಿದ್ದ ಹೊರತು ಅದರಮೇಲೆ ಕುಳಿತು ಕೊಳ್ಳುತ್ತಿರಲಿಲ್ಲ.

೯೮

ತನ್ನ ಗ್ರಾಮದವರು ಏನಾದರೂ ಸಂತೋಷಕೂಟ ನಡಸಿದರೆ, ಹಿರಿಯರೆಲ್ಲ ಹೊರಟುಹೋದ ಅನಂತರ ಮಾತ್ರ ತಾನು ಹೊರಡುತ್ತಿದ್ದ. ತನ್ನ ಗ್ರಾಮದವರು ರೋಗದ ಉಪದ್ರವಗಳನ್ನು ನಿವಾರಿಸುವುದಕ್ಕಾಗಿ

ಏನಾದರೂ ಉತ್ಸವಗಳನ್ನು ಹೊರಡಿಸಿದರೆ, ತನ್ನ ರಾಜಸಭೆಯ ವಸ್ತ್ರಗಳನ್ನು ಧರಿಸಿ, ಪೂರ್ವದಿಕ್ಕಿನ ಮೆಟ್ಟಲುಗಳ ಮೇಲೆ ನಿಂತುಕೊಳ್ಳುತ್ತಿದ್ದ.

೯೯

ರಾಜನು ತನಗೆ ಏನಾದರೂ ಆಹಾರವನ್ನು ಬಹುಮತಿಯಾಗಿ ಕಳಿಸಿಕೊಟ್ಟರೆ, ಮೊದಲು ತನ್ನ ಚಾಪೆಯನ್ನು ಸವರಿಸಿಕೊಂಡು, ತಾನು ಮೊದಲು ಆದರ ರುಚಿನೋಡುತ್ತಿದ್ದ. ಆದರೆ ರಾಜನು ಬೇಯಿಸದ ಮಾಂಸವನ್ನು ಕಳಿಸಿದರೆ, ಅದನ್ನು ಪಕ್ವಮಾಡಿಸಿ, ಮೊದಲು ಪಿತೃಗಳಿಗೆ ಅರ್ಪಿಸುತ್ತಿದ್ದ. ರಾಜನು ಕಳುಹಿಸಿದುದು ಜೀವಂತವಾಗಿದ್ದರೆ, ಅದನ್ನು ಜೀವಂತವಾಗಿಯೇ ಇಟ್ಟುಕೊಳ್ಳುತ್ತಿದ್ದ. ರಾಜನು ಯಜ್ಞ ನಡಸುವಾಗ, ಅಡುಗೆಯ ರುಚಿಯನ್ನು ಮೊದಲು ನೋಡುವ ಕೆಲಸ ಇವನದಾಗಿತ್ತು. ತನಗೆ ದೇಹಾಲಸ್ಯವಾದಾಗ ಅರಸನು ತನ್ನನ್ನು ನೋಡಲು ಬಂದರೆ, ತಲೆಯನ್ನು ಪೂರ್ವದ ಕಡೆಗಿಟ್ಟು, ಸಭಾವಸ್ತ್ರಗಳನ್ನು ಹೊದೆದುಕೊಂಡು, ನಡುಪಟ್ಟಿಯನ್ನು ಬಿಗಿದು ಮಲಗಿರುತ್ತಿದ್ದ. ರಾಜನು ತನ್ನನ್ನು ಕಾಣಬೇಕೆಂದು ಹೇಳಿಕಳಿಸಿದಾಗ ಗಾಡಿ ಹೂಡಲೆಂದು ಕಾದು ನಿಲ್ಲದೆ ನಡೆದುಕೊಂಡೇ ಹೋಗುತ್ತಿದ್ದ.

೧೦೦

ರಾಜನಿಗೆ ಸೇರಿದ ಪಿತೃದೇವಸ್ಥಾನವನ್ನು ಪ್ರವೇಶಿಸಿದಾಗ, ಪ್ರತಿಯೊಂದನ್ನೂ ಸೂಕ್ಷ್ಮವಾಗಿ ಕೇಳಿ ವಿಚಾರಿಸುತ್ತಿದ್ದ.

೧೦೧

ಸ್ನೇಹಿತನು ಯಾವನಾದರೂ ಸತ್ತಾಗ, ಅವನಿಗೆ ಕರ್ಮಗಳನ್ನು ಮಾಡುವವರು ಯಾರೂ ಇಲ್ಲದೆ ಹೋದರೆ, “ನಾನು ನೋಡಿಕೊಳ್ಳುತ್ತೇನೆ”ಎನ್ನುತ್ತಿದ್ದ. ಸ್ನೇಹಿತರು ಯಾರಾದರೂ ಗೌರವಕ್ಕಾಗಿ ಏನಾದರೂ ಕಳಿಸಿಕೊಟ್ಟರೆ, ಅದು ದೈವಗಳಿಗೆ ಅರ್ಪಿಸಿದ ಮಾಂಸ ವಾದ ಹೊರತು, ಗಾಡಿ ಕುದುರೆಗಳನ್ನು ಒಪ್ಪಿಸಿದರೂ ಸರಿಯೆ, ಅದಕ್ಕಾಗಿ ನಮಸ್ಕಾರ ಮಾಡುತ್ತಿರಲಿಲ್ಲ.

೧೦೨

ರಥವನ್ನು ಹತ್ತುವಾಗ, ಹತ್ತುವ ಹಗ್ಗವನ್ನು ಕೈಯಲ್ಲಿ ಹಿಡಿದು, ಸರಿಯಾಗಿ ನಿಂತುಕೊಳ್ಳುತ್ತಿದ್ದ. ರಥದಲ್ಲಿ ಕುಳಿತ ಮೇಲೆ ಹಿಂದೆ ನೋಡುತ್ತಿರಲಿಲ್ಲ, ಆತುರದಿಂದ ಮಾತಾಡುತ್ತಿರಲಿಲ್ಲ, ಕೈತೋರಿ ನಿರ್ದೇಶಿಸುತ್ತಿರಲಿಲ್ಲ.

೧೦೩

ಹಾಸಿಗೆಯಲ್ಲಿ ಹೆಣದ ಹಾಗೆ ಮಲಗುತ್ತಿರಲಿಲ್ಲ. ಮನೆಯಲ್ಲಿರುವಾಗ ಸಂಕೋಚವಿರುತ್ತಿರಲಿಲ್ಲ. ಸತ್ತವರಿಗಾಗಿ ಶೋಕಪಡುವವರನ್ನು ಕಂಡರೆ, ಅವರು ತೀರ ಆಪ್ತರಾದರೂ ಕೂಡ, ಅವನ ಮುಖಭಾವ ತಪ್ಪದೆ ಬೇರೆಯಾಗುತ್ತಿತ್ತು; ರಾಜನ ಸಭೆಗೆ ಯೋಗ್ಯವಾದ ತಲೆಯುಡಿಗೆ ಧರಿಸಿದವನನ್ನಾಗಲಿ ಕುರುಡನನ್ನಾಗಲಿ ಎಲ್ಲಿ ಕಂಡರೂ ಸದಾ ಗೌರವ ಸೂಚಿಸುತ್ತಿದ್ದ. ಸತ್ತವರಿಗಾಗಿ ಶೋಕಪಡುವವರನ್ನು ಕಂಡರೆ ತನ್ನ ರಥದ ಮೂಕಿಯುವರೆಗೂ ಬಗ್ಗಿ ನಮಸ್ಕಾರ ಮಾಡುತ್ತಿದ್ದ.

ಸುಖಭೋಜನವನ್ನು ಉಂಡಾಗಲೆಲ್ಲ, ಮುಖಭಾವ ವನ್ನು ಬದಲಾಯಿಸಿ ಎದ್ದು ನಿಂತು ತನ್ನ ಮೆಚ್ಚಿಕೆ ಯನ್ನು ತಪ್ಪದೆ ತೋರಿಸುತ್ತಿದ್ದ. ತಟಕ್ಕನೆ ಗುಡುಗಿದರೆ, ಅಥವಾ ಬಿರುಗಾಳಿ ಬೀಸಿದರೆ, ಅವನ ಮುಖ ವಿವರ್ಣವಾಗುತ್ತಿತ್ತು.

## ಕಾಂಫ್ಯೂಷನ ಚಾಟುಗಳು

ಜನತೆಯ ಬೋಧಕನಾದ ಕಾಂಫ್ಯೂಷ ಗುರು ಆಡಿದ ಮಾತುಗಳು ಎಷ್ಟು ಅರ್ಥಗರ್ಭವಾಗಿವೆಯೋ ಅಷ್ಟೇ ಸಂಗ್ರಹವಾಗಿ ರೂಪುಗೊಂಡಿವೆ; ಹೇಳಿರುವ ರೀತಿ ಕೂಡ ಅಷ್ಟೇ ಚಮತ್ಕಾರದಿಂದ ತುಂಬಿದೆ. ಇಹ ಲೋಕದ ಬದುಕನ್ನು ಈಗ ಇರುವುದಕ್ಕಿಂತ ಇನ್ನಷ್ಟು ಉತ್ತಮಗೊಳಿಸಲು ಪ್ರತಿಯೊಬ್ಬ ವ್ಯಕ್ತಿಯೂ ಅನು ಸರಿಸಿ ಆಚರಿಸಬೇಕಾದ ಮಾರ್ಗವನ್ನು ಹೆಜ್ಜೆ ಹೆಜ್ಜೆ ಯಾಗಿ ಆತ ಬಿಡಿಸಿ ಹೇಳಿದ್ದಾನೆ. ಎರಡೂವರೆ ಸಾವಿರ ವರ್ಷಗಳ ಹಿಂದೆ ಆತ ಹೇಳಿದ ಅನೇಕ ವಿಷಯಗಳು ಅತಿಪರಿಚಯದ ಸಲುಗೆಯಿಂದ ನಮ್ಮ ಕಣ್ಣಿಗೆ ವರ್ಣ ಹೀನವಾಗಿ ಕಾಣಬಹುದಾದರೂ, ಚೀನದ ಪ್ರಾಚೀನ ಜ್ಞಾನದಲ್ಲಿ ಪಂಡಿತನಾಗಿರುವಂತೆಯೇ ಪಾಶ್ಚಾತ್ಯರ ಆಧುನಿಕ ವಿದ್ಯೆಯಲ್ಲಿಯೂ ಪಾರಂಗತನಾಗಿರುವ ಪ್ರಸಿದ್ಧ ಲೇಖಕ **ಲಿನ್ ಯು ಟಾಂಗ್** ಹೇಳಿರುವಂತೆ, ವ್ಯವಹಾರಜ್ಞಾನದ ಬೆಲೆ ಬಲ್ಲವರು ಯಾರೂ **ಲುನ್-ಯು** ವಚನಸಂಗ್ರಹದಲ್ಲಿರುವ ಈ ವಿವೇಕ ಚೂಡಾ

ಮಣಿಗಳನ್ನು ಲಘುವಾಗಿ ಎಣಿಸಿ ತಳ್ಳಿಹಾಕುವುದು ಸಾಧ್ಯವಿಲ್ಲ.

೧೦೪

'ಇದು ತಿಳಿದಿದೆ' ಎಂದು ತಿಳಿಯುವುದೂ 'ಇದು ತಿಳಿದಿಲ್ಲ' ಎಂದು ತಿಳಿಯುವುದೂ ತಿಳಿದವನ ಲಕ್ಷಣ

೧೦೫

ಅವನ ಗೈಮೆಗಳನ್ನು ಗಮನಿಸು ; ಅವನ ಉದ್ದೇಶಗಳನ್ನು ಪರೀಕ್ಷಿಸು ; ಅವನಿಗೆ ಯಾವುದರಿಂದ ಸಮಾಧಾನ ಎಂದು ಕಂಡುಹಿಡಿ. ಮನುಷ್ಯನು ಮುಚ್ಚಿಕೊಳ್ಳಲು ಸಾಧ್ಯವೆ? ಮುಚ್ಚಿಕೊಳ್ಳಲು ಸಾಧ್ಯವೆ?

೧೦೬

ತನ್ನ ಹಳೆಯ ಜ್ಞಾನವನ್ನು ವಿಮರ್ಶೆ ಮಾಡುತ್ತ, ಹೊಸ ಜ್ಞಾನವನ್ನು ಸಂಪಾದಿಸುವವನು ಇತರರಿಗೆ ಕಲಿಸುವ ಗುರುವಾಗಬಹುದು.

೧೦೭

ಚಿಂತನೆಯಿಲ್ಲದೆ ಕಲಿಯುವುದು ವ್ಯರ್ಥ; ಕಲಿಯದೆ ಚಿಂತನೆ ಮಾಡುವುದು ಅಪಾಯ.

೧೦೮

ಸರಿಯಾದ ಶ್ರದ್ಧೆಯಿಲ್ಲದವನು ಹೇಗೆ ಬದುಕುವನೋ ನಾ ಕಾಣೆ. ಎತ್ತನ್ನು ಹೂಡಲು ಬೇಕಾದ ನೊಗವಿಲ್ಲದ ಗಾಡಿ ಹೇಗೆ ತಾನೆ ಚಲಿಸೀತು?

೧೦೯

ತನ್ನವನಲ್ಲದ ಪಿತೃವಿನ ಪ್ರೀತ್ಯರ್ಥವಾಗಿ ಯಜ್ಞ ಮಾಡುವುದು ಕೇವಲ ಮುಖಸ್ತುತಿ. ನ್ಯಾಯವಾದುದನ್ನು ಕಂಡೂ ಅದನ್ನು ಮಾಡದಿರುವುದು ಹೇಡಿತನ.

೧೧೦

ಪ್ರಾತಃಕಾಲದಲ್ಲಿ ಸತ್ಯವನ್ನು ಕೇಳಿದವನು ಸಾಯಂಕಾಲಕ್ಕೆ ಸಂತೃಪ್ತಿಯಿಂದ ಸಾಯಬಹುದು.

೧೧೧

ತನ್ನ ಸ್ವಾರ್ಥಕ್ಕಾಗಿ ಕೆಲಸಮಾಡುವವನು ಬಹು ದ್ವೇಷವನ್ನು ಗಳಿಸುತ್ತಾನೆ.

೧೧೨

ಸ್ಥಾನ ಸಿಕ್ಕಲಿಲ್ಲವಲ್ಲಾ ಎಂದು ವ್ಯಾಕುಲಪಡುವುದಕ್ಕಿಂತ ಸ್ಥಾನಕ್ಕೆ ತಕ್ಕ ಯೋಗ್ಯತೆಗಾಗಿ ವ್ಯಾಕುಲಪಡಬೇಕು. ಅಜ್ಞಾತನಾಗಿರುವೆನಲ್ಲಾ ಎಂದು ವ್ಯಾಕುಲಪಡುವುದಕ್ಕಿಂತ ಜ್ಞಾತನಾಗುವ ಯೋಗ್ಯತೆಯನ್ನು ಹುಡುಕಿ ಪಡೆಯಬೇಕು.

೧೧೩

ಯೋಗ್ಯನಾದವನನ್ನು ನೋಡಿದರೆ, ಅವನ ಮಟ್ಟಕ್ಕೆ ಏರುವುದು ಹೇಗೆ ಎಂದು ಚಿಂತಿಸು. ಅಯೋಗ್ಯನನ್ನು ನೋಡಿದರೆ, ಅಂತರ್ಮುಖಿಯಾಗಿ, ಆತ್ಮಪರೀಕ್ಷೆ ಮಾಡಿಕೊ.

೧೧೪

ಪೂರ್ವಕಾಲದವರು 'ಕೆಲಸದಲ್ಲಿ ಏನು ಕಡಿಮೆ ಬಿದ್ದೇವೋ' ಎಂದು ನಾಚಿ, ಆಡುವ ಮಾತಿನಲ್ಲಿ ಮಿತವಾಗಿರುತ್ತಿದ್ದರು.

೧೧೫

ಆತ್ಮಸಂಯಮವುಳ್ಳವರು ತಪ್ಪುವುದು ತುಂಬ ವಿರಳ.

೧೧೬

ನಿದಾನವಾಗಿ ಮಾತನಾಡಬೇಕು, ಕೆಲಸ ಬೇಗ ಮಾಡಬೇಕು—ಎಂಬುದು ಪ್ರಾಜ್ಞನ ಇಷ್ಟ.

೧೧೭

ಸದ್ಗುಣ ಎಂದೂ ಒಂಟಿಯಾಗಿರುವುದಿಲ್ಲ; ಅದಕ್ಕೆ ನೆರೆಹೊರೆ ಉಂಟೇ ಉಂಟು.

೧೧೮

ಎಲ್ಲವೂ ವ್ಯರ್ಥ! ತನ್ನ ಸ್ವಂತ ತಪ್ಪುಗಳನ್ನು ತಾನು ಗಮನಿಸಿ, ತನ್ನನ್ನೇ ಆಕ್ಷೇಪಿಸಿಕೊಳ್ಳುವವನನ್ನು ನಾನು ಇದುವರೆಗೂ ಕಂಡಿಲ್ಲ.

೧೧೯

ಬಾಗಿಲಿನಿಂದಲ್ಲದೆ ಆಚೆ ಕಾಲಿಡಲು ಯಾರಿಗೆ ಸಾಧ್ಯ? ಜನರು ಮಾರ್ಗದಲ್ಲಿ ಏಕೆ ಹೋಗವೊಲ್ಲರು?

೧೨೦

ಶಿಕ್ಷೆಗಿಂತ ಸ್ವಭಾವವೇ ಮೇಲಾದರೆ—ಅವನೇ ಅಸಂಸ್ಕೃತ. ಶಿಕ್ಷೆ ಸ್ವಭಾವವನ್ನು ಮೀರಿದರೆ—ಅವನೇ ಸಾಮಾನ್ಯ ಮನುಷ್ಯ. ಶಿಕ್ಷೆಯೂ ಸ್ವಭಾವವೂ ಸಮರಸವಾಗಿ ಸೇರಿದಾಗ ಮಾತ್ರ ಅವನು ಉತ್ತಮಪುರುಷನಾಗುತ್ತಾನೆ.

೧೨೧

ಋಜುವಾಗಿ ಬದುಕುವುದಕ್ಕಾಗಿಯೇ ಮನುಷ್ಯ ಹುಟ್ಟಿರುವುದು. ಅದಿಲ್ಲದೆಯೇ ಅವನ ಉಸಿರು ಉಳಿದರೆ, ಅದು ಅವನ ಅದೃಷ್ಟ!

೧೨೨

ಸತ್ಯವನ್ನು ತಿಳಿದವನು ಸತ್ಯವನ್ನು ಪ್ರೀತಿಸುವವನಿಗೆ ಸಮನಲ್ಲ. ಸತ್ಯವನ್ನು ಪ್ರೀತಿಸುವವನು ಸತ್ಯದಲ್ಲಿ ರಮಿಸುವವನಿಗೆ ಸಮನಲ್ಲ.

೧೨೩

ಸಾಮಾನ್ಯ ಮಟ್ಟಕ್ಕಿಂತ ಮೇಲಿರುವವರಲ್ಲಿ ಮೇಲು ಮಟ್ಟದ ವಿಷಯಗಳನ್ನು ಪ್ರಸ್ತಾಪಿಸಬಹುದು; ಆದರೆ ಸಾಮಾನ್ಯಮಟ್ಟಕ್ಕಿಂತ ಕೆಳಗಿರುವವರಲ್ಲಿ ಮೇಲು ಮಟ್ಟದ ವಿಷಯಗಳನ್ನು ಪ್ರಸ್ತಾಪಿಸಲಾಗದು.

೧೨೪

ಜಾಣರಿಗೆ ನೀರು ಕಂಡಲ್ಲಿ ಸಂತೋಷ, ಶೀಲವಂತರಿಗೆ ಬೆಟ್ಟಗುಡ್ಡಗಳಲ್ಲಿ ಸಂತೋಷ; ಜಾಣರಿಗೆ ಶಾಂತಿಯಿಲ್ಲ, ಶೀಲವಂತರು ಶಾಂತರು; ಜಾಣರು ಸುಖಜೀವಿಗಳು, ಶೀಲವಂತರು ಚಿರಂಜೀವಿಗಳು.

೧೨೫

ಜನ, ಹೆಚ್ಚು ವ್ಯಯಮಾಡಿದರೆ ಹಿಡಿತ ತಪ್ಪುತ್ತಾರೆ; ಮಿತವ್ಯಯ ಮಾಡಿದರೆ ಸಂಕೋಚಗೊಳ್ಳುತ್ತಾರೆ. ಸಂಯಮ ತಪ್ಪುವುದಕ್ಕಿಂತ ಸಂಕೋಚಗೊಳ್ಳುವುದೆ ಮೇಲು.

೧೨೬

ಜನರು ಒಂದು ದಾರಿ ಅನುಸರಿಸುವಂತೆ ಮಾಡಬಹುದೇ ಹೊರತು ಅದಕ್ಕೆ ಏನು ಕಾರಣ ಎಂಬುದನ್ನು ಅವರಿಗೆ ತಿಳಿಯಹೇಳುವುದು ಆಗದು.

೧೨೭

ಕಲಿಯುವಾಗ, 'ಗುರಿಯನ್ನು ನಾನು ಮುಟ್ಟು ವಂತಿಲ್ಲ' ಎಂದು, 'ಗುರಿಯನ್ನು ಎಲ್ಲಿ ತಪ್ಪಿಬಿಟ್ಟೇನೋ' ಎಂದು, ಕಲಿ.

೧೨೮

ಸ್ತ್ರೀಯನ್ನು ಪ್ರೀತಿಸುವಷ್ಟೇ ಶೀಲವನ್ನೂ ಪ್ರೀತಿಸು ವವನನ್ನು ನಾನು ಇನ್ನೂ ಕಂಡಿಲ್ಲ.

೧೨೯

ಆತ್ಮಸಾಕ್ಷಿಯೂ ಅಂತಶ್ಶುದ್ಧಿಯೂ ನಿನ್ನನ್ನು ನಡಸುವ ತತ್ತ್ವಗಳಾಗಲಿ. ನಿನಗಿಂತ ಉತ್ತಮರಲ್ಲದ ಸ್ನೇಹಿತರ ಗೊಡವೆ ಬೇಡ ತಪ್ಪು ಎಂದು ಕಂಡು ಬಂದಾಗ ತಿದ್ದಿಕೊಳ್ಳಲು ತಡಮಾಡಬೇಡ.

೧೩೦

ಜ್ಞಾನಿಗೆ ಸಂದೇಹದಿಂದ ಮುಕ್ತಿ, ಗುಣವಂತನಿಗೆ ಆತಂಕದಿಂದ ಮುಕ್ತಿ, ಧೀರನಿಗೆ ಭಯದಿಂದ ಮುಕ್ತಿ.

೧೩೧

ಬಡವನಾಗಿದ್ದರೂ ಗೊಣಗಾಡದಿರುವುದು ಕಷ್ಟ; ಹಣವಂತನಾಗಿದ್ದರೂ ಅಹಂಕಾರ ಪಡದಿರುವುದು ಸುಲಭ.

೧೩೨

ಮಿತಿಯಿಲ್ಲದೆ ಮಾತನಾಡುವವನು ಕಾರ್ಯಮಾಡು ವುದು ಕಷ್ಟ.

೧೩೩

ಪ್ರಾಚೀನರು ಆತ್ಮವ್ಯವಸಾಯಕ್ಕಾಗಿ ಅಧ್ಯಯನ ಮಾಡುತ್ತಿದ್ದರು. ಆಧುನಿಕರು ಇತರರ ಮೆಚ್ಚಿಕೆಗಾಗಿ ಅಭ್ಯಾಸಮಾಡುತ್ತಾರೆ.

೧೩೪

ಜಾತಿ ಕುದುರೆಯನ್ನು ಅದರ ಬಲಕ್ಕಾಗಿ ಪ್ರಶಂಸಿಸುವುದಿಲ್ಲ; ಆದರ ಗುಣಕ್ಕಾಗಿ ಮಾತ್ರ.

೧೩೫

ತಿಳಿಯಬಲ್ಲವನಿಗೆ ತಿಳಿಸದಿದ್ದರೆ, ಒಬ್ಬ ಮನುಷ್ಯನ ನಷ್ಟ. ತಿಳಿಯಲಾರದವನಿಗೆ ತಿಳಿಸಯತ್ನಿಸಿದರೆ ಅಷ್ಟು ಮಾತು ನಷ್ಟ. ಬುದ್ಧಿವಂತನಾದವನು ಮನುಷ್ಯನನ್ನಾಗಲಿ ಮಾತುಗಳನ್ನಾಗಲಿ ನಷ್ಟಗೊಳಿಸುವುದಿಲ್ಲ.

೧೩೬

'ಏನು ಮಾಡಲಿ?', 'ಏನು ಮಾಡಲಿ?' ಎಂದುಕೊಳ್ಳದ ಮನುಷ್ಯನನ್ನು ಏನು ಮಾಡಬೇಕೋ ನಾ ಕಾಣೆ.

೧೩೭

ತಪ್ಪು ಮಾಡಿ, ತಿದ್ದಿಕೊಳ್ಳದಿರುವುದು—ಅದೇ ಹೊಸ ತಪ್ಪು.

೧೩೮

ವಿದ್ಯಾದಾನ ಮಾಡುವಾಗ ಮುಖ ನೋಡಿ ಮಣೆ ಹಾಕಬಾರದು.

೧೩೯

ಸ್ಪಷ್ಟತೆಯೇ ಭಾಷೆಯ ಸರ್ವಸ್ವ.

೧೪೦

ಸ್ವಭಾವತಃ ಮನುಷ್ಯರು ಹೆಚ್ಚೂ ಕಡಮೆ ಒಬ್ಬರಂತೆ ಒಬ್ಬರಿರುತ್ತಾರೆ. ಆದರೆ ಅಭ್ಯಾಸಬಲದಿಂದ ಬರುಬರುತ್ತ ಬೇರೆಯಾಗುತ್ತಾರೆ.

೧೪೧

ಬಹು ಮೇಧಾವಿಗಳೂ ಬಹು ಮೂರ್ಖರೂ—ಈ ಇಬ್ಬರು ಮಾತ್ರ ಎಂದಿಗೂ ಬದಲಾಗುವುದಿಲ್ಲ.

೧೪೨

ವಯಸ್ಸು ನಲುವತ್ತಾದರೂ ಇನ್ನೂ ಸ್ನೇಹಿತರಿಗೆ ಅವನು ಅನಿಷ್ಟನಾಗಿದ್ದರೆ, ಕೊನೆಗಾಲದವರೆಗೂ ಅವನು ಹಾಗೆಯೇ.

೧೪೩

ರಾಜನಾಗುವುದು ಕಷ್ಟ ಆದರೆ ಮಂತ್ರಿಯಾಗುವುದು ಕೂಡ ಸುಲಭವಲ್ಲ.

೧೪೪

ಸಾಧುಸಂತರನ್ನು ಕಾಣಬೇಕೆಂದು ನಾನು ನಿರೀಕ್ಷಿಸುವುದಿಲ್ಲ. ಸಾಮಾನ್ಯ ಸಭ್ಯನನ್ನು ಕಂಡರೆ ಸಾಕು.

೧೪೫

ಸುಂದರವಾದ ಆತ್ಮವುಳ್ಳವನು ಸುಂದರವಾದ ವಿಷಯ ಹೇಳುತ್ತಾನೆ; ಆದರೆ ಸುಂದರವಾದ ವಿಷಯ ಹೇಳಿದವನಿಗೆ ಸುಂದರವಾದ ಆತ್ಮ ಇರಬೇಕಾದ ಅಗತ್ಯವಿಲ್ಲ. ಮಹಾತ್ಮನಿಗೆ ಧೈರ್ಯವಿದ್ದೇ ಇರುತ್ತದೆಯಾದರೂ ಧೈರ್ಯವಿದ್ದವರೆಲ್ಲ ಮಹಾತ್ಮರಲ್ಲ.

೧೪೬

ಎಲ್ಲರಿಗೂ ಇಷ್ಟನಾಗಿರುವುದಕ್ಕಿಂತ, ಎಲ್ಲರಿಗೂ ಅನಿಷ್ಟನಾಗಿರುವುದಕ್ಕಿಂತ ಒಳ್ಳೆಯವರಿಗೆಲ್ಲ ಇಷ್ಟನಾಗಿ ಕೆಟ್ಟವರಿಗೆಲ್ಲ ಅನಿಷ್ಟನಾಗಿರುವುದು ಮೇಲು.

೧೪೭

ದೇಶದಲ್ಲಿ ಸುವ್ಯವಸ್ಥೆಯಿದ್ದಾಗ ಬಡವನಾಗಿ, ಸಾಮಾನ್ಯ ಪ್ರಜೆಯಾಗಿರುವುದು ನಾಚಿಕೆ. ದೇಶದಲ್ಲಿ ಅವ್ಯವಸ್ಥೆಯಿದ್ದಾಗ ಹಣವಂತನಾಗಿ ಅಧಿಕಾರಿಯಾಗಿರುವುದು ನಾಚಿಕೆ

೧೪೮

"ಕೇಡು ಮಾಡಿದವನಿಗೆ ದಯೆತೋರಬಹುದಲ್ಲವೆ?" ಎಂದು ಯಾರೋ ಕೇಳಿದರು. "ಹಾಗಾದರೆ ದಯಾಳುಗಳಿಗೆ ಏನು ತೋರುವಿರಿ?" ಎಂದು ಕೇಳಿ, ಕಾಂಫ್ಯೂಷ "ದಯಾಳುಗಳಲ್ಲಿ ದಯೆ ತೋರಿರಿ. ಕೇಡುಮಾಡಿದವನಿಗೆ ತಕ್ಕ ನ್ಯಾಯ ದೊರಕಲಿ" ಎಂದ.

೧೪೯

ದಯೆತೋರಿದವರಿಗೆ ಪ್ರತಿಯಾಗಿ ದಯೆತೋರಿದರೆ ಅದು ಒಳ್ಳೆಯವರಿಗೆ ಉತ್ತೇಜನ ಕೇಡುಮಾಡಿದವನಿಗೆ ಕೇಡುಮಾಡಿದರೆ, ಜನ ಕೇಡುಮಾಡಲು ಹೆದರುತ್ತಾರೆ.

೧೫೦

ಕೇಡುಮಾಡಿದವನಿಗೆ ಕರುಣೆ ತೋರುವುದು ಔದಾರ್ಯದ ಚಿಹ್ನೆ. ಕರುಣೆತೋರಿದವರಿಗೆ ಕೇಡುಮಾಡುವುದು ಮಹಾಪಾಪಿಯ ಲಕ್ಷಣ.

## " ಧರ್ಮಸಂಸ್ಥಾಪನಾರ್ಥಾಯ...."

### ಮರದ ಬುಡದ ಭದ್ರತೆ

ಕಾಂಫೂಷ ಗ್ರಂಥಗಳಲ್ಲಿ ಒಂದಾದ "ಲಿಕಿ" ಎಂಬು ದರ ನಲವತ್ತೆರಡನೆಯ ಅಧ್ಯಾಯದಲ್ಲಿ ಈ ಮಾತು ಬರುತ್ತದೆ :

"ಮನುಷ್ಯನ ನಿರ್ಮಲವಾದ ನಡತೆಯನ್ನು ಕಾಪಾಡಿ ಕೊಟ್ಟು, ದೇಶದ ಜನರಿಗೆ ಹೊಸ ಜೀವವನ್ನು ತಂದು ಕೊಟ್ಟು, ಪರಿಪೂರ್ಣತೆಯನ್ನೂ ಪರಮಾರ್ಥವನ್ನೂ ಪಡೆಯುವಂತೆ ಮಾಡುವುದೇ ಪ್ರೌಢಶಿಕ್ಷಣದ ತತ್ತ್ವ.

"ತಾನು ಮುಟ್ಟುವ ಪರಿಪೂರ್ಣತೆಯ ಗುರಿಯನ್ನು ತಿಳಿದ ಮೇಲೆಯೇ ಜೀವನದಲ್ಲಿ ಸ್ಪಷ್ಟವಾದ ಉದ್ದೇಶ ವನ್ನು ಪಡೆಯುವುದು ಸಾಧ್ಯ. ಜೀವನದಲ್ಲಿ ಒಂದು ಸ್ಪಷ್ಟವಾದ ಉದ್ದೇಶವನ್ನು ಪಡೆದಮೇಲೆಯೇ ಮನಸ್ಸು ಪ್ರಸನ್ನವಾಗುವುದು ಸಾಧ್ಯ. ಮನಸ್ಸು ಪ್ರಸನ್ನವಾದ ಮೇಲೆಯೆ ಶಾಂತಿ, ಸಮಾಧಾನ ಪಡೆಯುವುದು ಸಾಧ್ಯ. ಶಾಂತಿ, ಸಮಾಧಾನ ಪಡೆದ ಮೇಲೆಯೇ ಚಿಂತಿಸಲು ತೊಡಗುವುದು ಸಾಧ್ಯ. ಚಿಂತಿಸಲು ಕಲಿತ ಮೇಲೆಯೇ ಜ್ಞಾನವನ್ನು ಪಡೆಯುವುದು ಸಾಧ್ಯ. ವಸ್ತುಗಳ ರಚನೆ ಯಲ್ಲಿ ಒಂದು ತಳಾದಿಯೂ ಒಂದು ಮೇಲುಕಟ್ಟಡವೂ ಉಂಟು ; ಸಂಗತಿಗಳು ನಡೆಯುವುದಕ್ಕೆ ಒಂದು ಮೊದ ಲುಂಟು, ಒಂದು ಕೊನೆಯೂ ಉಂಟು. ಆದ್ದರಿಂದ ವಸ್ತುಗಳ ಪೂರ್ವಾಪರ ಕ್ರಮವನ್ನು ಸರಿಯಾಗಿ ತಿಳಿ ಯುವುದೇ ಪ್ರಜ್ಞೆಯ ಪ್ರಾರಂಭ.

"ಲೋಕದ ಜನರ ನಡತೆಯನ್ನು ನಿರ್ಮಲವಾಗಿಯೂ ಸ್ಪಷ್ಟವಾಗಿಯೂ ಉಳಿಸಬೇಕೆಂದು ಇಷ್ಟಪಟ್ಟ ಪ್ರಾಚೀನರು ಮೊತ್ತಮೊದಲು ತಮ್ಮ ರಾಷ್ಟ್ರಜೀವನವನ್ನು ಕ್ರಮಗೊಳಿಸುತ್ತಿದ್ದರು. ತಮ್ಮ ರಾಷ್ಟ್ರಜೀವನವನ್ನು ಕ್ರಮಗೊಳಿಸಬೇಕೆಂದು ಇಷ್ಟಪಟ್ಟವರು ಮೊತ್ತ ಮೊದಲು ತಮ್ಮ ಸಾಂಸಾರಿಕ ಜೀವನವನ್ನು ಕ್ರಮಗೊಳಿಸುತ್ತಿದ್ದರು. ತಮ್ಮ ಸಾಂಸಾರಿಕ ಜೀವನವನ್ನು ಕ್ರಮಗೊಳಿಸಬೇಕೆಂದು ಇಷ್ಟಪಟ್ಟವರು ಮೊದಲು ತಮ್ಮ ವೈಯಕ್ತಿಕ ಜೀವನವನ್ನು ಬೆಳೆಯಿಸಿಕೊಳ್ಳುತ್ತಿದ್ದರು. ತಮ್ಮ ವೈಯಕ್ತಿಕ ಜೀವನವನ್ನು ಬೆಳೆಯಿಸಿಕೊಳ್ಳಬೇಕೆಂದು ಇಷ್ಟಪಟ್ಟವರು ಮೊದಲು ತಮ್ಮ ಹೃದಯಗಳನ್ನು ನೇರ್ಪಡಿಸಲು ತೊಡಗುತ್ತಿದ್ದರು. ತಮ್ಮ ಹೃದಯಗಳನ್ನು ನೇರ್ಪಡಿಸಬೇಕೆಂದು ಇಷ್ಟಪಟ್ಟವರು ಮೊದಲು ತಮ್ಮ ಮನಸ್ಸಿನ ಸಂಕಲ್ಪಗಳನ್ನು ಶುದ್ಧವಾಗಿ ಇರಿಸಿಕೊಳ್ಳಲು ತೊಡಗುತ್ತಿದ್ದರು. ತಮ್ಮ ಮನಸ್ಸಿನ ಸಂಕಲ್ಪಗಳನ್ನು ಶುದ್ಧವಾಗಿರಿಸಿಕೊಳ್ಳಲು ಇಷ್ಟಪಟ್ಟವರು ಮೊದಲು ಸತ್ಯವಾದ ಜ್ಞಾನವನ್ನು ಸಂಪಾದಿಸಲು ತೊಡಗುತ್ತಿದ್ದರು.

"ಸತ್ಯವಾದ ಜ್ಞಾನವನ್ನು ಸಂಪಾದಿಸುವುದು ವಸ್ತುಗಳ ಅನ್ವೇಷಣೆಯನ್ನು ಅವಲಂಬಿಸಿಕೊಂಡಿತ್ತು. ವಸ್ತುಗಳನ್ನು ಅನ್ವೇಷಣೆ ಮಾಡಿದ ಮೇಲೆ ನಿಜವಾದ ಜ್ಞಾನ ಸಿದ್ಧಿಸುತ್ತದೆ; ನಿಜವಾದ ಜ್ಞಾನ ಸಿದ್ಧಿಯಾದರೆ ಸಂಕಲ್ಪ ಶುದ್ಧವಾಗುತ್ತದೆ; ಸಂಕಲ್ಪ ಶುದ್ಧವಾದಾಗ ಹೃದಯ ನೇರ್ಪಡುತ್ತದೆ; ಹೃದಯ ನೇರ್ಪಟ್ಟಾಗ

ವೈಯಕ್ತಿಕ ಜೀವನ ಬೆಳೆಯುತ್ತದೆ; ವೈಯಕ್ತಿಕ ಜೀವನ ಬೆಳೆದಾಗ ಸಾಂಸಾರಿಕ ಜೀವನ ವ್ಯವಸ್ಥೆಗೊಳ್ಳುತ್ತದೆ; ಸಾಂಸಾರಿಕ ಜೀವನ ವ್ಯವಸ್ಥೆಗೊಂಡಾಗ ರಾಷ್ಟ್ರಜೀವನ ಕ್ರಮಗೊಳ್ಳುತ್ತದೆ; ರಾಷ್ಟ್ರಜೀವನ ಕ್ರಮಗೊಂಡಾಗಲೇ ಲೋಕದಲ್ಲಿ ಶಾಂತಿ ನೆಲಸುತ್ತದೆ.

"ಚಕ್ರವರ್ತಿಯಿಂದ ತೊಡಗಿ ಸಾಮಾನ್ಯನ ವರೆಗೂ, ಪ್ರತಿಯೊಬ್ಬರೂ, ವೈಯಕ್ತಿಕ ಜೀವನದ ವ್ಯವಸಾಯವನ್ನೇ ಬುಡವೆಂದೂ ತಳಾದಿಯೆಂದೂ ಗಣಿಸಬೇಕು. ಬುಡವಾಗಲಿ ತಳಾದಿಯಾಗಲಿ ಅವ್ಯವಸ್ಥಿತವಾಗಿದ್ದರೆ ವ್ಯವಸ್ಥಿತವಾದ ಮರವಾಗಲಿ ಕಟ್ಟಡವಾಗಲಿ ಅದರಿಂದ ಹುಟ್ಟಿದುದಿಲ್ಲ. ಬುಡ ಸಣ್ಣಗೆ ಬಳುಕುತ್ತಿದ್ದರೂ ಭಾರವಾಗಿ ದಟ್ಟವಾದ ಕೊಂಬೆಗಳನ್ನು ಹೊತ್ತುಕೊಂಡ ಮರ ಈವರೆಗೆ ಹುಟ್ಟಿಲ್ಲ.

"ಇದಕ್ಕೆ 'ವಸ್ತುಗಳ ಬುಡವನ್ನೂ ತಳಾದಿಯನ್ನೂ ತಿಳಿಯುವಿಕೆ' ಎಂದು ಹೆಸರು."

ಅದೇ "ಲಿಕಿ" ಗ್ರಂಥದ ಮೂವತ್ತೊಂದನೆಯ ಅಧ್ಯಾಯದಲ್ಲಿ ಈ ಮಾತುಗಳೂ ಬರುತ್ತವೆ:

"ದೈವದತ್ತವಾದುದನ್ನು ನಾವು ಮಾನವನ ಸ್ವಭಾವವೆಂದು ಕರೆಯುತ್ತೇವೆ. ನಮ್ಮ ಮಾನವ ಸ್ವಭಾವದ ನಿಯಮಗಳನ್ನು ಪೂರೈಸಿಕೊಳ್ಳುವುದನ್ನೇ ನಾವು ಧರ್ಮ ಎಂದು ಕರೆಯುತ್ತೇವೆ ಧರ್ಮದ ವ್ಯವಸಾಯವನ್ನೇ ನಾವು ಸಂಸ್ಕೃತಿ ಎಂದು ಕರೆಯುತ್ತೇವೆ.

"ಧರ್ಮದ ನಿಯತಿ ಎಂತಹದೆಂದರೆ—ನಮ್ಮ ಜೀವನದ ಒಂದು ಕ್ಷಣವಾದರೂ ನಾವು ಅದರ ವ್ಯಾಪಾರ

ದಿಂದ ತಪ್ಪಿಸಿಕೊಳ್ಳುವಂತಿಲ್ಲ. ನಾವು ಸಿಕ್ಕದೆ ತಪ್ಪಿಸಿಕೊಳ್ಳುವಂತಹ ನಿಯತಿ ಧರ್ಮದ ನಿಯತಿಯಲ್ಲ. ಆದ್ದರಿಂದ ಧಾರ್ಮಿಕನಾದವನು ತನ್ನ ಕಣ್ಣುಗಳು ಕಾಣಲಾರದುದನ್ನು ಎಚ್ಚರದಿಂದ ಗಮನಿಸುತ್ತ, ತನ್ನ ಕಿವಿಗಳು ಕೇಳಲಾರದುದನ್ನು ಕುರಿತು ಭಯಭೀತಿಗಳಿಂದ ಕೂಡಿರುವನು.

"ಕಣ್ಣುಗಳಿಂದ ಕಾಣಲಾರದ ಅವುಗಳಷ್ಟು ಸ್ಪಷ್ಟವಾದದ್ದಾಗಲಿ ಇಂದ್ರಿಯಗಳಿಗೆ ಗೋಚರವಾಗದ ಅವುಗಳಷ್ಟು ಸತ್ಯವಾದದ್ದಾಗಲಿ ಬೇರೆ ಯಾವುದೂ ಇಲ್ಲ. ಆದ್ದರಿಂದ ಧಾರ್ಮಿಕನಾದವನು ತನ್ನ ಅತಿ ರಹಸ್ಯವಾದ ಮಾನಸಿಕ ವ್ಯಾಪಾರಗಳನ್ನು ಕೂಡ ಎಚ್ಚರ ತಪ್ಪದೆ ಕಾಯ್ದುಕೊಳ್ಳುತ್ತಾನೆ."

ಮೇಲೆ ಉದ್ಧರಿಸಿರುವ ವಾಕ್ಯಗಳಿಂದ ಕಾಂಫ್ಯೂಷನ ಜೀವನೋದ್ದೇಶ ಏನಿದ್ದಿತೆಂಬುದು ಸ್ಪಷ್ಟವಾಗಿದೆ. ಆತ ಪರಲೋಕದ ವಿಚಾರವಾಗಿ ಪ್ರಸ್ತಾಪಿಸದೆ ಹೋದರೂ, ಆತನ ಮಾತುಕತೆಗಳೂ ಆಚಾರವ್ಯವಹಾರಗಳೂ ಐಹಿಕವೇ ಎಂಬಂತಿದ್ದರೂ, ಕಾಂಫ್ಯೂಷ ಕೂಡ ಧರ್ಮ ಸಂಸ್ಥಾಪನೆಗಾಗಿಯೇ ನಡುಕಟ್ಟಿ ನಿಂತವನು. ಕ್ರಿಸ್ತಪೂರ್ವ ಆರನೆಯ ಶತಮಾನದ ಚೀನಾ ತನ್ನ ಧರ್ಮವನ್ನು ಮರೆತುಕೊಂಡಿದ್ದಾಗ, ಅದರ ಫಲವಾಗಿ ದೇಶ ಹತ್ತಾರು ಚೂರಾಗಿ, ಪ್ರತಿ ಚೂರಿಗೂ ಒಬ್ಬೊಬ್ಬ ಪ್ರತ್ಯೇಕ ಅರಸನಾಗಿ, ಅರಸರಲ್ಲಿ ಪರಸ್ಪರ ಕಲಹ ಕಾದಾಟ ನಡೆದು, ಅದರ ಪರಿಣಾಮವಾಗಿ ಪ್ರಜೆಗಳು ನರಳುತ್ತಿದ್ದಾಗ ಕಾಂಫ್ಯೂಷನು ತನ್ನ ದೇಶದ ಪುರಾಣ

ಇತಿಹಾಸಗಳನ್ನು ತಿಳಿದು ಅರ್ಥಮಾಡಿಕೊಂಡು, ದೇಶವನ್ನು ಧರ್ಮಮಾರ್ಗದಲ್ಲಿ ನಿಲ್ಲಿಸಲು ಪ್ರಯತ್ನ ಪಟ್ಟನು. ಆ ಪ್ರಯತ್ನದಲ್ಲಿ 'ವೈಯಕ್ತಿಕ ಜೀವನದ ಬೆಳೆವಣಿಗೆಯೇ ಮೊದಲು, ರಾಷ್ಟ್ರಜೀವನದ ವ್ಯವಸ್ಥೆಯೇ ಗುರಿ' ಎಂಬಂತೆ ಕಾಂಫ್ಯೂಷ ಸತತವಾಗಿ ದುಡಿದ. ಅನೇಕ ಶಿಷ್ಯರನ್ನು ಈ ತನ್ನ ದರ್ಶನಕ್ಕೆ ಯೋಜಿಸಿಕೊಂಡು ದೇಶದ ಮೂಲೆ ಮೂಲೆಗಳಲ್ಲೂ ಆ ದರ್ಶನವನ್ನು ಹರಡಿದ

ವೈಯಕ್ತಿಕ ಜೀವನಕ್ಕೆ ಸಂಬಂಧಿಸಿದ ಕೆಲವು ವಚನಗಳನ್ನು ಹಿಂದೆ ಕೊಟ್ಟಿದೆ ರಾಷ್ಟ್ರಜೀವನಕ್ಕೆ ಸಂಬಂಧಿಸಿದ ಕೆಲವನ್ನು ಇಲ್ಲಿ ಕೆಳಗೆ ಕೊಟ್ಟಿದೆ.

### ಕಾಂಫ್ಯೂಷನ ಆಡಳಿತ ಪದ್ಧತಿ

೧೫೧

ಗುರು ಹೇಳಿದ: "ತನ್ನ ಶೀಲದ ಉತ್ಕೃಷ್ಟತೆಯಿಂದ ಆಡಳಿತ ನಡೆಸುವವನನ್ನು ಧ್ರುವನಕ್ಷತ್ರಕ್ಕೆ ಹೋಲಿಸಬಹುದು. ಅದು ತಾನು ಇದ್ದಲ್ಲಿ ಅಚಲವಾಗಿರುತ್ತದೆ, ಮಿಕ್ಕೆಲ್ಲ ನಕ್ಷತ್ರಗಳೂ ಅದರ ಕಡೆಗೆ ಬಾಗುತ್ತವೆ."

೧೫೨

ಗುರು ಹೇಳಿದ: "ನಿಯಮಗಳಿಂದ ಜನರನ್ನು ಆಳಿದರೆ, ದಂಡಗಳನ್ನು ವಿಧಿಸಿ ಅವರನ್ನು ಹದ್ದಿನಲ್ಲಿರಿಸಿದರೆ, ಅವರು ದಂಡಗಳನ್ನು ತಪ್ಪಿಸಿಕೊಳ್ಳುತ್ತಾರೆ, ನಾಚಿಕೆಪಡುವದನ್ನು ಕಳೆದುಕೊಳ್ಳುತ್ತಾರೆ. ಅದಕ್ಕೆ ಬದಲು ನಿಮ್ಮ ಶೀಲದ ಉತ್ಕೃಷ್ಟತೆಯಿಂದ ನೀವು

ಅವರನ್ನು ಆಳಿದರೆ, ಕರ್ತವ್ಯಕ್ಕೆ ತಕ್ಕಂತೆ ನೀವು ನಡೆಯುವುದರಿಂದ ಅವರನ್ನು ಹದ್ದಿನಲ್ಲಿರಿಸಿದರೆ, ಅವರು ತಪ್ಪುಮಾಡುವುದಕ್ಕೆ ನಾಚಿ, ನೀವು ಬಯಸುವ ಮಟ್ಟದಲ್ಲಿ ಬದುಕುತ್ತಾರೆ."

೧೫೩

ಐ ಎಂಬ ಮಾಂಡಳಿಕನು "ನನ್ನ ಪ್ರಜೆಗಳು ತೃಪ್ತರಾಗಿರುವಂತೆ ನಾನು ಮಾಡಬೇಕಾದ ಕರ್ತವ್ಯವೇನು?" ಎಂದು ಕೇಳಿದ್ದಕ್ಕೆ ಗುರು "ನ್ಯಾಯಪರರಿಗೆ ಮೇಲಿನ ಅಧಿಕಾರ ಕೊಟ್ಟು, ತಪ್ಪುಮಾಡಿದವರನ್ನು ಕೆಲಸದಿಂದ ತೆಗೆದುಹಾಕಿದರೆ ಜನ ತೃಪ್ತರಾಗುತ್ತಾರೆ; ಅದರ ಬದಲು ತಪ್ಪುಮಾಡಿದವನಿಗೆ ಮೇಲಿನ ಅಧಿಕಾರ ಕೊಟ್ಟು ನ್ಯಾಯಪರರನ್ನು ಕೆಲಸದಿಂದ ತೆಗೆದರೆ, ಜನರಲ್ಲಿ ಅತೃಪ್ತಿ ಬೆಳೆಯುತ್ತದೆ." ಎಂದ.

೧೫೪

ಐ ಎಂಬ ಮಾಂಡಳಿಕನ ಮಂತ್ರಿಯಾದ **ಛಿ ಕಾಂಗ್ ಸು** ಎಂಬವನು "ಪ್ರಜೆಗಳಲ್ಲಿ ಪ್ರಭುಭಕ್ತಿಯನ್ನೂ ಗೌರವವನ್ನೂ ಪ್ರೇರಿಸುವುದು ಹೇಗೆ? ಅವರು ಒಬ್ಬರನ್ನೊಬ್ಬರು ನೋಡಿ ಕಲಿತುಕೊಳ್ಳುವಂತೆ ಮಾಡುವುದು ಹೇಗೆ?" ಎಂದು ಕೇಳಿದಾಗ, ಗುರು "ಘನತೆಯನ್ನು ಕಳೆದುಕೊಳ್ಳದೆ ಅವರನ್ನು ನಡಸಿದರೆ, ಅವರೂ ವಿಧೇಯರಾಗಿ ನಡೆಯುತ್ತಾರೆ; ನೀವು ತಾಯಿ ತಂದೆಗಳಲ್ಲಿ ಭಕ್ತಿಯನ್ನೂ ದಯೆಯನ್ನೂ ಉಳ್ಳವರಾದರೆ, ಅವರು ಪ್ರಭುವಿನಲ್ಲಿ ಭಕ್ತಿಯಿಡುತ್ತಾರೆ; ಉತ್ತಮರಾದವರಿಗೆ ಮೇಲಿನ ಅಧಿಕಾರ ಕೊಟ್ಟು, ಸಾಮರ್ಥ್ಯ

ವಿಲ್ಲದವರನ್ನು ತಿದ್ದಿ ಕಲಿಸಿದರೆ, ಒಬ್ಬರನ್ನು ನೋಡಿ ಒಬ್ಬರಿಗೆ ಪ್ರೋತ್ಸಾಹವುಂಟಾಗುತ್ತದೆ" ಎಂದ.

೧೫೫

ಕಾಂಫ್ಯೂಷನನ್ನು ಯಾರೋ ಕೇಳಿದರು: "ನೀನು ಏಕೆ ಸಾರ್ವಜನಿಕ ಸೇವಾವೃತ್ತಿಗೆ ಸೇರಲಿಲ್ಲ?" ಎಂದು. ಅದಕ್ಕೆ ಗುರು "ನಮ್ಮ **ಇತಿಹಾಸ ಗ್ರಂಥವು** 'ಮಗನ ಕರ್ತವ್ಯವೂ ಸಹೋದರನ ಸ್ನೇಹವೂ ಸಾರ್ವಜನಿಕ ಸೇವೆಯಲ್ಲಿ ಪ್ರಕಟವಾಗುತ್ತದೆ' ಎಂದು ಹೇಳಿಲ್ಲವೆ? ಎಂದಮೇಲೆ, ಇವು ಕೂಡ ಸಾರ್ವಜನಿಕ ಸೇವೆಯೇ. ನೀವು ಕಲ್ಪಿಸಿಕೊಂಡಿರುವುದು ಒಂದೇ ಸಾರ್ವಜನಿಕ ಸೇವೆಯೆಂದು ಏಕೆ ಗಣಿಸಬೇಕು?" ಎಂದು ಉತ್ತರ ಹೇಳಿದ.

೧೫೬

**ಸು ಕುಂ** "ಒಳ್ಳೆಯ ಆಡಳಿತದ ಲಕ್ಷಣಗಳೇನು?" ಎಂದು ಕೇಳಿದ. ಅದಕ್ಕೆ ಗುರು "ಹೊಟ್ಟೆ ತುಂಬುವಷ್ಟು ಆಹಾರ ಒದಗಿಸುವುದು, ರಾಜ್ಯವನ್ನು ರಕ್ಷಿಸುವಷ್ಟು ಸೈನಿಕರನ್ನು ಸಿದ್ಧಗೊಳಿಸುವುದು, ಪ್ರಜೆಗಳ ನಂಬಿಕೆಯನ್ನು ಸಂಪಾದಿಸುವುದು" ಎಂದ. "ಈ ಮೂರರಲ್ಲಿ ಯಾವುದಾದರೂ ಒಂದನ್ನು ಬಿಡಬೇಕಾಗಿ ಬಂದರೆ, ಯಾವುದನ್ನು ಮೊದಲು ಬಿಡಬಹುದು?" ಗುರು ಹೇಳಿದ: "ಸೈನ್ಯವನ್ನು ಬಿಡಬಹುದು" ಎಂದು. "ಉಳಿದ ಎರಡರಲ್ಲಿ ಯಾವುದಾದರೂ ಒಂದನ್ನು ಬಿಡಬೇಕಾದರೆ?" ಅದಕ್ಕೆ ಗುರು "ಆಹಾರವನ್ನು ಬಿಡಬಹುದು. ಅನಾದಿಕಾಲ

ದಿಂದಲೂ ಜನ ಹೇಗಿದ್ದರೂ ಸತ್ತೇ ತೀರಬೇಕಾಗಿದೆ. ಆದರೆ ಮಾತ್ರ, ಜನರ ನಂಬಿಕೆಯನ್ನು ಕಳೆದುಕೊಂಡ ಯಾವ ಆಡಳಿತ ಪದ್ಧತಿಯೂ ಊರ್ಜಿತವಾಗಲಾರದು" ಎಂದ.

೧೫೭

**ಛಿಯಿ** ಸಂಸ್ಥಾನದ ಮಾಂಡಳಿಕನಾದ **ಛಿಂಗ್** ಎಂಬವನು ಆಡಳಿತದ ಕಲೆಗಾರಿಕೆಯನ್ನು ಕುರಿತು ಕಾಂಫ್ಯೂಷನನ್ನು ಪ್ರಶ್ನಿಸಿದ. ಅವಕ್ಕೆ ಕಾಂಫ್ಯೂಷ "ರಾಜ ರಾಜನ ಕರ್ತವ್ಯವನ್ನೂ ಪ್ರಜೆ ಪ್ರಜೆಯ ಕರ್ತವ್ಯವನ್ನೂ ತಂದೆ ತಂದೆಯ ಕರ್ತವ್ಯವನ್ನೂ ಮಗ ಮಗನ ಕರ್ತವ್ಯವನ್ನೂ ನಡೆಸಲಿ" ಎಂದ. ಅದಕ್ಕೆ ಆ ಮಾಂಡಳಿಕ "ಬಲು ಒಳ್ಳೆಯ ಉತ್ತರ! ರಾಜನೂ ಪ್ರಜೆಯೂ ತಂದೆಯೂ ಮಗನೂ ತಮ್ಮ ತಮ್ಮ ಕರ್ತವ್ಯಗಳನ್ನು ನಡೆಸಿದ ಹೊರತು, ದೇಶದಲ್ಲಿ ಎಷ್ಟೇ ಧಾನ್ಯ ತುಂಬಿದ್ದರೂ ನನಗೆ ತಿನ್ನುವುದಕ್ಕೆ ಏನೂ ಸಿಕ್ಕಲಾರದು" ಎಂದ.

೧೫೮

**ಸು ಛಾಂ** ಆಡಳಿತದ ಕಲೆಯನ್ನು ಕುರಿತು ಪ್ರಶ್ನಿಸಿದಾಗ, ಗುರು "ಆಡಳಿತದ ತತ್ತ್ವಗಳನ್ನು ಸಾವಧಾನವಾಗಿ ತಿಳಿದುಕೊಂಡು, ಆತ್ಮಸಾಕ್ಷಿಯಾಗಿ ಅದನ್ನು ಆಚರಣೆಯಲ್ಲಿ ತನ್ನಿ" ಎಂದ

೧೫೯

**ಸು ಲು** ಆಡಳಿತದ ಕಲೆಯನ್ನು ಕುರಿತು ಸಲಹೆ ಕೇಳಿದಾಗ, ಗುರು "ನೀನೆ ಮುಂದಾಳಾಗು, ಎಚ್ಚರ

ತಪ್ಪದೆ ದುಡಿಯುವುದರಲ್ಲಿ ದಾರಿ ತೋರಿಸು" ಎಂದ. ಇನ್ನೊಂದು ಸಲಹೆ ಬೇಕೆಂದು ಕೇಳಲು, "ಸಹನೆಯಿಂದ, ಆಯಾಸಗೊಳ್ಳದೆ ದುಡಿ" ಎಂದ.

೧೬೦

**ಛಿ ಕಾಂಗ್ ಸು** ಎಂಬವನನ್ನು ದರೋಡೆಗಾರರು ಹಿಡಿಸಿದಾಗ, ಅವನು ಕಾಂಫ್ಯೂಷನ ಬುದ್ಧಿವಾದವನ್ನು ಕೇಳಿದ ಅದಕ್ಕೆ ಕಾಂಫ್ಯೂಷ "ನೀನು ನಿನ್ನ ಅತಿಯಾಸೆಯನ್ನು ನಿಯಮಿಸಿಕೊಳ್ಳಬಲ್ಲೆಯಾದರೆ, ಈ ಕಳ್ಳತನವೆಲ್ಲ ನಿಲ್ಲುವುದು. ನೀನು ಬಹುಮಾನ ಕೊಡುವುದಾದರೂ ಯಾರೂ ಕಳ್ಳತನಕ್ಕೆ ಕೈಹಾಕರು" ಎಂದ.

೧೬೧

**ಛಿ ಕಾಂಗ್ ಸು** ಆಡಳಿತದ ಪದ್ಧತಿಯನ್ನು ಕುರಿತು ಕಾಂಫ್ಯೂಷನನ್ನು ಪ್ರಶ್ನಿಸಿದಾಗ, ಗುರು "ಆಡಳಿತವೆಂದರೆ ನೇರವಾಗಿರುವುದೇ. ನೀನು ಪ್ರಜೆಗಳನ್ನು ನೇರವಾಗಿ ನಡಸಿದರೆ, ಆ ದಾರಿ ಬಿಟ್ಟು ಹೆಜ್ಜೆಯಿಡಲು ಯಾವನಿಗೆ ಧೈರ್ಯ ಬಂದೀತು?" ಎಂದ.

೧೬೨

**ಛಿ ಕಾಂಗ್ ಸು** ಆಡಳಿತ ಪದ್ಧತಿಯನ್ನು ಕುರಿತು ಕಾಂಫ್ಯೂಷನ ಬಳಿ "ದೇಶದಲ್ಲಿ ಸುವ್ಯವಸ್ಥೆಯನ್ನು ಸ್ಥಾಪಿಸುವುದಕ್ಕೋಸ್ಕರ ನೀತಿ ನಿಯಮಗಳಿಗೆ ವಿರೋಧವಾಗಿ ನಡೆದವರನ್ನು ಮರಣಕ್ಕೆ ಗುರಿಪಡಿಸುವುದು ಅಗತ್ಯವಲ್ಲವೆ? ಎಂದು ಕೇಳಿದಾಗ, ಗುರು "ನಿಮ್ಮ ಆಡಳಿತ ಪದ್ಧತಿಯಲ್ಲಿ ಮರಣದಂಡನೆಯ ಅಗತ್ಯವೇನಿದೆ? ಒಳ್ಳೆಯ ದಾರಿ ಹಿಡಿಯಬೇಕೆಂದು

ನಿಮಗೆ ಮನಃಪೂರ್ವಕವಾಗಿ ಇಷ್ಟವಿದೆಯೆಂಬುದು ತಿಳಿದರೆ, ನಿಮ್ಮ ಪ್ರಜೆಗಳೂ ಹಾಗೆಯೇ ಒಳ್ಳೆಯವರಾಗುತ್ತಾರೆ. ಆಳುವ ಅರಸನ ಶೀಲ ಗಾಳಿ ಇದ್ದ ಹಾಗೆ; ಜನಗಳದು ಹುಲ್ಲು ಇದ್ದ ಹಾಗೆ. ಗಾಳಿ ಬೀಸಿದಾಗ ಹುಲ್ಲು ಬಗ್ಗುವುದು ಅವರ ಸ್ವಭಾವ” ಎಂದ.

೧೬೩

ಛಿ ಎಂಬ ಕುಲಕ್ಕೆ ಮುಖ್ಯ ಅಮಾತ್ಯನಾದ **ಛುಂಗ್ ಕುಂಗ್** ಎಂಬವನು ಆಡಳಿತವನ್ನು ಕುರಿತು ಸಲಹೆ ಕೇಳಿದಾಗ, ಗುರು “ನಿನ್ನ ಕೈಕೆಳಗಿನವರಿಗೆ ಕೈ ತುಂಬ ಕೆಲಸ ಕೊಡು, ಸಣ್ಣ ಪುಟ್ಟ ತಪ್ಪುಗಳನ್ನು ಗಮನಿಸದಿರು, ಅರ್ಹರಾದವರನ್ನೂ ಶಕ್ತರಾದವರನ್ನೂ ಮೇಲಿನ ಅಧಿಕಾರಗಳಿಗೆ ನಿಯಮಿಸು' ಎಂದ. ಅದಕ್ಕೆ **ಛುಂಗ್ ಕುಂಗ್** “ಹಾಗೆ ಅರ್ಹರಾದವರನ್ನು ಕಂಡುಕೊಳ್ಳುವುದು ಹೇಗೆ? ಮಿಕ್ಕವರನ್ನು ಬಿಟ್ಟು ಅವರನ್ನೇ ಆಯುವುದು ಹೇಗೆ?” ಎಂದು ಕೇಳಲು, ಗುರು “ನಿನಗೆ ತಿಳಿದವರನ್ನು ಆರಿಸಿಕೊಂಡು. ಮೇಲಿನ ಸ್ಥಾನದಲ್ಲಿ ನಿಯಮಿಸು. ನಿನಗೆ ತಿಳಿಯದೆ ನಿಂತುಹೋದವರ ಹಕ್ಕುಗಳನ್ನು ಇತರರು ನಿನ್ನ ಮುಂದೆ ತಂದು ತಿಳಿಸದೆ ಬಿಡುವರೆ?” ಎಂದ.

೧೬೪

ಗುರು ಹೇಳಿದ: “ಆಳುವವನು ತಾನು ಋಜುವಾಗಿದ್ದರೆ, ಅವನ ಪ್ರಜೆಗಳು ಯಾರ ಆಜ್ಞೆಯೂ ಇಲ್ಲದೆ ತಮ್ಮ ಕರ್ತವ್ಯವನ್ನು ತಾವಾಗಿಯೇ ನೆರವೇರಿಸುವರು. ಅವನು ತಾನು ಋಜುವಾಗಿಲ್ಲದಿದ್ದರೆ, ಅವನು ಏನೇ ಆಜ್ಞೆ ಮಾಡಿದರೂ ಅವರು ಅದನ್ನು ನಡಸುವುದಿಲ್ಲ.”

೧೬೫

**ಷೆ** ಎಂಬ ಪ್ರಾಂತದ ಮಾಂಡಳಿಕನು ಒಳ್ಳೆಯ ಆಡಳಿತದ ಲಕ್ಷಣಗಳನ್ನು ಕುರಿತು ಕೇಳಿದಾಗ, ಗುರು "ಯಾವ ಆಡಳಿತದ ಅಡಿಯಲ್ಲಿ ಇರುವವರು ಸುಖವಾಗಿರುವರೋ, ಯಾವ ಆಡಳಿತವು ದೂರದಲ್ಲಿರುವವರನ್ನು ಆಕರ್ಷಿಸುವುದೋ ಆ ಆಡಳಿತವೇ ಒಳ್ಳೆಯದು" ಎಂದ

೧೬೬

**ಸು ಲು** ಆಳುವ ಅರಸನನ್ನು ಹೇಗೆ ಸೇವಿಸಬೇಕೆಂದು ಪ್ರಶ್ನಿಸಿದಾಗ, ಗುರು "ಮುಚ್ಚುಮರೆ ಬೇಡ ಅವನನ್ನು ಪ್ರತಿಭಟಿಸಬೇಕಾಗಿ ಬಂದರೆ, ಬಹಿರಂಗವಾಗಿ ಪ್ರತಿಭಟಿಸು" ಎಂದ.

೧೬೭

ಗುರು ಹೇಳಿದ: "ಆಳುವ ಅರಸನ ಸೇವೆ ಮಾಡುವಾಗ, ಸೇವೆಯೊಂದನ್ನೇ ಮೊದಲು ಗಮನಿಸಿ, ಸೇವೆಯ ಪ್ರತಿಫಲವನ್ನು ಎರಡನೆಯದಾಗಿ ಮಾಡಿಕೊ."

೧೬೮

**ಸು ಷಿಯ** ಎಂಬವನು ಆಡಳಿತ ಪದ್ಧತಿಯನ್ನು ಕುರಿತು ಕೇಳಿದಾಗ, ಗುರು "ಆತುರದಿಂದ ಕೆಲಸ ಮಾಡಲು ಯತ್ನಿಸಬೇಡ. ಸಣ್ಣ ಲಾಭಗಳಲ್ಲಿ ಕಣ್ಣಿಡಬೇಡ. ಆತುರದಲ್ಲಿ ಮಾಡಿದುದು ಸಮರ್ಪಕವಾಗಿ ಆಗುವುದಿಲ್ಲ. ಸಣ್ಣ ಲಾಭಗಳನ್ನು ಗಮನಿಸಿದರೆ, ಮಹಾಕಾರ್ಯಗಳು ನೆರವೇರದೆಯೆ ನಿಂತುಬಿಡುತ್ತವೆ" ಎಂದ.

೧೬೯

ಗುರು ಒಂದು ಸಲ **ವೀ** ಪ್ರಾಂತಕ್ಕೆ ಹೋದಾಗ **ಜನ್ ಯು** ಆತನ ರಥ ನಡಸುತ್ತಿದ್ದ. ಗುರು "ಇಲ್ಲಿಯ ಪ್ರಜಾಸಮುದಾಯ ಎಷ್ಟು ಸಮೃದ್ಧವಾಗಿದೆ!" ಎಂದ. "ಪ್ರಜಾಸಮುದಾಯ ಇಷ್ಟು ತುಂಬಿರುವಾಗ ಮುಂದೆ ಮಾಡಬೇಕಾದ್ದೇನು?" ಎಂದ **ಜನ್ ಯು.** "ಅವರನ್ನು ಹಣವಂತರನ್ನಾಗಿ ಮಾಡಬೇಕು" ಎಂದ ಕಾಂಫೂಷ. "ಹಣವಂತರನ್ನಾಗಿ ಮಾಡಿದ ಮೇಲೆ?" "ವಿದ್ಯಾವಂತರನ್ನಾಗಿ ಮಾಡಬೇಕು" ಎಂದ ಗುರು.

೧೭೦

ಗುರು ಹೇಳಿದ: "ಜನರು ಒಂದು ನಿಶ್ಚಿತವಾದ ದಾರಿಯನ್ನು ಅನುಸರಿಸುವಂತೆ ಮಾಡುವುದು ಸಾಧ್ಯ. ಆದರೆ ಏಕೆ ಅನುಸರಿಸಬೇಕೆಂದು ಅವರು ತಿಳಿಯುವಂತೆ ಮಾಡುವುದು ಸಾಧ್ಯವಿಲ್ಲ."

೧೭೧

**ಸು ಲು** "ನೀನು ಆಡಳಿತದ ಸೂತ್ರಗಳನ್ನು ವಹಿಸಬೇಕೆಂದು ವೀ ಪ್ರಾಂತ್ಯದ ಅರಸ ಕಾದಿದ್ದಾನೆ. ನೀನು ಆಚರಣೆಗೆ ತರುವ ಮೊದಲ ಸುಧಾರಣೆ ಯಾವುದು?" ಎಂದು ಕೇಳಿದ. ಅದಕ್ಕೆ ಗುರು "ಪದಗಳನ್ನು ವಿವರಿಸಿ, ಅವುಗಳನ್ನು ಸ್ಪಷ್ಟವಾಗಿ ಮಾಡುವುದೇ ನನ್ನ ಮೊದಲ ಕೆಲಸ" ಎಂದ. "ಓ, ಹಾಗೇನು? ಇಂಥ ಬಳಸಾದ ದಾರಿಯಿಂದ ಏನನ್ನು ಸರಿಪಡಿಸಲು ಸಾಧ್ಯ?" ಎಂದ **ಸು ಲು.** ಅದಕ್ಕೆ ಗುರು "ಏನು, ನಡತೆ ತಿಳಿಯದವನು ನೀನು! ತನಗೆ ತಿಳಿಯದ ವಿಷಯವನ್ನು

ಕುರಿತು ಪಂಡಿತನಾದವನು ಏನೂ ತೀರ್ಮಾನ ಹೇಳದೆ ತಡೆಯುತ್ತಾನೆ. ಪದಗಳಿಗೆ ಸರಿಯಾದ ವಿವರಣೆ ಕೊಡದೆ ಇದ್ದರೆ, ಪದಗಳಿಗೂ ಪದಾರ್ಥಗಳಿಗೂ ಹೊಂದಿಕೆಯಾಗುವುದಿಲ್ಲ. ಪದಗಳು ಪದಾರ್ಥಗಳೊಡನೆ ಹೊಂದದೆ ಹೋದರೆ, ಸಾರ್ವಜನಿಕ ಕಾರ್ಯ ಪೂರೈಸದೆ ಹೋಗುತ್ತದೆ. ಸಾರ್ವಜನಿಕ ಕಾರ್ಯ ಪೂರೈಸದೆ ಹೋದರೆ, ವ್ಯವಸ್ಥೆಯೂ ಸಾಮರಸ್ಯವೂ ಅಭಿವೃದ್ಧಿಯಾಗುವುದಿಲ್ಲ. ವ್ಯವಸ್ಥೆಯೂ ಸಾಮರಸ್ಯವೂ ಅಭಿವೃದ್ಧಿಯಾಗದಿದ್ದರೆ, ನ್ಯಾಯವೂ ಧರ್ಮವೂ ಸಫಲವಾಗುವುದಿಲ್ಲ. ಜನ ಕೈಕಾಲು ಆಡಿಸುವುದು ಕೂಡ ಅಸಾಧ್ಯವಾಗಿಬಿಡುತ್ತದೆ. ಆದ ಕಾರಣ, ಪಂಡಿತನಾದವನು ತನ್ನ ಮಾತನ್ನು ನಿಯಂತ್ರಿಸಲು ಸೂತ್ರಗಳನ್ನು ರಚಿಸಿಕೊಳ್ಳುತ್ತಾನೆ; ತನ್ನ ಕಾರ್ಯಗಳನ್ನು ನಿಯಂತ್ರಿಸಲು ಮಾತನ್ನು ರಚಿಸಿಕೊಳ್ಳುತ್ತಾನೆ; ಅವನು ಎಂದಿಗೂ ಮನಸ್ಸಿಗೆ ಬಂದಂತೆ ಮಾತುಗಳನ್ನು ಆರಿಸುವುದಿಲ್ಲ." ಎಂದ.

೧೭೨

**ಲು** ಸಂಸ್ಥಾನದ **ಟಿಂಗ್** ಎಂಬ ಅರಸನು "ಒಂದು ದೇಶವನ್ನು ಅಭಿವೃದ್ಧಿಸ್ಥಿತಿಗೆ ತರುವ ಯಾವುದಾದರೂ ಒಂದು ವಾಕ್ಯವಿದೆಯೆ?" ಎಂದು ಕೇಳಿದ. ಅದಕ್ಕೆ ಕಾಂಫ್ಯೂಷ "ಯಾವ ಒಂದು ವಾಕ್ಯಕ್ಕೂ ಅಂತಹ ಗುಣವಿದೆಯೆಂದು ನಿರೀಕ್ಷಿಸಬಾರದು. ಆದರೆ 'ಒಳ್ಳೆಯ ದೊರೆಯಾಗಿರುವುದು ಕಷ್ಟ; ಒಳ್ಳೆಯ ಮಂತ್ರಿಯಾಗಿರುವುದು ಸುಲಭವಲ್ಲ' ಎಂದು ಒಂದು ಸಾಮತಿಯಿದೆ.

ರಾಜನಾಗಿರುವದರ ಕಷ್ಟವನ್ನು ಅರಿತುಕೊಂಡವನು ಒಂದು ವಾಕ್ಯದಿಂದಲೇ ತನ್ನ ದೇಶದ ಅಭಿವೃದ್ಧಿಯನ್ನು ಸಂಪಾದಿಸಿದಂತೆ ಆಯಿತೆನ್ನಬಹುದಲ್ಲವೆ ? " ಎಂದ. ಪುನಃ ಆ ಅರಸ "ಒಂದು ದೇಶವನ್ನು ಹಾಳುಮಾಡುವುದಕ್ಕೆ ತಕ್ಕ ಯಾವುದಾದರೂ ಒಂದು ವಾಕ್ಯವಿದೆಯೆ?" ಎಂದು ಕೇಳಿದ. ಅದಕ್ಕೆ ಕಾಂಫೂಷ "ಯಾವ ಒಂದೇ ವಾಕ್ಯದಲ್ಲೂ ಅಂತಹ ಶಕ್ತಿಯಿಲ್ಲ ಆದರೆ, 'ಅರಸನಾಗಿ ಆಳುವುದರಲ್ಲಿ ನನಗೇನೂ ಸಂತೋಷವಿಲ್ಲ ; ನನ್ನ ಇಷ್ಟವನ್ನು ಯಾರೂ ವಿರೋಧಿಸುವುದಿಲ್ಲವೆಂದು ಮಾತ್ರ ನನಗೆ ಸಂತೋಷ' ಎಂದು ಒಂದು ಸಾಮತಿಯಿದೆ. ಈಗ, ಅರಸನ ಸಂಕಲ್ಪ ಒಳ್ಳೆಯದಾದರೆ, ಅದನ್ನು ಯಾರೂ ವಿರೋಧಿಸದಿದ್ದರೆ, ಎಲ್ಲವೂ ಒಳ್ಳೆಯದೇ ಆಯಿತು ; ಆದರೆ ಅವನ ಸಂಕಲ್ಪ ಒಳ್ಳೆಯದಲ್ಲದಿದ್ದರೆ, ಆದರೂ ಅದನ್ನು ಯಾರೂ ಪ್ರತಿಭಟಿಸದಿದ್ದರೆ, ಅವನು ಒಂದೇ ವಾಕ್ಯದಿಂದ ತನ್ನ ದೇಶದ ಹಾನಿಯನ್ನು ಸಾಧಿಸಿದಂತೆ ಆಯಿತೆನ್ನಬಹುದಲ್ಲವೇ ?" ಎಂದ.

೧೭೩

"ಮನುಷ್ಯನಾದವನು ತನ್ನ ಹೃದಯವನ್ನು ಸುಧಾರಿಸಬಲ್ಲವನಾದರೆ ರಾಜ್ಯದ ಆಡಳಿತಪದ್ಧತಿಯಲ್ಲಿ ಅವನು ಭಾಗವಹಿಸಲು ಏನು ಅಡ್ಡಿ ? ಆದರೆ, ತನ್ನ ಹೃದಯವನ್ನು ಸುಧಾರಿಸುವುದೇ ಅವನಿಗೆ ಅಸಾಧ್ಯವಾದರೆ, ಇತರರನ್ನು ಸುಧಾರಿಸುವ ಗೊಡವೆ ಅವನಿಗೇಕೆ ?" ಎಂದ ಕಾಂಫೂಷ.

೧೭೪

ಗುರು ಹೇಳಿದ: "ಅರಸನು ಆತ್ಮಸಂಯುಮದ ತತ್ತ್ವವನ್ನು ಪಾಲಿಸಿದರೆ, ಪ್ರಜೆಗಳು ಅವನ ಆಜ್ಞೆಗೆ ವಿಧೇಯರಾಗಿರುವರು."

## ಶಿಷ್ಯಾಗ್ರಣಿ ಸು ಲು

**ಸು ಲು** ಒಬ್ಬ ಸೈನಿಕ. ಅವನು ಮೊದಲ ಬಾರಿ ಕಾಂಫ್ಯೂಷನ ಬಳಿ ಬಂದಾಗ, ಗುರು "ನಿನಗೆ ಅತಿಪ್ರಿಯ ವಾದ ವಸ್ತು ಯಾವುದು?" ಎಂದು ಕೇಳಿದ. **ಸು ಲು** "ನನಗೆ ಬಹು ಪ್ರಿಯುವಾದದ್ದು ನನ್ನ ಉದ್ದವಾದ ಕತ್ತಿ" ಎಂದ. "ನಿನಗೆ ಈಗ ಇರುವ ಶಕ್ತಿಸಾಮರ್ಥ್ಯ ಗಳನ್ನು ವಿದ್ಯೆಯಿಂದ ಸಂಸ್ಕಾರಗೊಳಿಸಿದರೆ ನೀನು ಉತ್ತಮನಾಗುತ್ತೀಯೆ" ಎಂದು ಗುರು ಹೇಳಿದ. ಆದಕ್ಕೆ **ಸು ಲು** "ದಕ್ಷಿಣದ ಪರ್ವತಗಳಲ್ಲಿ ಒಂದು ತೆರದ ಬಿದಿರು ಇದೆ. ಅದು ಸ್ವಭಾವತಃ ನೇರವಾದದ್ದು, ಅದನ್ನು ಬಗ್ಗಿಸಬೇಕಾಗಿಲ್ಲ. ಅದನ್ನು ಕತ್ತರಿಸಿ ಕೈಗೆತ್ತಿ ಕೊಂಡರೆ, ಖಡ್ಗಮೃಗದ ಚರ್ಮವನ್ನೂ ಭೇದಿಸ ಬಹುದು. ವಿದ್ಯೆಯ ಅವಶ್ಯಕತೆಯೆಲ್ಲಿಂದ ಬಂತು?" ಎಂದ. ಆದಕ್ಕೆ ಗುರು "ಸರಿಯೆ. ಆದರೆ, ಅದನ್ನು ಸೀಳಿ, ಆದಕ್ಕೆ ಗರಿ ಕಟ್ಟಿ, ಮುಳ್ಳು ಸಿಕ್ಕಿಸಿ, ಮೊನೆ ಮಾಡಿದರೆ, ಅದು ಇನ್ನೂ ಆಳವಾಗಿ ಪ್ರವೇಶಿಸುವುದಲ್ಲವೆ?" ಎಂದ. **ಸು ಲು** ಆ ಮಾತಿನ ಅರ್ಥವನ್ನು ತಿಳಿದು, ಮನಃ ಪೂರ್ವಕವಾಗಿ ಕಾಂಫ್ಯೂಷನ ಕಾಲಬಳಿ ಕಲಿಯಲು ಒಪ್ಪಿದ.

Printed by U. Narasimha Mallya,
Proprietor, B. B. D. Power Press, Bangalore City

## ಜಿ. ಪಿ ರಾಜರತ್ನಂ

### ಅವರ ಹೊಸ ಪುಸ್ತಕಗಳು

---

| | | | | | |
|---|---|---|---|---|---|
| ೧ | ಕೈಲಾಸ ಕಥನ | .... | ೧ | ೦ | ೦ |
| ೨ | ಕೈಲಾಸಂ . . . Calling ! | .... | ೦ | ೪ | ೦ |
| ೩ | ಕೋಳೀಕೆ ರಂಗ | .... | ೦ | ೩ | ೦ |
| ೪ | ಪರಗತಿ ಪಕ್ಷಿ | .... | ೦ | ೬ | ೦ |
| ೫ | ನಮ್ಮ ನಗೆಗಾರರು | .... | ೧ | ೪ | ೦ |
| ೬ | ಧರ್ಮಪದ | .... | ೧ | ೮ | ೦ |
| ೭ | ಹನಿಗಳು (ಹೊಸ ಆವೃತ್ತಿ) | .... | ೧ | ೦ | ೦ |
| ೮ | ಕೈಲಾಸಂ ಅವರ "ಏಕಲವ್ಯ" | .... | ೦ | ೧೦ | ೦ |

●

**ಸತ್ಯಶೋಧನ ಪುಸ್ತಕ ಭಂಡಾರ,**

ಕೋಟೆ, ಬೆಂಗಳೂರು.